ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 17 ಮಂಗಳವಾರ 2022

ಸಂಪುಟ: 43 | ಸಂಚಿಕೆ: 31 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೇಕೆದಾಟು, ಮಹದಾಯಿ, ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿ; ಎಸ್‌ಟಿ ಮೀಸಲಾತಿ ಹೆಚ್ಚಳದ ಮೂಲಕ ಮತದಾರರ ಒಲಿಸಿಕೊಳ್ಳಲು

ಬಿಜೆಪಿ ಬೊಂಬಾಟ್ ಪ್ಲಾನ್!

ಬೆಂಗಳೂರು, ಮೇ 16(ಕೆಎಂಶಿ)–ಮುಂಬರುವ ವಿಧಾನ ಸಭಾ ಚುನಾವಣೆಗೂ ಮುನ್ನವೇ ಮೇಕೆದಾಟು, ಮಹದಾಯಿ, ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳ ಮಾಡಿ ಮತದಾರರ ಮುಂದೆ ಹೋಗಲು ಆಡಳಿತಾರೂಢ ಬಿಜೆಪಿ ನಿರ್ಧರಿಸಿದೆ.

ಈ ಕಾರ್ಯಕ್ರಮಗಳಿಗೆ ಚುನಾವಣೆಗೂ ಮುನ್ನವೇ ಅನುಮತಿ ದೊರಕಿಸುವಂತೆ ರಾಜ್ಯ ಬಿಜೆಪಿ ಸರ್ಕಾರ ಮಾಡಿದ ಮನವಿಗೆ ಕೇಂದ್ರ ಸರ್ಕಾರ ಸಮ್ಮತಿ ಸೂಚಿಸಿದೆ.

ಈ ಮೂರೂ ನೀರಾವರಿ ಯೋಜನೆಗಳು ಒಂದಲ್ಲಾ ಒಂದು ಕಾನೂನಿನ ಸಂಘರ್ಷದಲ್ಲಿವೆ. ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ಪರ ವಕಾಲತ್ತು ವಹಿಸಿರುವ ಹಿರಿಯ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿ, ರಾಜ್ಯದ ಯೋಜನೆಗಳ ಕುರಿತಾಗಿ ವಿಚಾರಣೆ ಆರಂಭಿಸಿ, ಕರ್ನಾಟಕದ ಪರ ನ್ಯಾಯ ದೊರಕಿಸಿಕೊಳ್ಳುವ ಪ್ರಯತ್ನದಲ್ಲಿದೆ. ನ್ಯಾಯಾಲಯದ ತೀರ್ಪು ಹೊರಬರುತ್ತಿದ್ದಂತೆ ಯೋಜನೆಗಳಿಗೆ ಕೇಂದ್ರ ತನ್ನ ಅನುಮೋದನೆ ನೀಡಿ ರಾಜ್ಯ ಸರ್ಕಾರಕ್ಕೆ ಹಸಿರು ನಿಶಾನೆ ತೋರಿಸಲಿದೆ.

ಹಾಗೆಯೇ ಎಸ್‌ಟಿ ಸಮುದಾಯ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸೌಲಭ್ಯ ಕಲ್ಪಿಸಬೇಕೆಂದು ಬಹು ವರ್ಷಗಳಿಂದ ಹೋರಾಟ ನಡೆಸಿಕೊಂಡು ಬರುತ್ತಿದೆ. ತಮಗಿರುವ ಶೇ.3ರಷ್ಟು ಮೀಸಲಾತಿಯನ್ನು ಶೇ.7.5ಕ್ಕೆ ಹೆಚ್ಚಿಸಬೇಕೆಂದು ಬೇಡಿಕೆ ಇಟ್ಟು ಹೋರಾಟ ಮಾಡುತ್ತಿವೆ. ಚುನಾವಣೆಗೂ ಮುನ್ನವೇ ಇದಕ್ಕೂ ಕೇಂದ್ರ ಸರ್ಕಾರದ ಹಸಿರು ನಿಶಾನೆ ನೀಡಿ ಈ ಮತದಾರರನ್ನು ತಮ್ಮ ಪಕ್ಷದತ್ತ ಸೆಳೆದುಕೊಳ್ಳಲು ಬಿಜೆಪಿ ಮುಂದಾಗಿದೆ. ಆ ಮೂಲಕ ಹಳೆ ಮೈಸೂರು, ಮುಂಬೈ–ಕರ್ನಾಟಕ ಮತ್ತು ಹೈದ್ರಾಬಾದ್–ಕರ್ನಾಟಕದಲ್ಲಿ ಗಣನೀಯ ಸಂಖ್ಯೆಯ ಸೀಟುಗಳನ್ನು ಗೆಲ್ಲಲು ಬಯಸಿದೆ. ಬಿಜೆಪಿ ಉನ್ನತ ಮೂಲಗಳು ಈ ವಿಷಯ ತಿಳಿಸಿದ್ದು, ಮೇಕೆದಾಟು ಯೋಜನೆಗೆ ತಮಿಳುನಾಡು ಎಷ್ಟೇ ವಿರೋಧ ಮಾಡಿದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದೆಹಲಿಗೆ ಹೋದಾಗಲೆಲ್ಲ ಕಾನೂನು ತಜ್ಞರ ಜತೆ ಮಾತುಕತೆ ▶ 8ನೇ ಪುಟಕ್ಕೆ





> ಬಿಜೆಪಿ ನಡೆಸಿರುವ ಚುನಾವಣಾ ಸಮೀಕ್ಷೆಗಳ ಪ್ರಕಾರ, ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಗೆ ಹೋದರೆ ಬಿಜೆಪಿಗೆ 100 ಸ್ಥಾನಗಳು ಸಿಗಬಹುದು. ಹೀಗಾಗಿ ಹಳೆ ಮೈಸೂರು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಇನ್ನಷ್ಟು ಗಮನ ನೀಡಿ ಹೆಚ್ಚುವರಿ ಸೀಟುಗಳನ್ನು ಗಳಿಸುವುದು ಪಕ್ಷಕ್ಕೆ ತೀರಾ ಅನಿವಾರ್ಯವಾಗಿದೆ. ಇದರ ಭಾಗವಾಗಿ ಬೇರೆ ಪಕ್ಷಗಳಿಂದ ನಾಯಕರನ್ನು ಸೆಳೆಯುವುದು ಮತ್ತು ಮತದಾರರ ಮನ ಗೆಲ್ಲಬಲ್ಲ ಯೋಜನೆಗಳನ್ನು ಜಾರಿಗೊಳಿಸುವ ಕೆಲಸವಾಗಬೇಕು ಎಂದು ಸಮೀಕ್ಷೆ ಹೇಳಿದೆ.

ಸಭಾಪತಿ ಸ್ಥಾನಕ್ಕೆ ಹೊರಟ್ಟಿ ರಾಜೀನಾಮೆ

ಇಂದು ಬಿಜೆಪಿ ಸೇರ್ಪಡೆ



ಬೆಂಗಳೂರು: ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ಮತ್ತು ಪರಿಷತ್ ಸದಸ್ಯತ್ವಕ್ಕೆ ಬಸವರಾಜ ಹೊರಟ್ಟಿ ರಾಜೀನಾಮೆ ನೀಡಿದ್ದು, ನಾಳೆ ಬಿಜೆಪಿ ಸೇರುವುದಾಗಿ ಘೋಷಿಸಿದ್ದಾರೆ. ವಿಧಾನಸೌಧದ ಸಭಾಪತಿ ಕಚೇರಿಯಲ್ಲಿ ಗೋಷ್ಠಿ ನಡೆಸಿದ ಬಸವರಾಜ ಹೊರಟ್ಟಿ ಸಭಾಪತಿ ಸ್ಥಾನಕ್ಕೆ ಹಾಗೂ ಪರಿಷತ್ ಸದಸ್ಯತ್ವಕ್ಕೆ ▶ 6ನೇ ಪುಟಕ್ಕೆ

ಶುಕ್ರವಾರವೇ ಬೊಮ್ಮಾಯಿ ಸಂಪುಟ ಪುನರ್ರಚನೆ?

ಬೆಂಗಳೂರು: ಬಹು ನಿರೀಕ್ಷಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಂಪುಟ ಪುನರ್ರಚನೆ ಶುಕ್ರವಾರ (ಮೇ 20) ನಡೆಯಲಿದೆ ಎಂದು ನಂಬಲರ್ಹ ಮೂಲಗಳು ತಿಳಿಸಿವೆ.

ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆ ಸಂಬಂಧ ನಾಳೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ವಿಚಾರಣೆಗೆ ಬರಲಿದ್ದು, ಒಂದು ವೇಳೆ ಕೋರ್ಟ್ ಚುನಾವಣೆಗೆ ಹಸಿರು ನಿಶಾನೆ ತೋರಿದರೆ ಶೀಘ್ರವೇ ಅಧಿಸೂಚನೆ ಹೊರಡಿಸಬೇಕಾಗುತ್ತದೆ. ▶ 8ನೇ ಪುಟಕ್ಕೆ

ಜಿಪಂ, ತಾಪಂ ಚುನಾವಣೆ ಅರ್ಜಿ ಇಂದು ಹೈಕೋರ್ಟ್ ವಿಚಾರಣೆ



ಬೆಂಗಳೂರು, ಮೇ 16– ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆ ನಡೆಸುವ ಕುರಿತು ಸಲ್ಲಿಸಿರುವ ಮನವಿಯನ್ನು ಕರ್ನಾಟಕ ಹೈಕೋರ್ಟ್ ಮೇ 17ರಂದು ವಿಚಾರಣೆ ನಡೆಸಲಿದೆ.

ಈ ಸ್ಥಳೀಯ ಸಂಸ್ಥೆಗಳಿಗೆ ತಕ್ಷಣವೇ ಚುನಾವಣೆ ನಡೆಸುವಂತೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗವು (ಎಸ್‌ಇಸಿ) ನ್ಯಾಯಮೂರ್ತಿಗಳಾದ ಬಿ.ಎಂ. ಶ್ಯಾಮ್ ಪ್ರಸಾದ್ ಮತ್ತು ಎಂಜಿಎಸ್ ಕಮಲ್ ಅವರ ರಜಾಕಾಲದ ಪೀಠಕ್ಕೆ ಗುರುವಾರ ಮೆಮೊ ಸಲ್ಲಿಸಿತ್ತು. ಮಂಗಳವಾರ ಸುಪ್ರೀಂಕೋರ್ಟ್‌ನ ಆದೇಶದಿಂದಾಗಿ ತುರ್ತು ಪರಿಸ್ಥಿತಿ ಉಂಟಾಗಿದೆ ಎಂದು ಚುನಾವಣಾ ಆಯೋಗವು ಹೈಕೋರ್ಟ್‌ನಲ್ಲಿ ಮನವಿ ಮಾಡಿದೆ. ಚುನಾವಣಾ ಆಯೋಗದ ಪರ ವಾದ ಮಂಡಿಸಿದ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಅವರು, ಜಿಪಂ–ತಾಪಂ ಚುನಾವಣೆ ನಡೆಸುವ ಕುರಿತು ಚುನಾವಣಾ ಆಯೋಗ ಸಲ್ಲಿಸಿರುವ ಅರ್ಜಿಯು ಹೈಕೋರ್ಟ್‌ನಲ್ಲಿ ಬಾಕಿ ▶ 8ನೇ ಪುಟಕ್ಕೆ

ಲೈಂಗಿಕ ಕಿರುಕುಳ: ಶಾಲೆ ಆರಂಭದ ದಿನವೇ ಶಿಕ್ಷಕನ ಅಮಾನತು

ಕೆ.ಆರ್.ಪೇಟೆ, ಮೇ 16(ಶ್ರೀನಿವಾಸ್)– ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಶಾಲೆ ಪ್ರಾರಂಭವಾದ ದಿನವೇ ಶಿಕ್ಷಕನೋರ್ವ ಅಮಾನತು ಆದ ಘಟನೆ ಕೆಆರ್. ಪೇಟೆ ತಾಲೂಕು ಗಂಗನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಶಿಕ್ಷಕ ಚಂದ್ರಶೇಖರ್‌ನನ್ನು ವಶಕ್ಕೆ ಪಡೆದ ಪೊಲೀಸರು.

ಈ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಚಂದ್ರಶೇಖರ್ ಎಂಬಾತನೇ ಅಮಾನತಿಗೆ ಒಳಗಾದವನಾಗಿದ್ದು, ಈತ ಕಳೆದ ಮಾ.31ರಂದು ಶಾಲೆಯ ವಿದ್ಯಾರ್ಥಿನಿಯೋರ್ವಳನ್ನು ಶೌಚಾಲಯಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದನೆಂದು ಆರೋಪಿಸಲಾಗಿದೆ. ಇಂದು ಶಾಲೆ ಆರಂಭವಾಗಿದ್ದು, ಶಿಕ್ಷಕ ಶಾಲೆಗೆ ಬಂದಿರುವುದನ್ನು ತಿಳಿದ ವಿದ್ಯಾರ್ಥಿನಿ ▶ 8ನೇ ಪುಟಕ್ಕೆ

2023ರ ವಿಧಾನಸಭಾ ಚುನಾವಣೆ

ಹಳೇ ಮೈಸೂರು ಭಾಗದಲ್ಲಿ ಬಿಜೆಪಿಗೆ ಭರ್ಜರಿ ಗೆಲುವು



ಬೆಂಗಳೂರು, ಮೇ 16– 2023ರ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದಲ್ಲಿ ಭರ್ಜರಿ ಗೆಲುವು ಸಾಧಿಸುತ್ತೇವೆಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಳೇ ಮೈಸೂರು ಭಾಗದಲ್ಲಿ ಗೆಲುವು ಸಾಧಿಸುವುದು ಸವಾಲಾಗಿದ್ದು, ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಈ ಬಾರಿಯ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತೇವೆ. 2023ರ ಚುನಾವಣೆಗೆ ಮುಂಚಿತವಾಗಿ, ಪಕ್ಷ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವತ್ತ ಗಮನ ಹರಿಸುತ್ತಿದೆ. ಇತರೆ ಪಕ್ಷಗಳ ▶ 8ನೇ ಪುಟಕ್ಕೆ

ಬೆಂಗಳೂರು ನಗರ ಪೊಲೀಸ್ ನೂತನ ಆಯುಕ್ತರಾಗಿ ಪ್ರತಾಪ್ ರೆಡ್ಡಿ ನೇಮಕ



ಪ್ರತಾಪ್ ರೆಡ್ಡಿ

ಬೆಂಗಳೂರು: ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಸೇರಿದಂತೆ ಹಲವು ಐಪಿಎಸ್ ಅಧಿಕಾರಿಗಳನ್ನು ರಾಜ್ಯ ಸರ್ಕಾರ ಸೋಮವಾರ ವರ್ಗಾವಣೆ ಮಾಡಿದ್ದು, ನೂತನ ನಗರ ಪೊಲೀಸ್ ಆಯುಕ್ತರಾಗಿ ಪ್ರತಾಪ್ ರೆಡ್ಡಿ ಅವರನ್ನು ನೇಮಕ ಮಾಡಿದೆ. ಕಮಲ್ ಪಂತ್ ಅವರನ್ನು ಪೊಲೀಸ್ ತರಬೇತಿ ವಿಭಾಗದ ಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ಕೆಎಸ್‌ಆರ್‌ಪಿ ಎಡಿಜಿಪಿ ▶ 8ನೇ ಪುಟಕ್ಕೆ

ಮೈಸೂರಲ್ಲಿ ಶಾಲೆಗಳು ಪ್ರಾರಂಭ

ಧೋ ಎಂದು ಸುರಿವ ಮಳೆ ನಡುವೆಯೂ ಆರಂಭವಾಯ್ತು ಮಕ್ಕಳ ಶೈಕ್ಷಣಿಕ ಚಟುವಟಿಕೆ




ಮೈಸೂರಿನ ಇಟ್ಟಿಗೆಗೂಡು ಸರ್ಕಾರಿ ಶಾಲೆಯ ಶಿಕ್ಷಕರು ಮಕ್ಕಳಿಗೆ ಆರತಿ ಬೆಳಗಿ ಬರಮಾಡಿಕೊಂಡರು.

ಮೈಸೂರು, ಮೇ 16(ಆರ್‌ಕೆ)–ಬೆಳಗ್ಗೆಯೇ ಆರಂಭವಾಗಿ, ನಿರಂತರವಾಗಿ ಧೋ ಎಂದು ಸುರಿದ ಮಳೆ ನಡುವೆಯೂ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಶಾಲೆಗಳು ಇಂದು ಆರಂಭವಾದವು.

2022–23ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಿದ್ದು, ಶಾಲೆಗಳಿಗೆ ಉತ್ಸಾಹದಿಂದ ಮಕ್ಕಳು ಹಾಜರಾದರು. ಮೊದಲ ದಿನವಾದ ಇಂದು ಬಹುತೇಕ ಶಾಲೆಗಳನ್ನು ತಳಿರು–ತೋರಣ, ರಂಗೋಲಿಯಿಂದ ಶೃಂಗರಿಸಿ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು ಮಕ್ಕಳನ್ನು ಪ್ರೀತಿಯಿಂದ ಬರಮಾಡಿಕೊಂಡರು. ಪೋಷಕರೂ, ಎಲ್ಲಾ ರೀತಿಯಲ್ಲೂ ಅಣಿಗೊಳಿಸಿ ತಮ್ಮ ಮಕ್ಕಳನ್ನು ವಾಹನಗಳಲ್ಲಿ ▶ 6ನೇ ಪುಟಕ್ಕೆ

ಶೀಘ್ರದಲ್ಲೇ ಪಠ್ಯ ಪುಸ್ತಕ, ಸಮವಸ್ತ್ರ, ಸೈಕಲ್ ವಿತರಣೆ



ಬೆಂಗಳೂರು: ರಾಜ್ಯದಲ್ಲಿ ಶೈಕ್ಷಣಿಕ ವರ್ಷ ಆರಂಭಗೊಂಡಿದ್ದು, ಶಾಲೆಗೆ ಆಗಮಿಸಿರುವ ಮಕ್ಕಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಭ ಕೋರಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಹಳ ದಿನಗಳ ನಂತರ ಶಾಲೆ ಆರಂಭವಾಗುತ್ತಿದೆ. ಶಿಕ್ಷಣ ಇಲಾಖೆ ಎಲ್ಲಾ ಸಿದ್ಧತೆ ಮಾಡಿಕೊಂಡಿದೆ. ಮಕ್ಕಳಿಗೆ ಒಳ್ಳೆಯ ವಾತಾವರಣ ▶ 6ನೇ ಪುಟಕ್ಕೆ

ನಾಲೆಗೆ ಹಾರಿದ ಕಾರು

ಪಾಂಡವಪುರ ಸಿಪಿಐ, ಕಾನ್ಸ್‌ಟೇಬಲ್ ಅದೃಷ್ಟವಶಾತ್ ಪಾರು







ಮಳವಳ್ಳಿ,ಮೇ 16–ಚಾಲಕನ ನಿಯಂತ್ರಣ ತಪ್ಪಿದ ಕಾರು ನಾಲೆಗೆ ಹಾರಿದ ಪರಿಣಾಮ ಪಾಂಡವಪುರ ಸರ್ಕಲ್ ಇನ್ಸ್‌ಪೆಕ್ಟರ್ ಪ್ರಭಾಕರ್ ಮತ್ತು ಕಾರು ಚಾಲನೆ ಮಾಡುತ್ತಿದ್ದ ಕಾನ್ಸ್‌ಟೇಬಲ್ ಹೇಮಂತ್ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಳವಳ್ಳಿ–ಮದ್ದೂರು ರಸ್ತೆಯ ಕಾಳಕೆಂಪನದೊಡ್ಡಿ ಗೇಟ್ ಬಳಿ ಸೋಮವಾರ ಸಂಜೆ ಸಂಭವಿಸಿದೆ. ▶ 8ನೇ ಪುಟಕ್ಕೆ

ಇಂದು ಮೈಸೂರು ಅರಮನೆ ಆವರಣದ ಶ್ರೀ ಲಕ್ಷ್ಮೀರಮಣಸ್ವಾಮಿ ಬ್ರಹ್ಮೋತ್ಸವ



ಮೈಸೂರು, ಮೇ 16– ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ಮೈಸೂರು ಅರಮನೆ ಆವರಣದಲ್ಲಿರುವ ಶ್ರೀ ಲಕ್ಷ್ಮೀರಮಣಸ್ವಾಮಿಯವರ ಬ್ರಹ್ಮೋತ್ಸವವು ನಾಳೆ (ಮೇ 17) ಬ್ರಹ್ಮರಥೋತ್ಸವ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಗ್ಗೆ 11.12ರಿಂದ 11.52ರವರೆಗೆ ಉತ್ಸವಗಳು ನಡೆಯುತ್ತವೆ. ಮೇ 18ರ ಬುಧವಾರ ರಾತ್ರಿ ನಿತೋತ್ಸವ, ಮೇ 19ರ ಗುರುವಾರ ಬೆಳಗ್ಗೆ ಅವಭೃಥೋತ್ಸವ, ರಾತ್ರಿ ಧ್ವಜಾರೋಹಣ, ಮೇ 20ರ ಶುಕ್ರವಾರ ಬೆಳಗ್ಗೆ ಮಹಾಭಿಷೇಕ, ರಾತ್ರಿ ದ್ವಾದಶರಾಧನ ಕಾರ್ಯಕ್ರಮಗಳು ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶೇಷ ಮೀಸಲು ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ

ಮೈಸೂರು, ಮೇ 16– ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವತಿಯಿಂದ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಮೈಸೂರಿನ 5ನೇ ಪಡೆ, ಮತ್ತು ತುಮಕೂರಿನ 12ನೇ ಪಡೆ ವಿಶೇಷ ಮೀಸಲು ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮವನ್ನು ಮೇ 19ರಂದು ಗುರುವಾರ ಬೆಳಗ್ಗೆ 8 ಗಂಟೆಗೆ ನಗರದ 5ನೇ ಪಡೆ, ಕೆ.ಎಸ್.ಆರ್.ಪಿ ಕವಾಯತು ಮೈದಾನದಲ್ಲಿ ಪಥಸಂಚಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯ ಮೀಸಲು ಅಪರ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಗೌರವ ವಂದನೆ ಸ್ವೀಕರಿಸಿ, ಬಹುಮಾನ ವಿತರಿಸುವರು. ಪೊಲೀಸ್ ಮಹಾ ನಿರೀಕ್ಷಕ ಎಸ್.ರವಿ, ಪೊಲೀಸ್ ಉಪಮಹಾ ನಿರೀಕ್ಷಕ ಎಂ.ವಿ.ರಾಮಕೃಷ್ಣಪ್ರಸಾದ್ ಉಪಸ್ಥಿತರಿರುವರು ಎಂದು ಕಮಾಂಡೆಂಟ್ ಹಾಗೂ ಪ್ರಾಂಶುಪಾಲರಾದ ಆರ್.ಜನಾರ್ಧನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಮಾನ್ಯ ಪ್ರವೇಶ ಪರೀಕ್ಷೆ ವಿಶೇಷ ತರಗತಿ ಉದ್ಘಾಟನೆ



ಮೈಸೂರು, ಮೇ 16– ನಗರದ ಶಾರದಾ ವಿಲಾಸ ವಿದ್ಯಾಸಂಸ್ಥೆಯ ಆವರಣದಲ್ಲಿ ಇಂಜಿನಿಯರಿಂಗ್ ಹಾಗೂ ಮೆಡಿಕಲ್‌ಗೆ ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ.)ಯ ವಿಶೇಷ ಬೋಧನಾ ತರಗತಿಗಳನ್ನು ಉದ್ಘಾಟಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎನ್.ಐ.ಇ. ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಹಾಗೂ ಶಾರದಾ ವಿಲಾಸ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ.ಜಿ.ಎಸ್. ಸುರೇಶ್ ಜ್ಯೋತಿ ಬೆಳಗಿಸಿ, ಮಾತನಾಡಿ, ಸಾಮಾನ್ಯ ಪ್ರವೇಶ ಪರೀಕ್ಷೆ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಬಹಳ ಮಹತ್ವದ್ದು. ಕಡಿಮೆ ಕಾಲಾವಧಿಯಲ್ಲಿ, ಕಡಿಮೆ ಖರ್ಚಿನಲ್ಲಿ ಬೋಧನಾ ಸಲಕರಣೆಗಳೊಂದಿಗೆ ಎಲ್ಲರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯ ವಿಶೇಷ ತರಗತಿಗಳನ್ನು ಏರ್ಪಡಿಸಲಾಗಿದ್ದು, ಇದರ ಸದುಪಯೋಗವನ್ನು ಗ್ರಾಮೀಣ ಹಾಗೂ ನಗರ ಪ್ರದೇಶದ ವಿದ್ಯಾರ್ಥಿ ಸಮುದಾಯ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಮೊಬೈಲ್ ಹಾಗೂ ಟಿ.ವಿ ಬಿಟ್ಟು ವ್ಯಾಸಂಗದತ್ತ ಆಸಕ್ತಿ ಹಾಗೂ ಏಕಾಗ್ರತೆ ಬೆಳೆಸಿಕೊಂಡಾಗ ನಿರ್ದಿಷ್ಟ ಗುರಿಯನ್ನು ತಲುಪಬಹುದೆಂದು ಹೇಳಿದರು. ಗುರುವಿನ ಬೋಧನೆಗೆ ಸ್ಪಂದಿಸಿದರೆ ವಿದ್ಯಾರ್ಥಿಗಳ ಭವಿಷ್ಯ ಸುಗಮವಾಗುತ್ತದೆ. ಉಪನ್ಯಾಸಕರು ನೀಡುವ ಪ್ರಮುಖ ಅಂಶಗಳನ್ನು ಕಲಿಯಬೇಕೆಂದು ತಿಳಿಸಿ, ಎಷ್ಟೇ ಎತ್ತರಕ್ಕೆ ಬೆಳೆದರೂ ತಂದೆ–ತಾಯಿಗಳನ್ನು ಮರೆಯಬಾರದು. ಅವರಿಗೆ ಕೃತಜ್ಞರಾಗಿರಬೇಕೆಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಗ್ರೂಪ್ ಕ್ಯಾಪ್ಟನ್ ಎಸ್.ಆರ್.ಚಾರ್ ಮಾತನಾಡಿ, ಸಾಮಾನ್ಯ ಪ್ರವೇಶ ಪರೀಕ್ಷೆಯು ಓದಿಗಿಂತ ಬುದ್ಧಿವಂತಿಕೆ ಹಾಗೂ ಚಾಣಾಕ್ಷತೆ ಬಹಳ ಪ್ರಮುಖವಾದುದು. ಕಡಿಮೆ ಸಮಯದಲ್ಲಿ ಹೆಚ್ಚು ಅಂಕಗಳನ್ನು ಪಡೆಯಲು ಬಹು ಆಯ್ಕೆ ಪ್ರಶ್ನೆಗಳು ಅನುಕೂಲವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಭೌತಶಾಸ್ತ್ರ ಹಾಗೂ ಗಣಿತ ಶಾಸ್ತ್ರದ ಬಗ್ಗೆ ಹೆಚ್ಚು ಒಲವನ್ನು ತೋರಿಸಬೇಕೆಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿ ಸಮುದಾಯಕ್ಕೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕಕುಮಾರ್, ಅಧ್ಯಾಪಕ ವೃಂದ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಸೋಮವಾರ ಶಾಲಾ ಆರಂಭದ ಹಿನ್ನೆಲೆಯಲ್ಲಿ ಮೈಸೂರು ತಾಲೂಕು ಕೆ.ಹೆಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸಿ, ಆಕರ್ಷಕ ಕಲಿಕಾ ವಾತಾವರಣ ಸೃಷ್ಟಿಸಲಾಗಿತ್ತು. ಮೈಸೂರು ಜಿಲ್ಲಾ ಅಕ್ಷರ ದಾಸೋಹ ಶಿಕ್ಷಣಾ ಧಿಕಾರಿ ಲಿಂಗರಾಜಯ್ಯ ವಿದ್ಯಾರ್ಥಿಗಳಿಗೆ ಬಲೂನ್, ಲೇಖನಿ ನೀಡುವುದರ ಮೂಲಕ ಮಕ್ಕಳನ್ನು ಸ್ವಾಗತಿಸಿದರು. ಎಸ್‌ಡಿಎಂಸಿ ಉಪಾಧ್ಯಕ್ಷೆ ಗೀತಾ, ಮುಖ್ಯಶಿಕ್ಷಕಿ ಸುಮಂಗಲ, ಶಿಕ್ಷಕರಾದ ಕಲ್ಪನಾಬಾಯಿ, ನಾಗಮಣಿ, ವಚನ ಕುಮಾರಸ್ವಾಮಿ, ತಾರಾ, ಅಡುಗೆ ಸಿಬ್ಬಂದಿ ಉಪಸ್ಥಿತರಿದ್ದರು.

ಮೇ 19ರಂದು 'ಗಾನಾಮೃತ' ಸಂಗೀತ ಸಂಜೆ ಕಾರ್ಯಕ್ರಮ

ಮೈಸೂರು,ಮೇ 16(ಪಿಎಂ)– ದಟ್ಟಗಳ್ಳಿಯ ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ಸಂಸ್ಥೆಯ 8ನೇ ವಾರ್ಷಿಕೋತ್ಸವ ಅಂಗವಾಗಿ ಮೇ 19ರಂದು 'ಗಾನಾಮೃತ' ಶೀರ್ಷಿಕೆಯಡಿ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಗೀತ ನಿರ್ದೇಶಕ ಸ್ಟ್ಯಾನ್ಲಿ ಪಾರ್ಕರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5ಕ್ಕೆ ಕುವೆಂಪುನಗರದ ವೀಣೆ ಶೇಷಣ್ಣ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ವೈದ್ಯ ಡಾ.ಸುರೇಂದ್ರನ್, ಚಿರಾಗ್ ಆಡ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಎಸ್.ವಿವೇಕ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಸಂಸ್ಥೆಯ 29 ವಿದ್ಯಾರ್ಥಿಗಳು ಉತ್ತಮ ಅಭಿರುಚಿಯ ಕನ್ನಡ ಚಲನಚಿತ್ರ ಗೀತೆಗಳನ್ನು ಹಾಡಲಿದ್ದಾರೆ. ಪ್ರವೇಶ ಉಚಿತವಿದೆ ಎಂದು ತಿಳಿಸಿದರು. ವೈದ್ಯ ಡಾ.ಕೆ.ಎ.ಕೆ.ಸುರೇಂದ್ರನ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಫೆಲೋಶಿಪ್ ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿಲ್ಲ

ಮೈಸೂರು,ಮೇ 16(ಪಿಎಂ)– ನಗರದ ಭಾರತೀಯ ಭಾಷಾ ಸಂಸ್ಥಾನದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಕಾರ್ಯಗಳು ನಿಷ್ಕ್ರಿಯಗೊಂಡಿವೆ. ಜೊತೆಗೆ ಕಳೆದ ಏ.28ರಲ್ಲಿ ನಡೆದ ಫೆಲೋಶಿಪ್ ಸಂದರ್ಶನದಲ್ಲಿ ಹೊಸಬರಿಗೆ ಅವಕಾಶ ಕೊಟ್ಟು ಪ್ರತಿಭಾವಂತ ಹಿರಿಯ ಫೆಲೋಗಳನ್ನು ವೇಟಿಂಗ್ ಲಿಸ್ಟ್‌ನಲ್ಲಿರಿಸಿ ಕೈ ಬಿಡಲಾಗಿದೆ ಎಂದು ಸಾಹಿತಿ ಡಾ.ಎಂ.ಕನ್ನಿಕಾ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಹಾಲಿ ನಿರ್ದೇಶಕರ ಅದಕ್ಷತೆಯಿಂದ ಇಡೀ ಕೇಂದ್ರ ಅವ್ಯವಸ್ಥೆಯ ಆಗರವಾಗಿದೆ. ಕನ್ನಡ ಭಾಷಾ ಅಭಿವೃದ್ಧಿಯ ಕೆಲಸಗಳನ್ನು ನಿರ್ವಹಿಸದೆ 'ಭಕ್ತಿ ಪರಂಪರೆ' ಎಂಬ ಯೋಜನಾ ವಿಷಯಕ್ಕೆ ಒತ್ತು ಕೊಟ್ಟು ಕೇಂದ್ರದ ಹಣವನ್ನು ವ್ಯಯ ಮಾಡುತ್ತಿದ್ದಾರೆ. ಫೆಲೋಶಿಪ್ ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿ ನಡೆದಿಲ್ಲ. ನನ್ನನ್ನು ಒಳಗೊಂಡಂತೆ ಈಗಾಗಲೇ ಅಲ್ಲಿ ಫೆಲೋಗಳಾಗಿದ್ದ ಪ್ರತಿಭಾವಂತರಿಗೆ ಫೆಲೋಶಿಪ್ ನೀಡದೇ ವೇಟಿಂಗ್ ಲಿಸ್ಟ್‌ನಲ್ಲಿ ಹಾಕಿದ್ದಾರೆ ಎಂದು ದೂರಿದರು. ಲೇಖಕರಾದ ಯಶೋಧಾ ನಾರಾಯಣ್, ಪದ್ಮಾ ಗೋಷ್ಠಿಯಲ್ಲಿದ್ದರು.

ಹಿಂದುಳಿದ ವರ್ಗಗಳ ಸ್ಥಳೀಯ ಸಂಸ್ಥೆಗಳ ರಾಜಕೀಯ ಮೀಸಲಾತಿ ರಕ್ಷಣೆಗೆ ಆಗ್ರಹಿಸಿ

ನಾಳೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನಾ ಸಭೆ

ಮೈಸೂರು,ಮೇ 16(ಪಿಎಂ)– ಹಿಂದುಳಿದ ವರ್ಗಗಳ ಸ್ಥಳೀಯ ಸಂಸ್ಥೆಗಳ ರಾಜಕೀಯ ಮೀಸಲಾತಿ ರಕ್ಷಣೆಗೆ ಆಗ್ರಹಿಸಿ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿ ಸಂರಕ್ಷಣಾ ಹೋರಾಟ ವೇದಿಕೆ ವತಿಯಿಂದ ಮೇ 18ರಂದು ಮೈಸೂರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಪ್ರಧಾನ ಸಂಚಾಲಕ ಕೆ.ಎಸ್. ಶಿವರಾಮು ತಿಳಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿ ಸಂರಕ್ಷಣಾ ಹೋರಾಟ ವೇದಿಕೆ ಪ್ರಧಾನ ಸಂಚಾಲಕ ಕೆ.ಎಸ್.ಶಿವರಾಮು ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇಲ್ಲದ ಕಾರಣ ರಾಜಕೀಯವಾಗಿ ಈ ಸಮುದಾಯಗಳು ಹಿನ್ನಡೆ ಅನುಭವಿಸುತ್ತಿವೆ. ಈಗ ಸ್ಥಳೀಯ ಸಂಸ್ಥೆಗಳಲ್ಲಿಯೂ ಮೀಸಲಾತಿ ಕೈತಪ್ಪುವ ಆತಂಕ ಎದುರಾಗಿದೆ. ಹೀಗಾಗಿ ಮೀಸಲಾತಿ ರಕ್ಷಣೆಗೆ ಆಗ್ರಹಿಸಿ ಅಂದು ಬೆಳಗ್ಗೆ 11.30ಕ್ಕೆ ಪ್ರತಿಭಟನಾ ಸಭೆ ಏರ್ಪಡಿಸಲಾಗಿದೆ ಎಂದರು.

ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡಲು 3 ಹಂತದ ಪರಿಶೀಲನೆ ಮಾಡುವಂತೆ ಆದೇಶ ನೀಡಿರುವ ಸುಪ್ರೀಂಕೋರ್ಟ್, ಇದು ಸಾಧ್ಯವಾಗದೇ ಇದ್ದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು 'ಸಾಮಾನ್ಯ' ಎಂದು ಪರಿಗಣಿಸಿ ಚುನಾವಣೆ ನಡೆಸುವಂತೆ ಹೇಳಿದೆ. ಇದರಿಂದ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಚಕಾರ ಬಂದಿದೆ ಎಂದು ಆತಂಕ ವ್ಯಕ್ತಪಡಿಸಿದರು.

1993ರಲ್ಲಿ ಶೇ.33ರಷ್ಟಿದ್ದ ಹಿಂದುಳಿದ ವರ್ಗಗಳ ಮೀಸಲಾತಿ 2010ರ ನಂತರ ಶೇ.27ಕ್ಕೆ ಇಳಿಕೆಯಾಗಿದೆ. ಕೋರ್ಟ್‌ನ ಈಗಿನ ಆದೇಶದ ಹಿನ್ನೆಲೆಯಲ್ಲಿ ಸರ್ಕಾರ ಜವಾಬ್ದಾರಿಯುತವಾಗಿ ವರ್ತಿಸದಿದ್ದರೆ ಹಿಂದುಳಿದವರ ಮೀಸಲಾತಿ ಕೈತಪ್ಪಲಿದೆ ಎಂದರು.

ಹಿಂದುಳಿದ ವರ್ಗಗಳ ಮೀಸಲಾತಿ ವಿವಾದ ಇತ್ಯರ್ಥಗೊಳ್ಳುವವರೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಅಧಿಸೂಚನೆ ಹೊರಡಿಸಬಾರದು. ಸರ್ಕಾರ ಹಿಂದುಳಿದ ವರ್ಗಗಳ ಆಯೋಗ ವರದಿಯನ್ನು ಕೋರ್ಟ್‌ಗೆ ಸಲ್ಲಿಸಿದ್ದರೆ ಇಂತಹ ದುಸ್ಥಿತಿ ಎದುರಾಗುತ್ತಿರಲಿಲ್ಲ. ಸರ್ಕಾರ ಕೂಡಲೇ ವಿಶೇಷ ಅಧಿವೇಶನ ಕರೆದು 6 ತಿಂಗಳ ಕಾಲ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡಲು ವಿಧಾನಸಭೆಯಲ್ಲಿ ಮಸೂದೆ ಮಂಡಿಸಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಬೇಕು ಎಂದು ಆಗ್ರಹಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ, ವೇದಿಕೆ ಸಂಚಾಲಕರಾದ ಹೆಚ್.ಎಸ್.ಪ್ರಶಾಂತ್, ಎನ್.ಆರ್. ನಾಗೇಶ್, ಡಿ.ನಾಗಭೂಷಣ್, ರವಿನಂದನ್ ಮತ್ತಿತರರು ಗೋಷ್ಠಿಯಲ್ಲಿದ್ದರು.

> ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆಯ ಕುರಿತು ಮಾಜಿ ಮುಖ್ಯಮಂತ್ರಿಯೂ ಆದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೊರತುಪಡಿಸಿ ಯಾರೂ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿಲ್ಲ. ಎಲ್ಲಾ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ತಮ್ಮ ನಿಲುವನ್ನು ಘೋಷಿಸಬೇಕು. ಅಹಿಂದ ನಾಯಕರು ಪಕ್ಷಾತೀತವಾಗಿ ನಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕು. ಜೊತೆಗೆ ವಿಧಾನಸಭೆಯಲ್ಲಿ ಈ ವಿಚಾರವಾಗಿ ಧ್ವನಿ ಎತ್ತಬೇಕು. ಇಲ್ಲವಾದಲ್ಲಿ ಅವರ ಮನೆಯ ಎದುರು ಪ್ರತಿಭಟನೆ ನಡೆಸಲಾಗುವುದು.
>
> –ಕೆ.ಎಸ್.ಶಿವರಾಮು

ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು

ಮೈಸೂರು, ಮೇ 16– ಮನೆಯ ಬಾಗಿಲು ಮೀಟಿ ಚಿನ್ನಾಭರಣ ಹಾಗೂ ನಗದು ದೋಚಿದ ಘಟನೆ ಮೈಸೂರು ತಾಲೂಕು ಇಲವಾಲದಲ್ಲಿ ನಡೆದಿದೆ.

ಟೀ ಸ್ಟಾಲ್ ನಡೆಸುತ್ತಿರುವ ರಮೇಶ್ ಮತ್ತು ಅವರ ಪತ್ನಿ, ಮೇ 14ರಂದು ಬೆಳಗ್ಗೆ 8 ಗಂಟೆಗೆ ಮನೆ ಬೀಗ ಹಾಕಿಕೊಂಡು ಕೆಲಸಕ್ಕೆ ಹೋಗಿದ್ದಾರೆ. ಸಂಜೆ 5 ಗಂಟೆಗೆ ಹಿಂದಿರುಗಿದಾಗ ಮನೆ ಬಾಗಿಲು ಮೀಟಿ ಒಳನುಗ್ಗಿದ ಖದೀಮರು ಬೀರುವಿನಲ್ಲಿದ್ದ 12 ಸಾವಿರ ನಗದು ಹಾಗೂ 5 ಗ್ರಾಂ ಚಿನ್ನದ ಓಲೆ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲಾವಿದರ ದತ್ತಾಂಶ ಸಂಗ್ರಹ

ಮೈಸೂರು, ಮೇ 16– ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜಿಲ್ಲಾ ವ್ಯಾಪ್ತಿಯ ಸಾಹಿತಿಗಳು, ಕಲಾವಿದರು, ಸೇವಾ ಸಿಂಧು ಪೋರ್ಟಲ್ sevasindhu.karnataka.gov.in ಮೂಲಕ ಮಾಹಿತಿಯನ್ನು ನೋಂದಾಯಿಸಿಕೊಳ್ಳಬಹುದಾಗಿದ್ದು, ಅರ್ಜಿ ಸಲ್ಲಿಸಲು ಮೇ 30 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2513225 ಅನ್ನು ಸಂಪರ್ಕಿಸಬಹುದು

ವಿದ್ಯಾರ್ಥಿ ಮೊಬೈಲ್ ಎಗರಿಸಿದ ಖದೀಮರು

ಮೈಸೂರು, ಮೇ 16– ಮೊಬೈಲ್‌ನಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದ ವಿದ್ಯಾರ್ಥಿ ಕೈಯಿಂದ ಖದೀಮರು ಮೊಬೈಲ್ ಕಿತ್ತು ಪರಾರಿಯಾದ ಘಟನೆ ಮೈಸೂರಿನ ಎಲ್‌ಐಸಿ ಸರ್ಕಲ್ ಬಳಿ ಮೇ 14 ರಂದು ಸಂಜೆ ನಡೆದಿದೆ.

ಮೂಲತಃ ಮಹಾರಾಷ್ಟ್ರದವನಾಗಿದ್ದು, ಮೈಸೂರಿನ ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ಗಹಿರೋಡ್ ರೋಹಿತ್ ಅಂದು ಸಂಜೆ 5 ಗಂಟೆ ಸುಮಾರಿನಲ್ಲಿ ಎಲ್‌ಐಸಿ ಸರ್ಕಲ್‌ನಲ್ಲಿ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದ ವೇಳೆ ಸ್ಕೂಟರ್‌ನಲ್ಲಿ ಬಂದ ಇಬ್ಬರಲ್ಲಿ ಹಿಂಬದಿ ಸವಾರ ರೋಹಿತ್‌ನ ಮೊಬೈಲ್ ಕಸಿದು ಪರಾರಿಯಾಗಿದ್ದಾರೆ. ಈ ಸಂಬಂಧ ನರಸಿಂಹರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅತಿಕ್ರಮಿತ ನಿವೇಶನ ತೆರವಿಗೆ ಆಗ್ರಹಿಸಿ ಪೌರಕಾರ್ಮಿಕರ ಪ್ರತಿಭಟನೆ

ಮೈಸೂರು, ಮೇ 16(ಎಂಟಿವೈ)– ಮೈಸೂರು ತಾಲೂಕಿನ ಹೊಸಕೋಟೆ ಗ್ರಾ.ಪಂ ವ್ಯಾಪ್ತಿಯ ಆಲತ್ತೂರು ಗ್ರಾಮದಲ್ಲಿರುವ ಪೌರಕಾರ್ಮಿಕರ ಕುಟುಂಬಕ್ಕೆ ಸೇರಿದ ಜಾಗದಲ್ಲಿ ಕಸ ಸುರಿದು, ತಿಪ್ಪೆ ಮಾಡಿಕೊಂಡು ಅತಿಕ್ರಮಿಸಿರುವ ನಿವೇಶನ ತೆರವುಗೊಳಿಸುವಂತೆ ಒತ್ತಾಯಿಸಿ, ಮೈಸೂರು ಜಿ.ಪಂ ಕಚೇರಿ ಮುಂದೆ ಕರ್ನಾಟಕ ರಾಜ್ಯ ಪೌರಕಾರ್ಮಿಕರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.


ಮೈಸೂರು ತಾಲೂಕಿನ ಹೊಸಕೋಟೆ ಗ್ರಾಮ ಪಂಚಾಯಿತಿಗೆ ಸೇರಿದ ಆಲತ್ತೂರು ಗ್ರಾಮದಲ್ಲಿ ಕಳೆದ 70 ವರ್ಷದ ಹಿಂದೆ ಪೌರಕಾರ್ಮಿಕ ಕುಟುಂಬ ಕೃಷ್ಣಯ್ಯ–ರಂಗಮ್ಮ ಎಂಬುವರಿಗೆ ಮಂಜೂರಾಗಿರುವ ಜಾಗದಲ್ಲಿ ಗ್ರಾಮದ ನಿವಾಸಿಗಳಾದ ಲಿಂಗರಾಜು, ಶಿವರಾಜು, ಮಹೇಶ, ಸೋಮಣ್ಣ ಎಂಬುವರು ಕಸ ಸುರಿದು ತಿಪ್ಪೆ ಮಾಡಿ ಅತಿಕ್ರಮಿಸಲು ಯತ್ನಿಸುತ್ತಿದ್ದಾರೆ. ಇದನ್ನು ಪ್ರಶ್ನಿಸಿದ್ದಕ್ಕೆ ಪೌರಕಾರ್ಮಿಕರ ಕುಟುಂಬದವರ ಮೇಲೆ ಹಲ್ಲೆ ನಡೆಸಿದ್ದಾರೆ. ಅಲ್ಲದೆ ಅತಿಕ್ರಮಣ ತೆರವುಗೊಳಿಸಲು ಮುಂದಾದ ಪಿಡಿಓ ಅವರನ್ನು ಎಳೆದಾಡಿದ್ದಾರೆ. ಈ ಸಂಬಂಧ ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆರೋಪಿಸಿದರು.

ಕೂಡಲೇ ಅಕ್ರಮವಾಗಿ ಕಸ ಸುರಿದು ನಿರ್ಮಾಣವಾಗಿರುವ ತಿಪ್ಪೆ ತೆರವುಗೊಳಿಸಬೇಕು. ಹಲ್ಲೆ ಮಾಡಿದವರನ್ನು ಬಂಧಿಸಬೇಕು. ಜವಾಬ್ದಾರಿ ಮರೆತು ಉದಾಸೀನ ತೋರುತ್ತಿರುವ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ಶ್ರೀನಿವಾಸ್ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಬಳಿಕ ಜಿಲ್ಲಾ ಪಂಚಾಯಿತಿ ಸಿಇಓ ಬಿ.ಆರ್. ಪೂರ್ಣಿಮ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಡಿ.ಆರ್. ರಾಜು, ಕಾರ್ಯಾಧ್ಯಕ್ಷ ಮಂಚಯ್ಯ, ಉಪಾಧ್ಯಕ್ಷ ಜಿ.ಎನ್.ಚಾಮ, ಪ್ರಧಾನ ಕಾರ್ಯದರ್ಶಿ ದಿನೇಶ್ ಕುಮಾರ್, ಜಿಲ್ಲಾಧ್ಯಕ್ಷ ಚಿನ್ನಪ್ಪ, ಉಪಾಧ್ಯಕ್ಷ ಗೋಪಾಲ್, ಪ್ರಧಾನ ಕಾರ್ಯದರ್ಶಿ ಸ್ವಾಮಿನಾಥನ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಬಾಗಲಕೋಟೆಯಲ್ಲಿ ಮಹಿಳಾ ವಕೀಲೆ ಮೇಲೆ ಹಲ್ಲೆ

ಮೈಸೂರು ವಕೀಲರ ಸಂಘ ಖಂಡನೆ; 'ವಕೀಲರ ಸಂರಕ್ಷಣಾ ಕಾಯ್ದೆ' ಜಾರಿಗೆ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ ಮಾತನಾಡಿದರು.

ಮೈಸೂರು,ಮೇ 16(ಪಿಎಂ)– ಬಾಗಲಕೋಟೆಯಲ್ಲಿ ಮಹಿಳಾ ವಕೀಲೆ ಮೇಲಿನ ಹಲ್ಲೆಯನ್ನು ಖಂಡಿಸಿರುವ ಮೈಸೂರು ವಕೀಲರ ಸಂಘವು, 'ವಕೀಲರ ಸಂರಕ್ಷಣಾ ಕಾಯ್ದೆ' ಜಾರಿಗೊಳಿಸಲು ಸರ್ಕಾರಕ್ಕೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ವಕೀಲರಾದ ಸಂಗೀತಾ ಶಿಕ್ಕೇರಿ ಅವರ ಮೇಲೆ ಬಾಗಲಕೋಟೆ ನಗರದ ಮಹಾಂತೇಶ್ ಎಂಬ ವ್ಯಕ್ತಿ ನಡು ರಸ್ತೆಯಲ್ಲೇ ಅಮಾನುಷವಾಗಿ ಹಲ್ಲೆ ನಡೆಸಿದ್ದು, ಇದು ಖಂಡನೀಯ. ಈ ಘಟನೆಯಿಂದ ಇತರರಿಗೆ ರಕ್ಷಣೆ ಕೊಡಿಸುವ ವಕೀಲರಿಗೇ ರಕ್ಷಣೆ ಇಲ್ಲವೇ? ಎಂಬ ಪ್ರಶ್ನೆ ಮೂಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ವಕೀಲೆ ಸಂಗೀತಾ ಶಿಕ್ಕೇರಿ ಅವರ ಮೇಲೆ ಆರೋಪಿ ಹಲ್ಲೆ ಮಾಡಿದ್ದೇನೆ. ಮೈಸೂರು ವಕೀಲರ ಸಂಘದ ಯಾವುದೇ ವಕೀಲರು ಆರೋಪಿಗೆ ಸಹಕರಿಸಬಾರದು ಎಂದು ಸಂಘದಿಂದ ನಿರ್ಣಯ ಕೈಗೊಳ್ಳಲಾಗಿದೆ. ಇತ್ತೀಚೆಗೆ ವಕೀಲರ ಮೇಲಿನ ಹಲ್ಲೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ವೈದ್ಯರಿಗಿರುವಂತೆ ವಕೀಲರ ರಕ್ಷಣೆಗೆ ಸಂರಕ್ಷಣೆ ಕಾಯ್ದೆ ಜಾರಿಗೆ ರಾಜ್ಯ ಸರ್ಕಾರ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಸಂಘದ ಕಾರ್ಯದರ್ಶಿ ಎಸ್.ಉಮೇಶ್ ಮಾತನಾಡಿ, ವಕೀಲರಿಗೆ ಸೂಕ್ತ ರಕ್ಷಣೆ ಇಲ್ಲದಂತಾಗಿ ಭಯದ ವಾತಾವರಣ ಸೃಷ್ಟಿಯಾಗಿದೆ. ಬಾಗಲಕೋಟೆಯ ಪ್ರಕರಣದಲ್ಲಿ ಆರೋಪಿಗೆ ವಕೀಲರು ಯಾರೂ ಸಹಕಾರ ನೀಡದಂತೆ ರಾಜ್ಯ ವಕೀಲರ ಸಂಘವು ಸೂಚನೆ ನೀಡಬೇಕು ಎಂದು ಮನವಿ ಮಾಡಲಾಗಿದೆ ಎಂದರು. ಸಂಘದ ಖಜಾಂಚಿ ಹೆಚ್.ಎಸ್.ಮಹದೇವಸ್ವಾಮಿ, ಜಂಟಿ ಕಾರ್ಯದರ್ಶಿ ಜಿ.ಎಂ.ನಾಗೇಶ್, ಮಹಿಳಾ ಘಟಕದ ಜಂಟಿ ಕಾರ್ಯದರ್ಶಿ ಬಿ.ಎಸ್.ಭಾಗ್ಯಮ್ಮ ಸುದ್ದಿಗೋಷ್ಠಿಯಲ್ಲಿದ್ದರು.

ಕಿವುಡ ಮಕ್ಕಳ ಸರ್ಕಾರಿ ಶಾಲೆಗೆ ದಾಖಲಾತಿ ಆರಂಭ

ಮೈಸೂರು, ಮೇ 16–ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2022–23ನೇ ಸಾಲಿಗೆ ಮೈಸೂರಿನ ತಿಲಕ್‌ನಗರದಲ್ಲಿರುವ ಕಿವುಡ ಮಕ್ಕಳ ಸರ್ಕಾರಿ ಪಾಠ ಶಾಲೆಯು ಸರ್ಕಾರದ ಸಂಸ್ಥೆಯಾಗಿದ್ದು, ಕಿವುಡ ಬಾಲಕರಿಗೆ ಉಚಿತ ವಸತಿಯುತ ಹಾಗೂ ಬಾಲಕಿಯರಿಗೆ ಬಾಹ್ಯ ವಿದ್ಯಾರ್ಥಿನಿಯಾಗಿ ಉಚಿತವಾಗಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಬೋಧನಾ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.


ಶೈಕ್ಷಣಿಕ ಅವಧಿಯಲ್ಲಿ ಸರ್ಕಾರದ ವತಿಯಿಂದ ಕಿವುಡ ಬಾಲಕರಿಗೆ ಉಚಿತ ಊಟ–ವಸತಿ, ಹಾಸಿಗೆ, ಹೊದಿಕೆ, ಪಠ್ಯ ಪುಸ್ತಕಗಳು ಹಾಗೂ ವೈದ್ಯಕೀಯ ಮತ್ತಿತರ ಸೌಲಭ್ಯವನ್ನು ನೀಡಲಾಗುವುದು. 1ನೇ ತರಗತಿಯಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಿಶೇಷ ಶಿಕ್ಷಣದಲ್ಲಿ ತರಬೇತಿಯನ್ನು ಪಡೆದಂತಹ ನುರಿತ ಶಿಕ್ಷಕರಿಂದ ಪಠ್ಯ ಬೋಧನೆ ಮಾಡಲಾಗುವುದು. ಸಂಸ್ಥೆಯಲ್ಲಿ ಬಾಲಕ ಅಥವಾ ಬಾಲಕಿಯರಿಗೆ ವಿಶಾಲವಾದ ಆಟದ ಮೈದಾನವಿದ್ದು, ಎಲ್ಲಾ ವಿಧವಾದ ಉಪಕರಣಗಳನ್ನು ನೀಡಲಾಗುವುದರ ಜೊತೆಗೆ ಸ್ಮಾರ್ಟ್‌ಕ್ಲಾಸ್ ವಿಧಾನದ ಮೂಲಕ ಪಠ್ಯವನ್ನು ಉತ್ತಮವಾಗಿ ಬೋಧಿಸಲಾಗುತ್ತದೆ. ಈ ಎಲ್ಲ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು ಯಾವುದೇ ಶುಲ್ಕವನ್ನು ಪಾವತಿಸಬೇಕಾಗಿರುವುದಿಲ್ಲ.

ಶಾಲೆಗೆ ಶ್ರವಣದೋಷವುಳ್ಳ ಮಕ್ಕಳನ್ನು ಸೇರಿಸಲು ಇಚ್ಛಿಸುವ ತಂದೆ–ತಾಯಿ ಅಥವಾ ಪೋಷಕರು ಪ್ರವೇಶದ ಅರ್ಜಿಯನ್ನು ಶಾಲಾ ಕಚೇರಿಯಲ್ಲಿ ಮೇ 2ರಿಂದ ಉಚಿತವಾಗಿ ಪಡೆದು ಮಾನಸಗಂಗೋತ್ರಿಯ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಿಂದ ಪಡೆದ ವಾಕ್ ಶ್ರವಣ ದೋಷದ ದೃಢೀಕರಣ ಪತ್ರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ನೀಡಿರುವ ಅಂಗವಿಕಲರ ಗುರುತಿನ ಚೀಟಿ ಅಥವಾ ಯುಡಿಐಡಿ ಕಾರ್ಡ್, ಜನ್ಮ ದಿನಾಂಕದ ದೃಢೀಕರಣ ಪತ್ರ (ವರ್ಗಾವಣೆ ಪ್ರಮಾಣ ಪತ್ರ ಇದ್ದಲ್ಲಿ ಅವಶ್ಯಕತೆ ಇರುವುದಿಲ್ಲ), ಬೇರೆ ಶಾಲೆ ಅಥವಾ ಸಂಸ್ಥೆಯಿಂದ ಪ್ರವೇಶ ಬಯಸಿದ್ದಲ್ಲಿ ಶಾಲಾ ವರ್ಗಾವಣೆ ಪ್ರಮಾಣ ಪತ್ರ, ವರಮಾನ ಅಥವಾ ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರ ಹಾಗೂ ರೇಷನ್ ಕಾರ್ಡ್ ಪ್ರತಿಗಳು ವಿದ್ಯಾರ್ಥಿಯ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ಹಾಗೂ 6 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ದಾಖಲಾತಿಗಳೊಂದಿಗೆ ಸಲ್ಲಿಸಿ ಶಾಲೆಗೆ ದಾಖಲಾಗಬಹುದು. ಮಾಹಿತಿಗಾಗಿ ತಿಲಕ್‌ನಗರದಲ್ಲಿರುವ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ಅಧೀಕ್ಷಕರನ್ನು ಅಥವಾ ದೂ.ಸಂಖ್ಯೆ: 0821–2494104, ಮೊ.ಸಂಖ್ಯೆ: 94485890826 ಸಂಪರ್ಕಿಸಬಹುದು ಎಂದು ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಜಿಲ್ಲೆ ಮಾಸ್ಟರ್ ಅಥ್ಲೆಟಿಕ್ಸ್ ಅಸೋಸಿಯೇಶನ್ ವತಿಯಿಂದ ರನ್ ಫಾರ್ ಹೆಲ್ತ್ ಕಾರ್ಯಕ್ರಮಕ್ಕೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಈ ವೇಳೆ ಮುಡಾ ಸದಸ್ಯ ನವೀನ್‌ಕುಮಾರ್, ಅಸೋಸಿಯೇಷನ್‌ನ ಕಾರ್ಯದರ್ಶಿ ಪಿ.ಜಿ.ಸತ್ಯನಾರಾಯಣ್, ಉಪಾಧ್ಯಕ್ಷರಾದ ಯೋಗೇಂದ್ರ, ಸೋಮಶೇಖರ, ಮಹದೇವ್, ಚಂದ್ರಶೇಖರ್, ಸುಬ್ಬಣ್ಣ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.05.2022 ಮಂಗಳವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಪ್ರತಿಪತ್, ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಶ್ರೀಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಿಕ್ಷಣ ಮಹಾವಿದ್ಯಾಲಯ:** ರಾಜ್ಯ ಮಟ್ಟದ ಚರ್ಚಾ ಸ್ಪರ್ಧೆ ಹಾಗೂ ಪ್ರತಿಭಾ ಪುರಸ್ಕಾರ, ಉದ್ಘಾಟನೆ: ಶ್ರೀ ಕಾಗಿನೆಲೆ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಎಂ.ಪುಟ್ಟಬಸವೇಗೌಡ, ಪ್ರಾಸ್ತಾವಿಕ ಭಾಷಣ: ಹಿರಿಯ ವಿದ್ಯಾರ್ಥಿಗಳ ಸಂಘದ ಸಂಚಾಲಕ ಡಾ.ಶರತ್‌ಕುಮಾರ್, ಅಧ್ಯಕ್ಷತೆ : ಶ್ರೀ ಕಾಗಿನೆಲೆ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ.ವಿಶಾಲಾಕ್ಷಿ, ಸ್ಥಳ: ಕಾಲೇಜಿನ ಸಭಾಂಗಣ, ಕುವೆಂಪುನಗರ, ಬೆಳಗ್ಗೆ 9.45ಕ್ಕೆ.

■ **ಎಸ್. ನಿಜಲಿಂಗಪ್ಪ ಶುಗರ್ ಇನ್‌ಸ್ಟಿಟ್ಯೂಟ್, ಬೆಳಗಾವಿ :** ದಕ್ಷಿಣ ಕರ್ನಾಟಕಕ್ಕೆ ಭರವಸೆಯ ಕಬ್ಬಿನ ತಳಿಗಳು ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಎಸ್‌ಎನ್‌ಎಸ್‌ಐ ನಿರ್ದೇಶಕ ಡಾ. ಆರ್.ಬಿ. ಖಂದಗಾವೆ, ಮುಖ್ಯ ಅತಿಥಿಗಳು: ಡಾ. ವೆಂಕಟೇಶ್, ಡಾ. ಆರ್.ಎಂ. ಶಾಂತಿ, ವಿ.ಜೆ. ರವಿ, ಜಿ. ಶರವಣನ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ :** ಜಿಲ್ಲಾ ದಸಂಸ ಪದಾಧಿಕಾರಿಗಳ ಸರ್ವ ಸದಸ್ಯರ ಸಭೆ ಮತ್ತು ವಿಚಾರ ಮಂಥನ, ಉಪಸ್ಥಿತರು : ರಾಜ್ಯ ಸಂಚಾಲಕ ಲಕ್ಷ್ಮೀನಾರಾಯಣ ನಾಗವಾರ, ಸಾಹಿತಿ ಡಾ. ಎಸ್. ತುಕಾರಾಮ್, ಜನಾರ್ಧನ್, ಆರ್.ಎನ್. ದೊಡ್ಡಣ್ಣ, ವರದಯ್ಯ, ಸ್ಥಳ: ವಿಶ್ವ ಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಬೆಳಗ್ಗೆ 11.30ಕ್ಕೆ.

■ **ಜ್ಯೋತಿರ್ಗಮಯ ಸೇವಾ ಟ್ರಸ್ಟ್, ಹೆಣ್ಣು ಮಕ್ಕಳ ಉಚಿತ ವಿದ್ಯಾರ್ಥಿ ನಿಲಯ :** ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಮಹೋತ್ಸವ, ಅಧ್ಯಕ್ಷತೆ : ಔಷದ್ ಗ್ರೂಪ್ ಆಫ್ ಮೆಡಿಸಿನ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಚಂದ್ರಗುಪ್ತ ವಿ. ಜೈನ್, ಮುಖ್ಯ ಅತಿಥಿಗಳು : ಮೃಗಾಲಯ ಪ್ರಾಧಿಕಾರ ಸದಸ್ಯೆ ಜ್ಯೋತಿರೇಚಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಕುಮಾರ್, ಮೈಸೂರು ಆರ್ಟ್ ಗ್ಯಾಲರಿ ಸಂಸ್ಥಾಪಕ ಶಿವಲಿಂಗಪ್ಪ, ಸ್ಥಳ: ವಿದ್ಯಾರ್ಥಿ ನಿಲಯ ಆವರಣ, ರಾಮಾನುಜ ರಸ್ತೆ, ಸಂಜೆ 5.30ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವರ್ಲ್ಡ್ ಟೆಲಿಕಾಂ ಅಂಡ್ ಇನ್‌ಫರ್‌ಮೇಷನ್ ಸೊಸೈಟಿ ಡೇ ಕುರಿತು ಬಿಎಸ್‌ಎನ್‌ಎಲ್ ಡಿವಿಷನಲ್ ಇಂಜಿನಿಯರ್ ಪಿ.ವಿ. ಕೃಷ್ಣಕುಮಾರ್ ಅವರಿಂದ ಉಪನ್ಯಾಸ, ಗೌರವ ಅತಿಥಿಗಳು : ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ. ಗೋಪಿನಾಥ್, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಮತ್ತು 5.00 ಅಕ್ಷರ ಮೈಸೂರು ಅನ್ನದ ಸೂರು –ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು –ಪ್ರಸ್ತುತಿ– ಡಾ.ವಿ. ರಂಗನಾಥ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಪಿ.ಸುರಭಿ, ಜಯಂತಿ ವಿ.ಭಟ್, ವ್ಯಾಖ್ಯಾನ– ಡಾ.ಹೆಚ್.ಎಂ.ಕಲಾಶ್ರೀ, 7.15ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 9.00 ವೃತ್ತಿ ಮಾರ್ಗದರ್ಶನ–'ಮಾಲಿಕ್ಯುಲರ್ ಬಯಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶ ಕುರಿತು ಡಾ. ದೇವಕಿ ನೀರ್ಕಜೆ ಎಸ್. ಅವರೊಂದಿಗೆ ಮಾತುಕತೆ, 10.00 ವಿ.ವಂಶಿಧರ್ –ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ– ಆರ್.ಕೆ.ಶ್ರೀಕಂಠನ್, ವಾಣಿ ಜಯರಾಂ, 1.20 ಭಾವಗೀತೆ– ಜೆ.ಎನ್.ಧರಿತ್ರಿ, 3.00 ಆರ್.ಕೆ.ರಾಘವನ್–ವೀಣಾವಾದನ, 4.00 ಕಥಾ ಕಾಲಕ್ಷೇಪ, 6.50 ಕೃಷಿರಂಗ– ಕಿಸಾನ್‌ವಾಣಿ, ಆರ್ಥಿಕ ಅಭಿವೃದ್ಧಿಗಾಗಿ ತಂತ್ರಜ್ಞಾನದ ವಿನಿಮಯ ಕುರಿತು ಡಾ.ವಿಷ್ಣುವರ್ಧನ ಅವರೊಂದಿಗೆ ಸಂದರ್ಶನ, 9.30 ಉಷಾ ಆಚಾರ್–ಹಾಡುಗಾರಿಕೆ, 10.00 ಯಕ್ಷ ಸಂಪದ–ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪಾತ್ರ್ಯಕ್ಷಿಕೆ, ನಿರ್ಮಾಣ– ದಿವಾಕರ್ ಹೆಗಡೆ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರಲ್ಲಿ ಈ ಹಿಂದೆ ಪೊಲೀಸ್ ಆಯುಕ್ತರಾಗಿದ್ದ ಕಸ್ತೂರಿರಂಗನ್ ಅವರಿಗೆ ಹೃದಯಸ್ಪರ್ಶಿ ಅಭಿನಂದನೆ

ಅವರ ಅವಧಿಯಲ್ಲಿ ಪೊಲೀಸ್ ಇಲಾಖೆಗೆ ನೇಮಕಗೊಂಡವರಿಂದ ತಮ್ಮ ಆರಾಧ್ಯ ಅಧಿಕಾರಿಗೆ ಹೃತ್ಪೂರ್ವಕ ಕೃತಜ್ಞತೆ

ಮೈಸೂರು, ಮೇ 16(ಆರ್‌ಕೆ)– ದಕ್ಷ ಪೊಲೀಸ್ ಅಧಿಕಾರಿಯಾಗಿ ಕಾನೂನು–ಸುವ್ಯವಸ್ಥೆ, ಅಪರಾಧ ತಡೆಗೆ ಹಗಲಿರುಳು ಶ್ರಮಿಸಿದ್ದಲ್ಲದೆ, ಅರ್ಹರನ್ನು ಗುರುತಿಸಿ ಪೊಲೀಸ್ ಇಲಾಖೆಗೆ ಸೇರಲು ನೆರವಾಗುವ ಮೂಲಕ ಹಲವರ ಬಾಳಲ್ಲಿ ಬೆಳಕು ತಂದ ನಿವೃತ್ತ ಐಜಿಪಿ ಹೆಚ್.ಆರ್.ಕಸ್ತೂರಿರಂಗನ್ ಅವರನ್ನು ಮೈಸೂರಿನಲ್ಲಿ ಸೋಮವಾರ ಆತ್ಮೀಯವಾಗಿ ಅಭಿನಂದಿಸಲಾಯಿತು.

ಕಸ್ತೂರಿರಂಗನ್ ಅವರನ್ನು ಮೈಸೂರು ನಗರ ಪೊಲೀಸ್ ಅರ್ಹತೆ ಆಧರಿಸಿ ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಆಗಿ ನೇಮಕಗೊಂಡ 1993ನೇ ಸಾಲಿನ 300ಕ್ಕೂ ಹೆಚ್ಚು ಸಿಬ್ಬಂದಿ ಇಂದು ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಪೊಲೀಸ್ ಭವನದಲ್ಲಿ ಉದ್ಯೋಗಕ್ಕೆ ಸೇರಲು ನೆರವಾದ ಕಸ್ತೂರಿರಂಗನ್ ಅವರನ್ನು ಅದ್ಧೂರಿಯಾಗಿ ಅಭಿನಂದಿಸಿದರು. ಹಾರ ಹಾಕಿ, ಮೈಸೂರು ಪೇಟ ತೊಡಿಸಿ, ನೆನಪಿನ ಕಾಣಿಕೆ ಸಮರ್ಪಿಸುವ ಮೂಲಕ ಹೃದಯಸ್ಪರ್ಶಿ ಕೃತಜ್ಞತೆ ಸಮರ್ಪಿಸಿದರು.

ಇದಕ್ಕೂ ಮುನ್ನ ಪೊಲೀಸ್ ಭವನಕ್ಕೆ ಆಗಮಿಸಿದ ನಿವೃತ್ತ ಐಜಿಪಿ, ಐಪಿಎಸ್ ಅಧಿಕಾರಿ ಕಸ್ತೂರಿರಂಗನ್ ಅವರನ್ನು ಮಂಗಳ ವಾದ್ಯದೊಂದಿಗೆ ಬರಮಾಡಿಕೊಂಡ ಪೊಲೀಸ್ ಸಿಬ್ಬಂದಿ, ಎರಡೂ ಬದಿ ಸಾಲಾಗಿ ನಿಂತು ಸೆಲ್ಯೂಟ್ ಸಮರ್ಪಿಸಿದರು. ಹೆಜ್ಜೆ ಹೆಜ್ಜೆಗೂ ಹೂಮಳೆಗರೆದು 'ಅನ್ನದಾತನಿಗೆ ಜೈ' ಎಂದು ಘೋಷಣೆಯೊಂದಿಗೆ ವೇದಿಕೆಗೆ ಕರೆದೊಯ್ದರು. ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಕಸ್ತೂರಿ ರಂಗನ್ ಅವರ ಕಾಲು ಮುಟ್ಟಿ ನಮಸ್ಕರಿಸಿ, ಆಶೀರ್ವಾದ ಪಡೆದಿದ್ದು ವಿಶೇಷವಾಗಿತ್ತು.



ಮೈಸೂರಿನ ಪೊಲೀಸ್ ಭವನದಲ್ಲಿ ಸೋಮವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಹೆಚ್.ಆರ್. ಕಸ್ತೂರಿರಂಗನ್ ಅವರನ್ನು ಸನ್ಮಾನಿಸಲಾಯಿತು.(ಎಡದಿಂದ) ಡಿಸಿಪಿಗಳಾದ ಗೀತಾ ಪ್ರಸನ್ನ, ಪ್ರದೀಪ್ ಗುಂಟಿ, ಶಿವರಾಜು, ನಿವೃತ್ತ ಐಜಿಪಿ ಸೈಯದ್ ಉಲ್ಫತ್ ಹುಸೇನ್, ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಹಾಗೂ ನಿವೃತ್ತ ಡಿವೈಎಸ್ಪಿ ಪುಟ್ಟಸ್ವಾಮಿಗೌಡರನ್ನು ಚಿತ್ರದಲ್ಲಿ ಕಾಣಬಹುದು.

ಉದ್ಯೋಗ ಕಲ್ಪಿಸಿಕೊಟ್ಟು ಜೀವನಕ್ಕೆ ದಾರಿದೀಪವಾದ ಅಧಿಕಾರಿಯನ್ನು 29 ವರ್ಷಗಳ ನಂತರ ಹೃದಯಸ್ಪರ್ಶಿಯಾಗಿ ಅಭಿನಂದಿಸಿ, ಕೃತಜ್ಞತೆ ಸಲ್ಲಿಸಿದ್ದು ಮೈಸೂರಲ್ಲಿ ಇದೇ ಮೊದಲು. ಅಲ್ಲದೇ, ಕರ್ತವ್ಯ ವೇಳೆ ಅವರಲ್ಲಿದ್ದ ನಿಷ್ಠೆ, ಪ್ರಾಮಾಣಿಕತೆ, ದಕ್ಷತೆ ಹಾಗೂ ಸಾಧನೆಯನ್ನು ಸ್ಮರಿಸಿಕೊಂಡಿದ್ದು ಹಲವರಿಗೆ ಪ್ರೇರಣೆ ನೀಡಿತು. ಹೃದಯ ತುಂಬಿ ಆಡಿದ ನುಡಿಗಳೊಂದಿಗೆ ಭಾವನಾತ್ಮಕ ವಾತಾವರಣ ಸೃಷ್ಟಿಯಾಗಿದ್ದನ್ನು ಕಂಡು ಕಸ್ತೂರಿರಂಗನ್ ಅವರೂ ಭಾವುಕರಾದರು. ಆ ಕ್ಷಣದಲ್ಲಿ ಹೃದಯ ತುಂಬಿ ಮಾತೇ ಹೊರಡದೆ ಅವರ ಕಣ್ಣಂಚಿನಲ್ಲಿ ಆನಂದ ಬಾಷ್ಪ ಹೊಮ್ಮಿತು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಅಶೋಕಪುರಂ ಠಾಣೆ ಹೆಡ್ ಕಾನ್‌ಸ್ಟೇಬಲ್ ಮಹದೇವ, ಕಸ್ತೂರಿರಂಗನ್ ಅವರು ಮೈಸೂರು ನಗರ ಪೊಲೀಸ್ ಕಮಿಷನರ್ ಆಗಿ ಮಾಡಿದ ಸಾಧನೆ, ಅವರ ಕರ್ತವ್ಯ ನಿಷ್ಠೆ, ಅಧೀನ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಲಿಸಿದ ಶಿಸ್ತು, ಇಲಾಖೆಯಲ್ಲಿನ ಸುಧಾರಣೆ, ಅವರ ಮಾನವೀಯ ಗುಣ, ಕೋಮು ಗಲಭೆ ನಿಯಂತ್ರಣ, ರೌಡಿಗಳ ಅಟ್ಟಹಾಸ ನಿಗ್ರಹ, ಮೈಸೂರು ನಗರದ ಜನಸ್ನೇಹಿ ಕಾರ್ಯಗಳನ್ನು ಪ್ರಸ್ತಾಪಿಸಿದರು.

ಅದೇ ವೇಳೆ ಕಸ್ತೂರಿರಂಗನ್ ಅವರ ಅಧಿಕಾರಾವಧಿಯಲ್ಲಿ ಡಿಸಿಪಿಗಳಾಗಿ ಕರ್ತವ್ಯ ನಿರ್ವಹಿಸಿದ ಸೈಯ್ಯದ್ ಉಲ್ಫತ್ ಹುಸೇನ್ (ನಿವೃತ್ತ ಐಜಿಪಿ) ಹಾಗೂ ಕೇಶವಯ್ಯ ಅವರ ಸೇವೆಯನ್ನೂ ಸಿಬ್ಬಂದಿ ಸ್ಮರಿಸಿಕೊಂಡರು. ಕಸ್ತೂರಿ ರಂಗನ್ ಅವರೊಟ್ಟಿಗೆ ಸೈಯ್ಯದ್ ಉಲ್ಫತ್ ಹುಸೇನ್ ಹಾಗೂ ದಿವಂಗತ ಕೇಶವಯ್ಯನವರ ಪುತ್ರ, ಕೆ.ಆರ್. ಆಸ್ಪತ್ರೆ ಕಣ್ಣಿನ ವಿಭಾಗದ ಮುಖ್ಯಸ್ಥ ಡಾ.ಸತೀಶ್ ಅವರನ್ನೂ ಆತ್ಮೀಯವಾಗಿ ಅಭಿನಂದಿಸಿದರು. 1993ನೇ ಸಾಲಿನಲ್ಲಿ ನೇಮಕವಾಗಿ ಸೇವೆಯಿಂದ ನಿವೃತ್ತರಾಗಿರುವ 50 ಮಂದಿಯನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ನಗರದ ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಪ್ರದೀಪ್ ಗುಂಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ಎಂ.ಕೃಷ್ಣೇಗೌಡ, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ, ಸಿಎಆರ್ ಡಿಸಿಪಿ ಶಿವರಾಜು, ನಿವೃತ್ತ ಡಿವೈಎಸ್ಪಿ ಪುಟ್ಟಸ್ವಾಮಿಗೌಡ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿಜಯನಗರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಇಂದಿರಮ್ಮ, ಎಎಸ್‌ಐಗಳಾದ ವಿದ್ಯಾರಣ್ಯಪುರಂ ಠಾಣೆಯ ಮರಿಸ್ವಾಮಿ, ಸಿಸಿಬಿ ಘಟಕದ ಟಿ.ಆರ್.ಗಣೇಶ್, ಎಎಸ್‌ಐ ಮುರಳೀಧರ, ಕೆ.ಆರ್.ಠಾಣೆಯ ವಿನೋದ, ಎನ್.ಆರ್. ಠಾಣೆಯ ಶಿವರಾಮಚಂದ್ರ, ಕುವೆಂಪು ನಗರ ಠಾಣೆಯ ಡಿ.ರಾಜು, ಕೆ.ಆರ್.ಸಂಚಾರ ಠಾಣೆಯ ಕರುಣಾಕರ, ನಿವೃತ್ತ ಹೆಡ್ ಕಾನ್‌ಸ್ಟೇಬಲ್ ಕೇಶವಮೂರ್ತಿ, ಜಯಲಕ್ಷ್ಮೀಪುರಂ ಠಾಣೆ ಹೆಡ್ ಕಾನ್‌ಸ್ಟೇಬಲ್ ಡಿ.ಸುರೇಶ ಸೇರಿದಂತೆ ಹಲವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೋಮು ದಳ್ಳುರಿ ಶಮನಕ್ಕೆ ಕಸ್ತೂರಿರಂಗನ್ ಯಶಸ್ವಿ ತಂತ್ರ

ನನ್ನ ಜೊತೆಗೆ ಕೇಶವಯ್ಯರನ್ನು ಇಲ್ಲಿಗೆ ಕರೆಸಿಕೊಂಡರು: ಸೈಯ್ಯದ್ ಉಲ್ಫತ್ ಹುಸೇನ್



ಮೈಸೂರು, ಮೇ 16(ಆರ್‌ಕೆ)– ಕಸ್ತೂರಿರಂಗನ್ ಅವರು ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದಾಗ ಇಲ್ಲಿದ್ದ ಕೋಮು ದಳ್ಳುರಿಯನ್ನು ನಿಯಂತ್ರಿಸಲು ಪರಿಣಾಮಕಾರಿ ತಂತ್ರ ರೂಪಿಸಿದ್ದರು. ಆ ವೇಳೆ ಬೇರೆಡೆ ಇದ್ದ ಕೇಶವಯ್ಯ ಮತ್ತು ನನ್ನನ್ನು ಮೈಸೂರು ನಗರ ಡಿಸಿಪಿಗಳಾಗಿ ಕರೆಸಿಕೊಂಡರು ಎಂದು ನಿವೃತ್ತ ಐಜಿಪಿ ಸೈಯ್ಯದ್ ಉಲ್ಫತ್ ಹುಸೇನ್ ಸ್ಮರಿಸಿಕೊಂಡರು. 1993ರ ಅವಧಿಯಲ್ಲಿ ಮೈಸೂರು ಕೋಮು ಗಲಭೆಯಿಂದ ತತ್ತರಿಸುತ್ತಿತ್ತು. ಏನೇ ಮಾಡಿದರೂ ಶಮನವಾಗುತ್ತಿರಲಿಲ್ಲ. ನನ್ನನ್ನು ಮೈಸೂರಿಗೆ ವರ್ಗ ಮಾಡುತ್ತಾರೆಂಬ ವಿಷಯ ತಿಳಿದು, ನಾನು ಅಲ್ಲಿ ನನ್ನ ಸಂಬಂಧಿಕರು ಹಾಗೂ ಸ್ನೇಹಿತರಿರುವುದರಿಂದ ಕರ್ತವ್ಯ ನಿರ್ವಹಿಸಲು ಕಷ್ಟವಾಗಬಹುದು ಎಂದು ಸಬೂಬು ಹೇಳಿ ನುಣುಚಿಕೊಳ್ಳಲು ಪ್ರಯತ್ನಿಸಿದ್ದೆ ಎಂದರು.

ಆದರೆ ಆಯುಕ್ತರಾಗಿದ್ದ ಕಸ್ತೂರಿರಂಗನ್, ದಲಿತ ಸಮುದಾಯದ ಕೇಶವಯ್ಯ ಮತ್ತು ಮುಸ್ಲಿಂ ಸಮುದಾಯದ ನನ್ನನ್ನು ಗುರುತಿಸಿ ಕೋಮು ಘರ್ಷಣೆ ನಿಯಂತ್ರಿಸಲು ಅವರಿಬ್ಬರನ್ನೇ ಇಲ್ಲಿಗೆ ವರ್ಗಾವಣೆ ಮಾಡಬೇಕೆಂದು ಅಂದಿನ ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ವರ್ಗಾವಣೆ ಮಾಡಿಸಿದರು. ಆಗ ನಾನು ಅನಿವಾರ್ಯವಾಗಿ ಮೈಸೂರಿಗೆ ಬರಬೇಕಾಯಿತು. ನಂತರ ನಾವು ಕಸ್ತೂರಿರಂಗನ್ ಅವರ ಮಾರ್ಗದರ್ಶನದಲ್ಲಿ ಸಮರ್ಥವಾಗಿ ಕರ್ತವ್ಯ ನಿರ್ವಹಿಸಿದೆವು. ಯಶಸ್ವಿ ತಂತ್ರದಿಂದ ಮೈಸೂರಲ್ಲಿ ಕೋಮು ಸೌಹಾರ್ದ ಮೂಡಿತು. ಇದು ಕಸ್ತೂರಿ ರಂಗನ್ ಅವರ ದೂರದೃಷ್ಟಿಗೆ ಒಂದು ನಿದರ್ಶನ ಎಂದರು.

ರೌಡಿ ಪ್ರತಿಬಂಧಕ ದಳ ಬಂಧಿಸಿದ್ದ ರೌಡಿಗಳ ಪೈಕಿ ಅಂದಿನ ಸಚಿವರೊಬ್ಬರ ಬೆಂಬಲಿಗನಾಗಿದ್ದ ಯುವಕನಿದ್ದ. ಆಗ ಸಚಿವರು ನನಗೆ ಕರೆ ಮಾಡಿ, 'ಏನಪ್ಪಾ ನಮ್ಮ ಹುಡುಗನನ್ನು ಬಂಧಿಸಿದ್ದೀರಂತೆ, ಏನದು ಕೇಸು' ಎಂದರು. ಆಗ ನಾನು 'ನೋಡಿ ಸರ್, ಅವನ ವಿರುದ್ಧ ಇಷ್ಟೊಂದು ಪ್ರಕರಣಗಳಿವೆ, ಸಮಾಜದ ಹಿತದೃಷ್ಟಿಯಿಂದ ಕಾನೂನು ರೀತಿಯ ಕ್ರಮವಾಗಬೇಕು' ಎಂದು ಅವರಿಗೆ ಮನವರಿಕೆ ಮಾಡಿದೆ. ಅದಕ್ಕೆ 'ಆಯ್ತು' ಎಂದು ಹೇಳಿ, ಮತ್ತೆ ಮಾತು ಮುಂದುವರೆಸಿ 'ಆ ಹುಡುಗನ ತಾಯಿಯೇ ಊಟ–ತಿಂಡಿ ತಂದು ಕೊಡುತ್ತೇನೆಂದು ಕೇಳಿಕೊಂಡಿದ್ದಾರೆ, ಅದಕ್ಕಾದರೂ ಅವಕಾಶ ನೀಡಿ' ಎಂದು ಕೇಳಿದರು. ಅದಕ್ಕೆ ನಾವೂ ಸಹಕರಿಸಿದೆವು ಎಂಬುದನ್ನು ಹುಸೇನ್ ಸ್ಮರಿಸಿಕೊಂಡರು.

ತಾವು ಬೆಂಗಳೂರು ಉತ್ತರ ಡಿಸಿಪಿಯಾಗಿದ್ದಾಗ ಮಕ್ಕಳ ಅಪಹರಿಸಿ ಒತ್ತೆ ಹಣಕ್ಕೆ ಬೇಡಿಕೆ ಇಟ್ಟಿದ್ದ 6 ಪ್ರಕರಣ ನಡೆದವು. ಓರ್ವ ಮಹಿಳೆಯನ್ನು ತುಂಡು ತುಂಡಾಗಿ ಕತ್ತರಿಸಿ ತೋಟಗಾರಿಕೆ ವಿಶ್ವವಿದ್ಯಾನಿಲಯದ ಜಾಗದಲ್ಲಿ ಸಾಕ್ಷ್ಯ ಸಿಗದಂತೆ ಬಿಸಾಡಿದ್ದ ಪ್ರಕರಣ, ಶ್ರೀರಾಂಪುರದ ರೌಡಿಗಳ ಅಟ್ಟಹಾಸವನ್ನು ಬಗ್ಗುಬಡಿದ ಪ್ರಸಂಗಗಳನ್ನು ಸೈಯ್ಯದ್ ಉಲ್ಫತ್ ಹುಸೇನ್ ಇದೇ ವೇಳೆ ನೆನಪು ಮಾಡಿಕೊಂಡರು.

ವೃತ್ತಿಯಲ್ಲಿ ಶಿಸ್ತು, ನಿಷ್ಠೆ ಇಲ್ಲದೆ ಸುಧಾರಣೆ ನಿರೀಕ್ಷಿಸಲಾಗದು

ನಿವೃತ್ತ ಐಜಿಪಿ ಕಸ್ತೂರಿರಂಗನ್ ಕಿವಿಮಾತು

ಮೈಸೂರು, ಮೇ 16 (ಆರ್‌ಕೆ)– ವೃತ್ತಿಯಲ್ಲಿ ಶಿಸ್ತು ಹಾಗೂ ನಿಷ್ಠೆ ಇಲ್ಲದಿದ್ದರೆ ವ್ಯವಸ್ಥೆಯಲ್ಲಿ ಸುಧಾರಣೆ ನಿರೀಕ್ಷೆ ಮಾಡಲು ಸಾಧ್ಯವಿಲ್ಲ ಎಂದು ನಿವೃತ್ತ ಐಜಿಪಿ ಹೆಚ್.ಆರ್.ಕಸ್ತೂರಿರಂಗನ್ ಅಭಿಪ್ರಾಯಿಸಿದರು.

ಮೈಸೂರಿನ ಪೊಲೀಸ್ ಭವನದಲ್ಲಿ 1993ನೇ ಸಾಲಿನಲ್ಲಿ ನೇಮಕಗೊಂಡ ಪೊಲೀಸ್ ಸಿಬ್ಬಂದಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನೇಮಕಾತಿಯಲ್ಲಿ ಲಂಚಗುಳಿತನ ಇರಬಾರದು. ಎಸ್ಸಿ, ಎಸ್ಟಿ ಕಾಯ್ದೆ, ವರದಕ್ಷಿಣೆ ಕಿರುಕುಳದಂತಹ ಪ್ರಕರಣಗಳಲ್ಲಿ ಅತೀ ಹೆಚ್ಚು ಲಂಚ ಸಿಗುತ್ತದೆ ಎಂದು ಕರ್ತವ್ಯನಿಷ್ಠೆ ಮರೆಯಬಾರದು. ದುಡ್ಡು ಮಾಡುವ ಅಭ್ಯಾಸ ಕೊನೆಯಾಗಬೇಕು. ಬಾಕಿ ಪ್ರಕರಣಗಳು ನ್ಯಾಯಾಲಯಗಳಲ್ಲಿ ತ್ವರಿತವಾಗಿ ಇತ್ಯರ್ಥವಾದರೆ ಒಳ್ಳೆಯದು ಎಂದು ಹೇಳಿದರು.

ನಾನು ಸೇವೆಯಲ್ಲಿದ್ದಾಗ ಈಗಿರುವ ಕಲುಷಿತ ವಾತಾವರಣವಿದ್ದಿದ್ದರೆ ನಾನೂ ಸಹ ಮುಕ್ತವಾಗಿ ಕೆಲಸ ಮಾಡಿ, ಸುಧಾರಣೆ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ. ನಾನು ಮೈಸೂರು ಪೊಲೀಸ್ ಕಮಿಷ್ನರ್ ಆಗಿದ್ದಾಗ ನನ್ನೊಂದಿಗೆ ವೃತ್ತಿಯಲ್ಲಿ ತೊಡಗಿದ್ದ ಹಲವು ಕಾಣದ ಕೈಗಳು ಸಹಕರಿಸಿದವು. ಒಬ್ಬ ವ್ಯಕ್ತಿಯಿಂದ ವ್ಯವಸ್ಥೆಯಲ್ಲಿ ಬದಲಾವಣೆ ಹಾಗೂ ಸುಧಾರಣೆ ತರುವುದು ಸುಲಭದ ಮಾತಲ್ಲ. ಈ ಕಾಲದಲ್ಲಿ ವಾತಾವರಣ ಕಲುಷಿತವಾಗಿದೆ. ನಾನು ಸೇವೆಯಲ್ಲಿದ್ದಾಗ ಈಗಿನ ಲಂಚ, ಭ್ರಷ್ಟಾಚಾರ ಕೂಪ ಇದ್ದಿದ್ದರೆ ನನಗೂ ಕಷ್ಟವಾಗುತ್ತಿತ್ತು. ಎಲ್ಲದರಲ್ಲೂ ಹಸ್ತಕ್ಷೇಪವಿದ್ದರೆ ಧೈರ್ಯವಾಗಿ ಕರ್ತವ್ಯ ನಿರ್ವಹಿಸುವುದಾದರೂ ಹೇಗೆ? ಎಂದು ಕಸ್ತೂರಿರಂಗನ್ ಪ್ರಶ್ನಿಸಿದರು.

'ಪ್ರಭಾವ ಇರುವವರು ಶಿಫಾರಸ್ಸಿನಿಂದ ಒತ್ತಡ ತಂದು ಉದ್ಯೋಗ ಗಿಟ್ಟಿಸಿಕೊಳ್ಳುತ್ತಾರೆ. ಆದರೆ ಯಾರ ಬೆಂಬಲವಿಲ್ಲದ, ಲಂಚ ನೀಡಲು ಶಕ್ತಿ ಇಲ್ಲದ, ಯಾವುದೇ ರೀತಿಯ ಪ್ರಭಾವ ಇಲ್ಲದವರಿಗೂ ಪೊಲೀಸ್ ಇಲಾಖೆಯಲ್ಲಿ ಕೆಲಸ ಕೊಡಿಸಿ, ಹಲವು ಕುಟುಂಬಗಳಿಗೆ ದಾರಿದೀಪವಾಗಿದ್ದೀರಿ, ನಿಮಗೆ ಧನ್ಯವಾದಗಳು' ಎಂದು ಕೆಲವರು ನನ್ನ ಬಳಿ ಬಂದು ಹೇಳಿದರು. ಆದರೆ ವಿದ್ಯಾರ್ಹತೆ, ದೇಹದಾರ್ಢ್ಯತೆ ಜೊತೆಗೆ ಪೊಲೀಸ್ ಸಿಬ್ಬಂದಿಯಾಗಿ ಕೆಲಸ ಮಾಡುವ ಆಸಕ್ತಿ ಇರುವವರನ್ನು ಗುರುತಿಸಿ, ಅಂತಹವರನ್ನು ನಾನು ಇಲಾಖೆಗೆ ನೇಮಕ ಮಾಡಿದೆ ಅಷ್ಟೇ. ಪೊಲೀಸ್ ಇಲಾಖೆ ನಮಗೆ ಎಲ್ಲಾ ರೀತಿಯ ಸೌಲಭ್ಯ ನೀಡುತ್ತಿದೆ. ಹಾಗಾಗಿ ನಿಷ್ಠೆ ಹಾಗೂ ಶಿಸ್ತಿನಿಂದ ಕರ್ತವ್ಯ ನಿರ್ವಹಿಸಬೇಕೆಂಬ ಭಾವನೆ ಎಲ್ಲಾ ಸಿಬ್ಬಂದಿಯಲ್ಲಿರಬೇಕು ಎಂದು ಅವರು ಕಿವಿಮಾತು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ಐಜಿಪಿ ಸೈಯ್ಯದ್ ಉಲ್ಫತ್ ಹುಸೇನ್, ನಾನಾ ತೊಂದರೆ, ನೋವಿನಿಂದ ಬರುವಂತಹ ನಾಗರಿಕರ ದೂರನ್ನು ಮಾನವೀಯ ನೆಲೆಗಟ್ಟಿನಲ್ಲಿ ಸಮಾಧಾನದಿಂದ ಆಲಿಸಿ, ಅವರ ಸಮಸ್ಯೆಯನ್ನು ಪರಿಹರಿಸಿದಾಗ ನೊಂದವರ ಮುಖದಲ್ಲಿ ನಗು ಅರಳುತ್ತದೆ. ಅದಕ್ಕಿಂತ ಮಿಗಿಲಾದ ಸಂತೋಷ, ತೃಪ್ತಿ ಬೇರೆ ಯಾವುದರಲ್ಲೂ ಸಿಗುವುದಿಲ್ಲ ಎಂದರು.

ಕಸ್ತೂರಿರಂಗನ್ ಅವರು ಮೈಸೂರಲ್ಲಿ ಕಮಿಷ್ನರ್ ಆಗಿದ್ದಾಗ ಅವರ ಮಾರ್ಗದರ್ಶನದಲ್ಲಿ ರಚಿಸಿದ್ದ 'ರೌಡಿ ಪ್ರತಿಬಂಧಕ ದಳ' ಅಪರಾಧ ಕೃತ್ಯಗಳನ್ನು ತಹಬದಿಗೆ ತಂದಿತ್ತು. ಕೋಮು ದಳ್ಳುರಿ ದಮನ, ಒಂದೇ ಗ್ಯಾಂಗ್ ಕಳವು ಮಾಡಿದ 392 ಚಿನ್ನದ ಸರ ಅಪಹರಣ ಪ್ರಕರಣ ಪತ್ತೆ ಹಚ್ಚಿ, 8.5 ಕೆಜಿ ಆಭರಣ ವಶಪಡಿಸಿಕೊಂಡಿದ್ದು, ಮೂರು ತಿಂಗಳಲ್ಲಿ 250 ರೌಡಿಗಳ ಬಂಧನ ಸೇರಿದಂತೆ ಹಲವಾರು ಕಾರ್ಯಾಚರಣೆ ನಡೆದಿತ್ತು. ದಳದ ಕೆ.ಎಸ್. ತಮ್ಮಯ್ಯ, ಟಿ.ಕೆ.ಧರ್ಮೇಶ್, ಪುಟ್ಟಸ್ವಾಮಿಗೌಡರ ಕಾರ್ಯಕ್ಷಮತೆ ನಿಜಕ್ಕೂ ಶ್ಲಾಘನೀಯ ಎಂದು ಸ್ಮರಿಸಿಕೊಂಡರು.

ಈ ಹಿಂದೆ ಮೈಸೂರಿನಲ್ಲಿ ಡಿಸಿಪಿಯಾಗಿದ್ದಾಗ ಇಲ್ಲಿನ ಕೋಮು ದಳ್ಳುರಿ, ರೌಡಿಸಂ, ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಿದ ಪ್ರಸಂಗಗಳು, ಅಂದಿನ ಪೊಲೀಸ್ ಅಧಿಕಾರಿಗಳ ಕಾರ್ಯಕ್ಷಮತೆ, ನಿಷ್ಠೆ, ಶಿಸ್ತು, ದಕ್ಷತೆ, ಎದೆಗಾರಿಕೆಯನ್ನು ಸ್ಮರಿಸಿಕೊಂಡ ಹುಸೇನ್, ಆ ರೀತಿಯಲ್ಲಿ ಮಾದರಿ ಕೆಲಸ ಮಾಡಿ ನಾಗರಿಕರ ಮನ್ನಣೆಗೆ ಪಾತ್ರರಾಗಬೇಕು. ಸಮಾಜಮುಖಿ ಕೆಲಸ ಮಾಡಿದರೆ ಅದರಿಂದ ಸಿಗುವ ಸಂತೋಷ, ತೃಪ್ತಿ ಯಾವುದೇ ಪದಕ, ಪ್ರಶಸ್ತಿಯಿಂದ ಸಿಗುವುದಿಲ್ಲ ಎಂದು ಕಿವಿಮಾತು ಹೇಳಿದರು.

ವಿಧಾನ ಪರಿಷತ್, ರಾಜ್ಯಸಭೆ ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡದಿದ್ದರೆ 'ಕೈ' ಬಿಡುತ್ತೇವೆ!

ಬೆಂಗಳೂರು, ಮೇ 16(ಕೆಎಂಶಿ)–ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಹಾಗೂ ರಾಜ್ಯಸಭೆಯ 4 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ತಮ್ಮನ್ನು ಅಭ್ಯರ್ಥಿಯನ್ನಾಗಿ ಮಾಡ ದಿದ್ದರೆ ಪಕ್ಷ ತೊರೆಯುವುದಾಗಿ ಹಲವು ಕಾಂಗ್ರೆಸ್ ಮುಖಂಡರು ಎಚ್ಚರಿಸಿದ್ದಾರೆ. ವಿಧಾನಸಭಾ ಸದಸ್ಯರ ಬಲಾಬಲದ ಆಧಾರದ ಮೇಲೆ ಕಾಂಗ್ರೆಸ್‌ಗೆ ರಾಜ್ಯಸಭೆಯ 1 ಸ್ಥಾನ ಪರಿಷತ್ತಿನ 2 ಸ್ಥಾನಗಳು ನಿರಾಯಾಸವಾಗಿ ದೊರೆಯಲಿವೆ. ಈ ಸ್ಥಾನಗಳನ್ನು ಪಡೆಯಲು ಕಾಂಗ್ರೆಸ್ ನಲ್ಲಿ ಘಟಾನುಘಟಿಗಳ ಸಾಲೇ ಇದೆ. ಕಳೆದ ಬಾರಿ ರಾಜ್ಯಸಭೆಗೆ ಆಯ್ಕೆಗೊಂಡಿದ್ದ ಜಯರಾಂ ರಮೇಶ್ ಈ ಬಾರಿಯೂ ವರಿಷ್ಠರಿಂದಲೇ ಟಿಕೆಟ್ ಪಡೆಯಲು ಮುಂದಾಗಿದ್ದಾರೆ. ಆದರೆ ಜಯರಾಂ ರಮೇಶ್ ಅವರನ್ನು ಮುಂದುವರಿಸಲು ರಾಜ್ಯ ನಾಯಕರ ವಿರೋಧವಿದೆ. ಚುನಾವಣಾ ವರ್ಷವಾದ್ದರಿಂದ ಸ್ಥಳೀಯರಿಗೆ ಅವಕಾಶ ನೀಡಬೇಕು. ಜಯರಾಂ ಅವರಿಗೆ ಬೇರೆ ಯಾವುದಾದರೂ ರಾಜ್ಯದಿಂದ ಅವಕಾಶ ಮಾಡಿಕೊಡಿ ಎಂದು ವರಿಷ್ಠರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಇದರ ಮಧ್ಯೆ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್, ನಾಯಕಿ ಪ್ರಿಯಾಂಕ ಗಾಂಧಿ ಅವರನ್ನು ಭೇಟಿ ಮಾಡಿ ಕರ್ನಾಟಕದಿಂದ ರಾಜ್ಯಸಭೆಗೆ ಸ್ಪರ್ಧಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯರಾಗಿರುವ ಅಲ್ಲಂ ವೀರಭದ್ರಪ್ಪ, ವೀಣಾ ಅಚ್ಚಯ್ಯ ಹಾಗೂ ಆರ್.ಬಿ. ತಿಮ್ಮಾಪುರ ಇವರ ಸದಸ್ಯತ್ವ ಅವಧಿ ಜೂನ್‌ಗೆ ಕೊನೆಗೊಳ್ಳಲಿದೆ. ನಿವೃತ್ತಿಯಾಗುತ್ತಿರುವವರಿಗೆ ಮತ್ತೆ ಟಿಕೆಟ್ ನೀಡಬಾರದೆಂಬ ತೀರ್ಮಾನವನ್ನು ಕೆಪಿಸಿಸಿ ತೆಗೆದುಕೊಂಡಿದೆ.



ತೆರವಾದ ಮೂರು ಸ್ಥಾನಗಳಲ್ಲಿ ಎರಡು ಸ್ಥಾನಗಳು ಮಾತ್ರ ಪಕ್ಷಕ್ಕೆ ದೊರೆಯಲಿದ್ದು ಇವುಗಳ ಪೈಕಿ ಬಿ.ಎಲ್. ಶಂಕರ್, ನಿವೇದಿತಾ ಆಳ್ವ, ಪುಷ್ಪಾ ಅಮರನಾಥ್, ಐವಾನ್ ಡಿಸೋಜ, ಆಸ್ಕರ್ ಫರ್ನಾಂಡಿಸ್ ಅವರ ಪುತ್ರಿಯ ಹೆಸರನ್ನು ಪ್ರಥಮ ಹಂತದಲ್ಲಿ ಆಯ್ಕೆ ಮಾಡಲಾಗಿದೆ. ಅಭ್ಯರ್ಥಿಗಳ ಆಯ್ಕೆ ಸಲುವಾಗಿ ಕೆಪಿಸಿಸಿ ಅಧ್ಯಕ್ಷರು ಇದೇ 18 ರಂದು ಹಿರಿಯ ಮುಖಂಡರ ಸಭೆ ಕರೆದಿದ್ದು ಅಂದು ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ವರಿಷ್ಠರ ಅನುಮತಿಗೆ ಕಳುಹಿಸಲಿದ್ದಾರೆ.

ಇದರ ಮಧ್ಯೆ ಮಾಜಿ ಸಂಸದ ಮುದ್ದಹನುಮೇಗೌಡ, ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷದ ನಾಯಕರಾಗಿದ್ದ ಎಸ್.ಆರ್.ಪಾಟೀಲ್ ಸೇರಿದಂತೆ ಕೆಲವು ಪ್ರಭಾವಿಗಳೂ ತಮ್ಮನ್ನು ಈ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ಪರಿಗಣಿಸದಿದ್ದರೆ ಪಕ್ಷ ತೊರೆದು ಬಿಜೆಪಿ ಸೇರುವುದಾಗಿ ರಾಜ್ಯ ಕಾಂಗ್ರೆಸ್ ನಾಯಕರುಗಳಿಗೆ ನೇರ ಎಚ್ಚರಿಕೆ ನೀಡಿದ್ದಾರೆ.

ಹನಿಟ್ರ್ಯಾಪ್‌ಗೆ ಬಿಜೆಪಿ ಮುಖಂಡ ಬಲಿ

ಬೆಂಗಳೂರು, ಮೇ 16– ನಾಲ್ಕು ದಿನದ ಹಿಂದೆ ಆತ್ಮಹತ್ಯೆ ಮಾಡಿಕೊಂಡ ಬಿಜೆಪಿ ಮುಖಂಡ ಅನಂತರಾಜು ಪ್ರಕರಣಕ್ಕೆ ಸ್ಫೋಟಕ ತಿರುವು ಸಿಕ್ಕಿದೆ. ಅನಾರೋಗ್ಯದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಲ್ಲ, ಬದಲಾಗಿ ಹನಿಟ್ರ್ಯಾಪ್‌ಗೆ ಬಿಜೆಪಿ ಮುಖಂಡ ಬಲಿಯಾಗಿದ್ದಾರೆ. ಅವರೇ ಹನಿಟ್ರ್ಯಾಪ್ ಬಲೆಗೆ ಬಿದ್ದಿರುವ ಬಗ್ಗೆ ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ.



ಹೇರೋಹಳ್ಳಿ ವಾರ್ಡ್‌ನ ನಿವಾಸಿ, ಬಿಜೆಪಿ ಮುಖಂಡ ಅನಂತರಾಜು ಮೇ 12ರ ರಾತ್ರಿ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಮೇಲ್ನೋಟಕ್ಕೆ ಅನಾರೋಗ್ಯ ಸಮಸ್ಯೆಯಿಂದ ಆತ್ಮಹತ್ಯೆ ಮಾಡಿಕೊಳ್ಳಲಾಗಿದೆ ಎನ್ನಲಾಗಿತ್ತಾದರೂ ಇದೀಗ ಸ್ಫೋಟಕ ತಿರುವು ಪಡೆದಿದೆ.

ಡೆತ್‌ನೋಟ್‌ನಲ್ಲಿ ಏನಿದೆ: "ಪ್ರಿಯ ಸುಮಾ, ನನ್ನನ್ನು ಕ್ಷಮಿಸಿಬಿಡು, ನಿನಗೆ ಮೋಸ ಮಾಡಿದ್ದೇನೆ. ನಿನ್ನಿಂದ ಕ್ಷಮೆ ಕೇಳಲು ಅರ್ಹನಲ್ಲ, ಹೆಣ್ಣಿನ ಸಹವಾಸ ಮಾಡಿ ಅವಳಿಂದ ಫೋಟೋ–ವಿಡಿಯೋಗಳ ಟ್ರ್ಯಾಪ್‌ಗೆ ಸಿಲುಕಿ ಬ್ಲ್ಯಾಕ್‌ಮೇಲ್ ಮಾಡಿಸಿಕೊಂಡು ನಿನಗೆ ಮುಖ ತೋರಿಸಲು ಸಾಧ್ಯವಾಗುತ್ತಿಲ್ಲ. ನನ್ನ ಮಕ್ಕಳನ್ನು ಚೆನ್ನಾಗಿ ನೋಡಿಕೊ" ಎಂದು ಸಾವಿಗೂ ಮುನ್ನ ಅನಂತರಾಜು ಡೆತ್‌ನೋಟ್ ಬರೆದಿಟ್ಟಿದ್ದಾರೆ.

ಅನಂತರಾಜು ಪತ್ನಿ ಕೊಟ್ಟ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿದೆ. ಕೆ.ಆರ್.ಪುರಂನ ನಿವಾಸಿ ರೇಖಾ ಮತ್ತು ಈಕೆಯ ಪತಿ ವಿನೋದ್ ಹಾಗೂ ಸ್ನೇಹಿತೆ ಸ್ಪಂದನ ಎಂಬುವವರು ಅಶ್ಲೀಲ ಫೋಟೋಗಳನ್ನು ಇಟ್ಟುಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದರು. ಫೇಸ್‌ಬುಕ್ ಮೂಲಕ ರೇಖಾಳ ಪರಿಚಯ ಅನಂತರಾಜುಗೆ ಆಗಿತ್ತು. ಇದನ್ನೇ ಬಂಡವಾಳ ಮಾಡಿಕೊಂಡ ರೇಖಾ ಮತ್ತು ಈಕೆಯ ಗಂಡ ವಿನೋದ್, ಸ್ಪಂದನಾ ಮೂವರು ಸಂಚು ರೂಪಿಸಿ ಅನಂತರಾಜು ಅವರ ಖಾಸಗಿ ಫೋಟೋ ವಿಡಿಯೋ ಇಟ್ಟುಕೊಂಡು ಹಣಕ್ಕಾಗಿ ಹಿಂಸಿಸಿದ್ದಾರೆ. ಇವರ ಕಾಟ ಸಹಿಸಲಾಗದೆ ಈ ಹಿಂದೆಯೂ ಆತ್ಮಹತ್ಯೆಗೆ ಅನಂತರಾಜು ಯತ್ನಿಸಿದ್ದರು.

ಇಷ್ಟಕ್ಕೆ ಸುಮ್ಮನಾಗದ ರೇಖಾ, ಪದೇ ಪದೆ ಕಾಲ್ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿದ್ದಳು. ಈ ಬಗ್ಗೆ ಅನಂತರಾಜು ಅವರ ಪತ್ನಿಗೆ ಗೊತ್ತಾಗಿ, ಹೆದರಬೇಡಿ ಎಂದು ಗಂಡನಿಗೆ ಧೈರ್ಯ ತುಂಬಿದ್ದರು. ಆದರೂ ಆ ಗ್ಯಾಂಗ್ ಬ್ಲ್ಯಾಕ್‌ಮೇಲ್ ಮಾಡುತ್ತಲೇ ಇತ್ತು. ಇದರಿಂದ ಬೇಸತ್ತ ಅನಂತರಾಜು ನೇಣಿಗೆ ಶರಣಾಗಿದ್ದಾರೆ ಎಂದು ಡೆತ್‌ನೋಟ್ ಸಮೇತ ದೂರು ನೀಡಿದ್ದಾರೆ. ಇದೀಗ ಆರೋಪಿಗಳಿಗಾಗಿ ಬ್ಯಾಡರಹಳ್ಳಿ ಪೊಲೀಸರು ಬಲೆ ಬೀಸಿದ್ದಾರೆ.

ಲಾಕ್‌ಡೌನ್‌ನಲ್ಲಿ 'ಇ–ಕೋರ್ಟ್ಸ್' ಬಳಕೆ: ಕರ್ನಾಟಕ ಹೈಕೋರ್ಟ್‌ಗೆ ದ್ವಿತೀಯ ಸ್ಥಾನ

ಬೆಂಗಳೂರು, ಮೇ 16– ಕೋವಿಡ್–19 ಸಾಂಕ್ರಾಮಿಕ ಹಿನ್ನೆಲೆಯಲ್ಲಿ ಹೇರಲಾಗಿದ್ದ ಲಾಕ್‌ಡೌನ್ ಅವಧಿ ಆರಂಭವಾದಾಗಿನಿಂದ ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ) ಮೂಲಕ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ 28 ಹೈಕೋರ್ಟ್‌ಗಳ ಪೈಕಿ ಮದ್ರಾಸ್ ಹೈಕೋರ್ಟ್ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ.

ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯವು ಪ್ರಕಟಿಸಿರುವ ಮಾಹಿತಿಯ ಪ್ರಕಾರ, 'ಇ–ಕೋರ್ಟ್ ಸಾಧನೆಯಲ್ಲಿ ಕರ್ನಾಟಕ, ಮಧ್ಯಪ್ರದೇಶ, ಪಂಜಾಬ್ ಮತ್ತು ಹರಿಯಾಣ ಮತ್ತು ದೆಹಲಿ ಹೈಕೋರ್ಟ್‌ಗಳು ಕ್ರಮವಾಗಿ ಮುಂದಿನ ನಾಲ್ಕು ಸ್ಥಾನಗಳನ್ನು ಆಕ್ರಮಿಸಿಕೊಂಡಿವೆ. ಈ ನ್ಯಾಯಾಲಯಗಳು ಕ್ರಮವಾಗಿ 14.17 ಲಕ್ಷ, 6.92 ಲಕ್ಷ, 6.37 ಲಕ್ಷ, 5.20 ಲಕ್ಷ ಮತ್ತು 3.16 ಲಕ್ಷ ಪ್ರಕರಣಗಳನ್ನು ನಿಭಾಯಿಸಿವೆ. ಅದೇ ರೀತಿ 28 ಹೈಕೋರ್ಟ್‌ಗಳ ವ್ಯಾಪ್ತಿಯಡಿ 28 ಜಿಲ್ಲಾ ನ್ಯಾಯಾಲಯಗಳಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಪ್ರಕರಣಗಳನ್ನು ವ್ಯವಹರಿಸುವಲ್ಲಿ ದೆಹಲಿ ಮೊದಲ ಸ್ಥಾನದಲ್ಲಿದೆ. ಅಲಹಾಬಾದ್, ಪಾಟ್ನಾ, ಆಂಧ್ರಪ್ರದೇಶ, ಮಧ್ಯಪ್ರದೇಶ ನಂತರದ ಸ್ಥಾನದಲ್ಲಿವೆ.

ವಾಟ್ಸ್‌ಪ್ ವಿಡಿಯೋ ಕಾಲ್ ಮೂಲಕವೇ ಅರ್ಜಿ ವಿಚಾರಣೆ ನಡೆಸಿ, ಆದೇಶ ನೀಡಿದ ನ್ಯಾಯಮೂರ್ತಿ!

ಮದ್ರಾಸ್ ಹೈಕೋರ್ಟ್‌ನಲ್ಲಿ ವಿಶೇಷ ಪ್ರಸಂಗ

ಚೆನ್ನೈ, ಮೇ 16– ಮದುವೆ ಸಮಾರಂಭದಲ್ಲಿದ್ದ ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು ತುರ್ತು ರಿಟ್ ಅರ್ಜಿ ವಿಚಾರಣೆಯನ್ನು ವಾಟ್ಸ್‌ಪ್ ವಿಡಿಯೋ ಕಾಲ್ ಮೂಲಕವೇ ನಡೆಸಿ, ಆದೇಶ ನೀಡಿದ ವಿಶೇಷ ಪ್ರಕರಣ ವರದಿಯಾಗಿದೆ.



ನ್ಯಾ. ಸ್ವಾಮಿನಾಥನ್



ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರು ಭಾನುವಾರ ಮದುವೆ ಸಮಾರಂಭ ವೊಂದರಲ್ಲಿ ಭಾಗವಹಿಸಲು ನಾಗರ್‌ಕೋಯಿಲ್‌ಗೆ ತೆರಳಿದ್ದರು. ಈ ವೇಳೆ ಧರ್ಮಪುರಿಯ ಶ್ರೀ ಅಭೀಷ್ಟ ವರದರಾಜಸ್ವಾಮಿ ದೇವಾಲಯದ ರಥೋತ್ಸವಕ್ಕೆ ಸಂಬಂಧಪಟ್ಟಂತೆ ತುರ್ತು ರಿಟ್ ಅರ್ಜಿಯೊಂದನ್ನು ದೇವಾಲಯದ ಅನುವಂಶಿಕ ಟ್ರಸ್ಟಿ ಪರ ವಕೀಲರು ಹೈಕೋರ್ಟ್‌ಗೆ ಸಲ್ಲಿಸಿದ್ದರು. ಸೋಮವಾರ ನಡೆಯಬೇಕಾಗಿದ್ದ ದೇವಾಲಯದ ರಥೋತ್ಸವಕ್ಕೆ ತಮಿಳುನಾಡು ಸರ್ಕಾರ ತಡೆ ವಿಧಿಸಿದ್ದು ಅದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ತುರ್ತು ಅರ್ಜಿಯಾಗಿದ್ದರಿಂದ ಭಾನುವಾರವೇ ಆದೇಶ ಹೊರಡಿಸಬೇಕಾದ ಅನಿವಾರ್ಯತೆಯಿಂದಾಗಿ ನ್ಯಾಯಮೂರ್ತಿಗಳು ವಾಟ್ಸ್‌ಪ್ ವಿಡಿಯೋ ಕಾಲ್ ಮೂಲಕ ವಿಚಾರಣೆ ನಡೆಸಲು ನಿರ್ಧರಿಸಿದ್ದಾರೆ.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್, ರಿಟ್ ಅರ್ಜಿದಾರರ ಶ್ರದ್ಧಾಪೂರ್ವಕ ಮನವಿಯು ನಾಗರ್‌ಕೋಯಿಲ್‌ನಿಂದಲೇ ವಾಟ್ಸ್‌ಪ್ ವಿಡಿಯೋ ಕಾಲ್ ಮೂಲಕ ವಿಚಾರಣೆ ನಡೆಸಬೇಕಾದ ಅನಿವಾರ್ಯತೆಗೆ ನನ್ನನ್ನು ದೂಡಿತು ಎಂದು ತಿಳಿಸಿದರು.

ಕಳೆದ ಏ.27ರಂದು ತಮಿಳುನಾಡಿನ ತಂಜಾವೂರು ಜಿಲ್ಲೆಯ ಕಳಿಮೇಡುವಿನಲ್ಲಿ ನಡೆದ ಅಪ್ಪರ್‌ಮಡಂ ದೇವಸ್ಥಾನದ ರಥೋತ್ಸವದ ವೇಳೆ ವಿದ್ಯುತ್ ತಂತಿ ಸ್ಪರ್ಶಿಸಿ ಮಕ್ಕಳು ಸೇರಿ 11 ಮಂದಿ ಮೃತಪಟ್ಟು, 17 ಮಂದಿ ಗಾಯಗೊಂಡಿದ್ದ ಪ್ರಕರಣವನ್ನು ಉಲ್ಲೇಖಿಸಿ ತಮಿಳುನಾಡು ಸರ್ಕಾರ ರಥೋತ್ಸವಕ್ಕೆ ತಡೆಯೊಡ್ಡಿತ್ತು.

ರಾತ್ರಿ ವೇಳೆ ಕೆಟ್ಟ ಕನಸು; ದೇಗುಲದಿಂದ ಕದ್ದೊಯ್ದಿದ್ದ ಅಮೂಲ್ಯ ವಿಗ್ರಹಗಳ ವಾಪಸ್ ಮಾಡಿದ ಕಳ್ಳರು!!

ಲಖನೌ, ಮೇ 16– ದೇಗುಲದಿಂದ ಮಾಡಿ ತಾವು ಕದ್ದೊಯ್ದಿದ್ದ ಅಪಾರ ಮೌಲ್ಯದ ವಿಗ್ರಹಗಳನ್ನು ಕಳ್ಳರು ವಾಪಸ್ ಮಾಡಿರುವ ಘಟನೆ ಉತ್ತರ ಪ್ರದೇಶದ ಚಿತ್ರಕೂಟದಲ್ಲಿ ನಡೆದಿದೆ. ಈ ಕುರಿತು ದೇಗುಲಕ್ಕೆ ಪತ್ರಕೂಡ ಬರೆದಿರುವ ಖತರ್ನಾಕ್ ಕಳ್ಳರು, ದೇಗುಲದಲ್ಲಿ ಕಳ್ಳತನ ಮಾಡಿದ ಬಳಿಕ ತಮಗೆ ರಾತ್ರಿ ವೇಳೆ ಕೆಟ್ಟ ಕನಸುಗಳು ಬೀಳುತ್ತಿದ್ದು, ತಾವು ದುಃಸ್ವಪ್ನದಿಂದ ಬಳಲುತ್ತಿದ್ದೇವೆ ಎಂದು ಅಳಲು ತೋಡಿಕೊಂಡಿದ್ದಾರೆ.ಅಲ್ಲದೆ ಚಿತ್ರಕೂಟದ ಬಾಲಾಜಿ ದೇವಸ್ಥಾನದಿಂದ ಅಷ್ಟಧಾತು (ಮಿಶ್ರಲೋಹ) ದಿಂದ ತಯಾರಿಸಿದ 16 ಅಮೂಲ್ಯ ವಿಗ್ರಹಗಳನ್ನು ಕದ್ದೊಯ್ದ ಕಳ್ಳರು ಅದರಲ್ಲಿ 14 ವಿಗ್ರಹಗಳನ್ನು ದೇವಸ್ಥಾನದ ಪ್ರಧಾನ ಅರ್ಚಕರ ಮನೆ ಬಳಿ ಭಾನುವಾರ ಬಿಟ್ಟು ಹೋಗಿದ್ದಾರೆ.

ಪತ್ರದಲ್ಲಿ ಕಳ್ಳರು ಅಪರಾಧ ಎಸಗಿದ ನಂತರ ದುಃಸ್ವಪ್ನ ಕಾಣುತ್ತಿದ್ದು, ಭಯದಿಂದಲೇ ಕೊಳ್ಳೆ ಹೊಡೆದ ವಿಗ್ರಹಗಳನ್ನು ವಾಪಸ್ ನೀಡುತ್ತಿರುವುದಾಗಿ ಬರೆದಿದ್ದಾರೆ ಎಂದು ಪೊಲೀಸ್ ಮೂಲಗಳು ಸೋಮವಾರ ತಿಳಿಸಿವೆ. ವಿಗ್ರಹಗಳು ಪತ್ತೆಯಾದ ಬಳಿಕ ಅರ್ಚಕರು 14 ಮೂರ್ತಿಗಳನ್ನು ಪೊಲೀಸ್ ಠಾಣೆಗೆ ಕೊಂಡೊಯ್ದಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಳ್ಳುತ್ತಿದ್ದಾರೆ ಎನ್ನಲಾಗಿದೆ.

ಏನಿದು ಘಟನೆ: ಇದೇ ಮೇ 9 ರಂದು, ತರೌನ್ಹಾದಲ್ಲಿರುವ ಪುರಾತನ ಬಾಲಾಜಿ ದೇವಾಲಯದಿಂದ ಹಲವಾರು ಕೋಟಿ ಮೌಲ್ಯದ 16 ಅಷ್ಟಧಾತು ವಿಗ್ರಹಗಳನ್ನು ಕಳವು ಮಾಡಲಾಗಿತ್ತು. ಈ ಸಂಬಂಧ ದೇವಾಲಯದ ಅರ್ಚಕ ಮಹಂತ್ ರಾಮಬಾಲಕ್, ಪೊಲೀಸರಿಗೆ ದೂರು ನೀಡಿದ್ದರು. ಇದೀಗ ಕದ್ದ 16 ವಿಗ್ರಹಗಳ ಪೈಕಿ 14 ವಿಗ್ರಹಗಳನ್ನು ಗೋಣಿಚೀಲದಲ್ಲಿ ತುಂಬಿರುವುದು ಭಾನುವಾರ ಮಾಣಿಕಪುರ ಜವಾಹರನಗರದಲ್ಲಿರುವ ಮಹಂತ್ ರಾಮಬಾಲಕ್ ಅವರ ನಿವಾಸದ ಬಳಿ ನಿಗೂಢವಾಗಿ ಬಿದ್ದಿರುವುದು ಪತ್ತೆಯಾಗಿದೆ. ಅರ್ಚಕರು ಗೋಣಿಚೀಲದ ಪಕ್ಕದಲ್ಲಿ ಕಳ್ಳರು ಬರೆದ ಪತ್ರವನ್ನು ಪತ್ತೆ ಮಾಡಿದ್ದು, ಪತ್ರದಲ್ಲಿ ಕಳ್ಳರು ರಾತ್ರಿ ವೇಳೆ ತಮಗೆ ಬೀಳುತ್ತಿದ್ದ ಕೆಟ್ಟ ಕನಸುಗಳಿಂದ ತಾವು ಭಯ ಭೀತರಾಗಿ ಕದ್ದ ವಿಗ್ರಹಗಳನ್ನು ಮರಳಿಸುತ್ತಿದ್ದೇವೆ ಎಂದು ಹೇಳಿದ್ದಾರೆ.

ಥಾಮಸ್ ಕಪ್ ಗೆದ್ದ ಕನ್ನಡಿಗ ಲಕ್ಷ್ಯ ಸೇನ್‌ಗೆ 5 ಲಕ್ಷ ರೂ. ಬಹುಮಾನ

ಬೆಂಗಳೂರು, ಮೇ 16– ಥಾಮಸ್ ಕಪ್ ಗೆದ್ದ ಕನ್ನಡಿಗ ಲಕ್ಷ್ಯ ಸೇನ್‌ಗೆ ರಾಜ್ಯ ಸರ್ಕಾರ 5 ಲಕ್ಷ ರೂ. ನಗದು ಬಹುಮಾನ ನೀಡಲಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಮೊದಲ ಬಾರಿಗೆ ಥಾಮಸ್ ಕಪ್ ಗೆದ್ದ ಭಾರತ ತಂಡದ ಸದಸ್ಯರಾಗಿರುವ ಕನ್ನಡದ ಬ್ಯಾಡ್ಮಿಂಟನ್ ತಾರೆ ಲಕ್ಷ್ಯ ಸೇನ್ ಅವರಿಗೆ ಕರ್ನಾಟಕ ಸರ್ಕಾರ 5 ಲಕ್ಷ ರೂ.ಗಳನ್ನು ಬಹುಮಾನವನ್ನಾಗಿ ಘೋಷಿಸಿದೆ. ಕಂಠೀರವ ಸ್ಟೇಡಿಯಂನಲ್ಲಿ ಮಿನಿ ಒಲಿಂಪಿಕ್ಸ್ ಗೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕನ್ನಡಿಗ ಲಕ್ಷ್ಯ ಸೇನ್ ಅವರಿಗೆ ಬಹುಮಾನ ಘೋಷಿಸಿದರು.

ಥಾಮಸ್ ಕಪ್ ಮುಡಿಗೇರಿಸಿಕೊಂಡ ಭಾರತದ ತಂಡದಲ್ಲಿ ಬೆಂಗಳೂರಿನ ದ್ರಾವಿಡ್ ಪಡುಕೋಣೆ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ತರಬೇತಿ ಪಡೆಯುತ್ತಿರುವ ಲಕ್ಷ್ಯ ಸೇನ್ ಕೂಡ ಒಬ್ಬರಾಗಿದ್ದಾರೆ. ಮೊದಲ ಸುತ್ತಿನಲ್ಲಿ ಲಕ್ಷ್ಯ ಸೇನ್ ಅವರು ಮೊದಲ ಸಿಂಗಲ್ಸ್ ನಲ್ಲಿ ಆಂಟನಿ ಜಿಂಟಿಂಗ್ ವಿರುದ್ಧ 8–21, 21–17,21–16 ಅಂಕಗಳೊಂದಿಗೆ ಗೆಲುವು ದಾಖಲಿಸಿದರು.

ನಕ್ಕರೆ ಅದೇ ಸ್ವರ್ಗ

ಆಕೆ : "ನಮ್ಮ ಯಜಮಾನ್ರು ಇನ್ನು ಮುಂದೆ ಕುಡಿಯೋಲ್ಲ ಎಂದು ನನ್ನ ಕಾಲು ಹಿಡಿದು ಬೇಡಿಕೊಂಡರು ಕಣೆ"
ಈಕೆ : "ಪರವಾಗಿಲ್ಲ ಕಣೆ"
ಆಕೆ : "ಏನ್ ಪರವಾಗಿಲ್ವೆ ಆಮೇಲೆ ನೋಡಿದರೆ ನನ್ನ ಕಾಲು ಚೈನೇ ನಾಪತ್ತೆ"

ಮೈಸೂರು ಮಿತ್ರ
ಮಂಗಳವಾರ, 17 ಮೇ 2022
ಸತ್ಯೇನೋತ್ತಭಿತಾ ಭೂಮಿ!! ನಹಿ ಸತ್ಯಾತ್ಪರೋ ಧರ್ಮ!!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಚಿನ್ನ ಮತ್ತು ಬೆಳ್ಳಿ ಮಾತ್ರವೇ ನಾಣ್ಯಗಳಲ್ಲ, ಗುಣವೂ ನಾಣ್ಯವೇ. ಜಗತ್ತಿನೆಲ್ಲೆಡೆ ಚಲಾವಣೆಯಾಗುವ ನಾಣ್ಯವದು -ಸಾಫೋಕ್ಲಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆರಂಭದ ಬುಡ ಕಷ್ಟ, ಅಧಿಕಾರದ ತುದಿ ಕಷ್ಟ

ನಿಮ್ಮ ಪತ್ರಗಳು

ನಂದಾ ಬೆನ್ ಎಂಬ ದಿಟ ಆದರ್ಶವಾದಿ ಮಹಿಳೆ... ದೇಶಕ್ಕೆ ಮಾದರಿ...!

ಮಾನ್ಯರೆ,

ನಂದಾಬೆನ್ ಚೌಹಾಣ್ ಎಂಬ 68 ವರ್ಷದ ದಲಿತ ವೃದ್ಧ ಮಹಿಳೆ ಕಳೆದ ಹದಿನೈದು ವರ್ಷಗಳಿಂದ ತಾನು ದುಡಿದು ಕೂಡಿಟ್ಟಿದ್ದ ಹಣದಿಂದ ಗುಜರಾತ್ ರಾಜ್ಯದ ಅಹಮದಾಬಾದ್ ಸಮೀಪದ ಕೊಚ್ರಾಬ್ ಎಂಬ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ "ಅಂಬೇಡ್ಕರ್ ಪ್ರತಿಮೆ" ಸ್ಥಾಪಿಸುವ ಮೂಲಕ ಇಡೀ ದೇಶಕ್ಕೆ ಆದರ್ಶ ಮಹಿಳೆಯಾಗಿದ್ದಾರೆ! ಯಾವುದೇ ರಾಷ್ಟ್ರ ನಾಯಕರು ಅಥವಾ ಸಮಾಜದಲ್ಲಿ ಗಣ್ಯ ವ್ಯಕ್ತಿಗಳ ಪ್ರತಿಮೆ ಸ್ಥಾಪಿಸುವ ಸಂಬಂಧ ಸರ್ಕಾರಗಳು ಅಥವಾ ಸಂಘ ಸಂಸ್ಥೆಗಳು, ಸಂಘಟನೆಗಳ ಕಾರ್ಯಕರ್ತರು, ದೇಣಿಗೆ ರೂಪದಲ್ಲಿ ಹಣ ಸಂಗ್ರಹ ಮಾಡುವುದು ವಾಡಿಕೆ. ಇದನ್ನೆಲ್ಲಾ ಅವಲೋಕಿಸಿದರೆ ಯಾರ ಬಳಿಯೂ ಸಹಾಯ ಪಡೆಯದೆ ಈ ಮಹಿಳೆ ಮಾಡಿರುವ ಕಾರ್ಯ ಅಭಿನಂದನೀಯ.



ಈಕೆ, ಸ್ಥಳೀಯ ಪುರಸಭೆಯಿಂದ ಮರಗಳನ್ನು ಖರೀದಿಸಿ ಮಾರಾಟ ಮಾಡುವ ವೃತ್ತಿಯನ್ನು ಮಾಡುತ್ತಾ ಜೀವನ ನಿರ್ವಹಣೆ ಜೊತೆಗೆ ತನ್ನ ಬಾಲ್ಯದಿಂದ ಕಂಡಂತಹ ಕನಸನ್ನು ನನಸು ಮಾಡಿಕೊಳ್ಳಲು ಹಗಲಿರುಳು ಶ್ರಮಿಸಿ ಅಂತಿಮವಾಗಿ ಪ್ರತಿಮೆ ಸ್ಥಾಪಿಸುವ ಮುಖೇನ ಸಮಾಜಕ್ಕೆ ಸಂದೇಶ ಸಾರುವ ನಿಟ್ಟಿನಲ್ಲಿ ಪ್ರೇರಣೆ ಆಗಿದ್ದಾರೆ ಎನ್ನಬಹುದು. ಈ ನಿಟ್ಟಿನಲ್ಲಿ ಸೂಕ್ಷ್ಮವಾಗಿ ಚಿಂತಿಸಬೇಕಾದದ್ದು ಅವಿದ್ಯಾವಂತ ಮಹಿಳೆಯಾಗಿದ್ದರೂ ಪ್ರಾಮಾಣಿಕವಾಗಿ ದುಡಿದು ಸಮಾಜದ ಸ್ವಾಸ್ಥ್ಯ ಬಯಸುತ್ತಾ ಅಂಬೇಡ್ಕರ್ ಅವರ ಮೇಲೆ ಇಟ್ಟ ಅಪಾರ ಗೌರವವನ್ನು ಅಂಬೇಡ್ಕರ್ ಪ್ರತಿಮೆ ಸ್ಥಾಪಿಸುವ ಮೂಲಕ ಸಮಾಜದಲ್ಲಿ ಇನ್ನಿತರ ಬೇರೆ ಉದ್ದೇಶಗಳಿಗಾಗಿ ಲಾಭಕ್ಕಾಗಿ, ಪ್ರತಿಮೆ ಸ್ಥಾಪಿಸಿ ತೋರ್ಪಡಿಸಿಕೊಳ್ಳುವ ರಾಜಕೀಯ ನಾಯಕರು, ಸುಶಿಕ್ಷಿತ ವರ್ಗ, ಸಂಘಟನೆಗಳು, ಸಂಘ ಸಂಸ್ಥೆಗಳು, ಸರ್ವರಿಗೂ ಇವರು ಸಂದೇಶ ರವಾನೆ ಮಾಡಿದ್ದಾರೆ. ಯಾರೇ ಆಗಲಿ, ನಂದಾಬೆನ್ ಹಾದಿಯಲ್ಲಿ ಮಾಡುವ ಕೆಲಸ ಕಾರ್ಯಗಳಿಂದ ಸಮಾಜಕ್ಕೆ ಪ್ರೇರಣೆ ಆಗಬೇಕು. ಆದರ್ಶನೀಯ ಸಮ ಸಮಾಜಕ್ಕೆ ಸದ್ಯ ಇಂತಹ ಮಹನೀಯ ಕಾರ್ಯಗಳು ಹೆಚ್ಚಾಗಬೇಕಿದೆ..!

- ಅನಿಲ್ ಕುಮಾರ್, ನಂಜನಗೂಡು.

ತೃತೀಯಲಿಂಗಿಗಳಿಗೂ ರಾಜಕೀಯ ಸ್ಥಾನಮಾನ ದೊರೆಯಲಿ

ಮಾನ್ಯರೆ,

ಮೈಸೂರಿನಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತೃತೀಯಲಿಂಗಿಗಳಿಗಾಗಿ ತೃತೀಯಲಿಂಗಿಗಳ ವಿಭಾಗವನ್ನು ಪ್ರಾರಂಭಿಸಿದರು ಎಂಬ ಸುದ್ದಿಯನ್ನು ನೋಡಿದೆ. ಕಾಂಗ್ರೆಸ್ ಧುರೀಣರು ತೃತೀಯಲಿಂಗಿಗಳು ಸ್ವಾವಲಂಬಿಗಳಾಗಬೇಕೆಂದು ಕರೆ ನೀಡಿದ್ದಾರೆ. ತೃತೀಯ ಲಿಂಗಿಗಳಿಗಾಗಿಯೇ ಪ್ರತ್ಯೇಕ ವಿಭಾಗವನ್ನು ಪ್ರಾರಂಭಿಸಿದ ಕಾಂಗ್ರೆಸ್ ಕ್ರಮ ಸ್ವಾಗತಾರ್ಹ. ತೃತೀಯಲಿಂಗಿಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕಾದರೆ ರಾಜಕೀಯವಾಗಿಯೂ ಅವರಿಗೆ ಸ್ಥಾನಮಾನಗಳು ದೊರೆಯಬೇಕು. ಕಾಂಗ್ರೆಸ್ ಪಕ್ಷವು ತೃತೀಯಲಿಂಗಿಗಳನ್ನೇ ಮುಂಬರುವ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಅಭ್ಯರ್ಥಿಯನ್ನಾಗಿ ನಿಲ್ಲಿಸಿ.. ಗೆಲ್ಲಿಸುವ ಮೂಲಕ ಇತರ ಪಕ್ಷಗಳಿಗೆ ಮಾದರಿಯಾಗಲಿ.

-ಕೊ.ಸು.ನರಸಿಂಹ ಮೂರ್ತಿ, ಚಾಮರಾಜಪುರಂ, ಮೈಸೂರು

ವಿಎ ನೇಮಕಾತಿ ಮಾನದಂಡ ಬದಲಾಗಲಿ

ಮಾನ್ಯರೆ,

ರಾಜ್ಯದಲ್ಲಿ ಜಿಲ್ಲಾಧಿಕಾರಿಗಳ ಅಡಿಯಲ್ಲಿಯೇ ನೇರ ನೇಮಕವಾಗುವ ಏಕೈಕ ಹುದ್ದೆ ಗ್ರಾಮ ಲೆಕ್ಕಿಗರ(ವಿಎ) ಹುದ್ದೆ. ಇಲ್ಲಿ ದ್ವಿತೀಯ ಪಿಯುಸಿಯಲ್ಲಿ ಪಡೆದ ಹೆಚ್ಚಿನ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುತ್ತದೆ. ಆದರೆ ಈ ಬಾರಿ 2020 ರಲ್ಲಿ ಕೊರೊನಾ ಬ್ಯಾಚ್ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸದೆ, ಹಿಂದಿನ ತರಗತಿಯನ್ನು ಆಧರಿಸಿ ಅಂಕಗಳನ್ನು ನೀಡಿ ಉತ್ತೀರ್ಣಗೊಳಿಸಿದ್ದಾರೆ. ಈ ಬಾರಿ ಅವರದೇ ಹೆಚ್ಚಿನ ಅಂಕಗಳಲ್ಲಿ ಆಯ್ಕೆ ಮಾಡಿಕೊಂಡಲ್ಲಿ, 2020ರ ಹಿಂದಿನ ವರ್ಷದ ಬ್ಯಾಚ್ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಪಿಯುಸಿಯಲ್ಲಿ ಉತ್ತಮ ಅಂಕಗಳನ್ನು ಗಳಿಸಿರುತ್ತಾರೆ. ಇದು ಅವರಿಗೆ ಅನ್ಯಾಯವಾಗುವಂತಲ್ಲವೇ?

ಆದ್ದರಿಂದ ಸರ್ಕಾರ 2020ರ ಬ್ಯಾಚ್ ಹೊರತುಪಡಿಸಿ, ಉಳಿದ ಬ್ಯಾಚ್ ವಿದ್ಯಾರ್ಥಿಗಳನ್ನು ಈ ಹುದ್ದೆಗೆ ನೇಮಕ ಮಾಡಿಕೊಳ್ಳಬೇಕು. ಇಲ್ಲವೇ ಎಲ್ಲರಿಗೂ ಅನ್ವಯವಾಗುವಂತೆ ಸ್ಪರ್ಧಾತ್ಮಕ ಪರೀಕ್ಷೆ ಕೈಗೊಳ್ಳುವುದರ ಮೂಲಕ ಈ ಹುದ್ದೆಗೆ ನೇಮಕಾತಿ ಮಾಡಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ.

-ಸುಮಿತ್ರಕೆ, ನೆಲ್ಲೂರುಪಾಲ, ಹುಣಸೂರು.

ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಹೋಂ ವರ್ಕ್ ಬೇಕು

ಮಾನ್ಯರೆ,

ಶಿಕ್ಷಣ ತಜ್ಞರು ಹೋಂ ವರ್ಕ್ ಬೇಡ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕೊರೊನಾ ರಜಾ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದಿರುತ್ತಾರೆ. ಕೆಲವು ವಿದ್ಯಾರ್ಥಿಗಳು ಶಾಲೆಯಿಂದ ಮನೆಗೆ ಬಂದ ಕೂಡಲೇ ಬ್ಯಾಗ್ ಇಟ್ಟರೆ ಮತ್ತೆ ಶಾಲೆಗೆ ಹೋಗುವಾಗ ಬ್ಯಾಗ್ ತೆಗೆದುಕೊಂಡು ಹೋಗುತ್ತಾರೆ. ಶಾಲೆಯಲ್ಲಿ ಶಿಕ್ಷಕರು ದಿನಕ್ಕೆ ಒಬ್ಬರಂತೆ ಒಂದು ಪಠ್ಯಕ್ರಮದ ಹೋಂ ವರ್ಕ್ ನೀಡಿದರೆ ಮಕ್ಕಳಿಗೆ ಹೊರೆಯಾಗುವುದಿಲ್ಲ. ಇದರಿಂದ ಮಕ್ಕಳಿಗೆ ಅಕ್ಷರದ ಜ್ಞಾನದ ಜೊತೆಗೆ ಪಾಠವೂ ಅರ್ಥವಾಗುತ್ತದೆ. ಪಠ್ಯಕ್ರಮದ ಜೊತೆಗೆ ಚಟುವಟಿಕೆ ನೀಡಿದರೆ ಅವರ ಪ್ರತಿಭೆಯೂ ಹೊರಹೊಮ್ಮುತ್ತದೆ. ಪ್ರತಿ ಶನಿವಾರ ವಿದ್ಯಾರ್ಥಿಗಳಿಗೆ ಕ್ರೀಡಾ ಚಟುವಟಿಕೆಗಳಿಗೆ ಮೀಸಲಿಡಿ. ಇದರಿಂದ ದೈಹಿಕ ಆರೋಗ್ಯವು ಚೆನ್ನಾಗಿರುತ್ತದೆ ಓದಿನ ಜೊತೆಗೆ ಕ್ರೀಡಾ ಮನೋಭಾವ ಬೆಳೆಯುತ್ತದೆ ಮಕ್ಕಳಿಗೂ ಸಂತೋಷವಾಗುತ್ತದೆ.

-ಎಂ. ಎಸ್. ಉಷಾ ಪ್ರಕಾಶ್,
ಲೇಖಕಿ ಹಾಗೂ ಕವಯಿತ್ರಿ,
ಮೈಸೂರು.


ಬ್ಯಾಂಕ್ ನೀತಿಗಳಿಂದ ಗ್ರಾಹಕರಿಗೆ ತೊಂದರೆ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳು ಹೊಸ ನೀತಿಯನ್ನು ಜಾರಿಗೆ ತಂದಿವೆ. ಉದಾಹರಣೆಗೆ ನನ್ನ ಖಾತೆ ಇರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಉಳಿತಾಯ ಖಾತೆಗೆ ಹಣ ಜಮೆ ಮಾಡುವುದನ್ನು ಒಂದು ತಿಂಗಳಿಗೆ 3 ವಹಿವಾಟಿಗೆ ಸೀಮಿತಗೊಳಿಸಿದ್ದಾರೆ. ಇದನ್ನು ಮೀರಿದರೆ 591 ರೂ. ಕಡಿತಗೊಳಿಸುತ್ತಾರೆ. ಕಷ್ಟಪಟ್ಟು ಉಳಿಸಿದ ಹಣವನ್ನು ಈ ರೀತಿ ಕಡಿತಗೊಳಿಸುವುದು ಎಷ್ಟರ ಮಟ್ಟಿಗೆ ಸರಿ? ಈ ನೀತಿಯಿಂದ ಗ್ರಾಹಕರಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಬ್ಯಾಂಕಿನವರಲ್ಲಿ ಕೇಳಿದರೆ ಕೇಂದ್ರ ಸರ್ಕಾರದ ಆದೇಶ ಎನ್ನುತ್ತಾರೆ. ಬ್ಯಾಂಕಿನ ಸಿಬ್ಬಂದಿ ಸಮರ್ಪಕ ಮಾಹಿತಿ ನೀಡುವುದಿಲ್ಲ. ಈ ಗೊಂದಲವನ್ನು ಸಂಬಂಧಪಟ್ಟವರು ನಿವಾರಿಸಬೇಕಾಗಿದೆ.

– ನೊಂದ ಗ್ರಾಹಕರು, ಮೈಸೂರು

ಸ್ಮರಣೆ



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಜ್ಞಾನದ ಮಹಾಪರ್ವ ಭಗವಾನ್ ಬುದ್ಧ

ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಭರತ ಖಂಡದಲ್ಲಿ ಜನ್ಮ ತಳೆದ ಬೌದ್ಧ ಧರ್ಮ ಇವತ್ತಿಗೂ ಜಗತ್ತಿನ ಪ್ರಮುಖ ಧರ್ಮಗಳಲ್ಲೊಂದಾಗಿದೆ. ಸರ್ವರಲ್ಲೂ ಲೇಸನ್ನೇ ಬಯಸುವ ಬೌದ್ಧಧರ್ಮ ಲೋಕಪ್ರಿಯ. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಮಾನವಧರ್ಮವನ್ನು ಪ್ರತಿಪಾದಿಸುವ ಸಮಾಜವಾದದ ಬೇಳಿನ ಜಿಜ್ಞಾಸು ಬೇರುಗಳು ಬೌದ್ಧಧರ್ಮದಲ್ಲುಂಟು. ಹಾಗಾಗಿ ಬೌದ್ಧಧರ್ಮ ಬಹು ಆಕರ್ಷಣೀಯ. ಇದರ ಪ್ರವರ್ತಕ ಬುದ್ಧದೇವನೂ ಅಷ್ಟೇ ಲೋಕಮಾನ್ಯ.

ಬುದ್ಧ ಪೂರ್ಣಿಮೆಯ ಮಹತ್ವ: ಬುದ್ಧ ಜನಿಸಿದ್ದು ಲುಂಬಿಣಿ ಎಂಬ ವನದ ಶಾಲವೃಕ್ಷದ ಕೆಳಗೆ. ಅಂದು ವೈಶಾಖ ಮಾಸದ ಶುದ್ಧ ಹುಣ್ಣಿಮೆ. ಆಶ್ಚರ್ಯವೆಂದರೆ ಅವನು ಬೋಧಿವೃಕ್ಷದ ಕೆಳಗೆ ಭವ್ಯ ತಪಸ್ಸು ಕೈಗೊಂಡು ದಿವ್ಯಜ್ಞಾನ ಪಡೆದದ್ದು ಸಹ ವೈಶಾಖ ಮಾಸದ ಶುದ್ಧ ಹುಣ್ಣಿಮೆಯಂದೇ. ಇನ್ನೂ ಆಶ್ಚರ್ಯವೆಂದರೆ ಅವನು ಮಹಾಪರಿನಿರ್ವಾಣ ಹೊಂದಿದ್ದು ಕೂಡ ಎರಡು ವೃಕ್ಷಗಳ ಕೆಳಗೆ. ಅಂದೂ ಸಹ ವೈಶಾಖ ಮಾಸದ ಶುದ್ಧ ಹುಣ್ಣಿಮೆ.ವೃಕ್ಷಕ್ಕೂ, ಹುಣ್ಣಿಮೆಗೂ, ಬುದ್ಧನಿಗೂ ಬಹಳ ನಂಟು. ಹೀಗೆ ಬುದ್ಧ ಜನನವಾದದ್ದು, ಬುದ್ಧ ಜ್ಞಾನಿಯಾದದ್ದು, ಬುದ್ಧ ಮಹಾಪರಿನಿರ್ವಾಣ ಹೊಂದಿದ್ದು ಈ ಮೂರು ಪ್ರಮುಖ ಘಟನೆಗಳೂ ಬುದ್ಧನ ಜೀವನದಲ್ಲಿ ವೈಶಾಖ ಮಾಸದ ಶುದ್ಧ ಹುಣ್ಣಿಮೆಯಂದೇ ಘಟಿಸಿರುವುದರಿಂದ ಅದು ಬುದ್ಧ ಪೂರ್ಣಿಮೆಯಾಗಿಯೇ ಪ್ರಸಿದ್ಧಿ. ಈ ದಿನ ಅತ್ಯಂತ ವಿಶಿಷ್ಟವಾದದ್ದು. ಅದರಲ್ಲೂ ವಿಶೇಷವಾಗಿ ಬೌದ್ಧ ಧರ್ಮೀಯರಿಗೆ ಮಹಾ ಪವಿತ್ರದಿನ ಇದನ್ನು ಬುದ್ಧ ಜಯಂತಿಯ ಮಹಾಹಬ್ಬವಾಗಿ ಬಹಳ ಶ್ರದ್ಧಾಭಕ್ತಿಗಳಿಂದ ಜಗತ್ತಿನಾದ್ಯಂತ ಆಚರಿಸಲಾಗುತ್ತದೆ.

ಆಚರಣೆಯ ವಿಧಾನ: ಬುದ್ಧ ಪೂರ್ಣಿಮೆಯ ದಿನದಂದು ಬೌದ್ಧರು ಮುಂಜಾನೆ ಸ್ನಾನ ಮಾಡಿ ಶ್ವೇತ ವಸ್ತ್ರಧರಿಸಿ ಬೌದ್ಧ ವಿಹಾರದಲ್ಲಿ ಸಂಗಮಗೊಳ್ಳುತ್ತಾರೆ. ಅಲ್ಲಿ ಬುದ್ಧನ ಬದುಕು, ಬುದ್ಧೋಪದೇಶ, ಬುದ್ಧತತ್ವಾದರ್ಶಗಳೆಲ್ಲದರ ಚಿಂತನ-ಮಂಥನ ನಡೆಸುತ್ತಾರೆ. ಕೊಲೆ ಮಾಡುವುದಿಲ್ಲ, ಕಳ್ಳತನ ಮಾಡುವುದಿಲ್ಲ, ಮದ್ಯಪಾನ ಮಾಡುವುದಿಲ್ಲ, ವ್ಯಭಿಚಾರ ಮಾಡುವುದಿಲ್ಲ, ಸುಳ್ಳು ನುಡಿಯುವುದಿಲ್ಲ ಎಂಬ ಬುದ್ಧನ ಪಂಚಶೀಲ ತತ್ವಗಳ ಪ್ರತಿಜ್ಞೆ ಮಾಡುತ್ತಾರೆ. ಅಂದು ಮನೆಗಳನ್ನು ಶುದ್ಧ ಮನದಿಂದ ಸ್ವಚ್ಛಗೊಳಿಸಿ ಅಲಂಕರಿಸಿ ಗೋಡೆಗಳ ಮೇಲೆ ಬುದ್ಧನ ಜಾತಕ ಕಥೆಗಳನ್ನು ಹೇಳುವ ಚಿತ್ರಗಳನ್ನು ಬಿಡಿಸಿ ತೂಗುಹಾಕುತ್ತಾರೆ. ಬೋಧಿವೃಕ್ಷದ ಕೆಳಗೆ ಬುದ್ಧನಿಗೆ ಜ್ಞಾನೋದಯವಾದ ಕಾರಣ ಅಂದು ಬೋಧಿವೃಕ್ಷವನ್ನು ಭಕ್ತಿಯಿಂದ ಪೂಜಿಸುತ್ತಾರೆ.

ಬುದ್ಧ ಎಂಬುದು ಬುದ್ಧನ ಹುಟ್ಟು ಹೆಸರಲ್ಲ. ಹಲವು ಜನ್ಮಗಳ ತಪಸ್ಸಾಧನೆಯಿಂದ ಅವನು ಪಡೆದ ಮಹಾಸ್ಥಾನ ಅದು. ಬುದ್ಧ ಎಂದರೆ ಶ್ರೇಷ್ಠ ಜ್ಞಾನಿ. ಜ್ಞಾನದ ಮಹಾಬೆಳಕನ್ನು ಕಂಡವನು ಎಂದರ್ಥ. ಬುದ್ಧ ಎಂದರೆ ಸ್ವಪ್ರಯತ್ನ, ಸ್ವಶಕ್ತಿಯಿಂದ ತಮ್ಮ ಅಂತಃಶಕ್ತಿಯ ಸತ್ವದಿಂದಲೇ ಶ್ರೇಷ್ಠ ಜ್ಞಾನಗಳಿಸಿ ಎಲ್ಲರ ಹಿತಕ್ಕಾಗಿ, ಎಲ್ಲರ ನೆಮ್ಮದಿಗಾಗಿ ಅಪಾರ ಕರುಣೆಯಿಂದ ಆ ಜ್ಞಾನವನ್ನು ಜನರಿಗೆ ತಿಳಿಸಿದವನು ಎಂದರ್ಥ. ಸತ್ಯದ ಸ್ವರೂಪವನ್ನು ಅರಿತವನು ಎಂಬ ಅರ್ಥದಲ್ಲಿ ಬುದ್ಧನನ್ನು 'ತಥಾಗತ' ಎಂಬುದಾಗಿಯೂ ಕರೆಯಲ್ಪಡಲಾಗಿದೆ.

ಬುದ್ಧನ ಹುಟ್ಟು ಹೆಸರು ಸಿದ್ಧಾರ್ಥ, ತಂದೆ ಹಿಮಾಲಯದ ತಪ್ಪಲಿನಲ್ಲಿದ್ದ ಕಪಿಲವಸ್ತು ಎಂಬ ಪಟ್ಟಣದ ಗೌತಮ ಕುಲದ, ಶಾಕ್ಯವಂಶದ ಮಹಾರಾಜ ಶುದ್ಧೋದನ. ತಾಯಿ ಮಹಾಸಾಧ್ವೀಮಣಿ ಮಹಾಮಾಯಾದೇವಿ. ಜನನ ಕ್ರಿಪೂ. 563ನೇ ವರ್ಷ. ಸಿದ್ಧಾರ್ಥ ಇನ್ನೂ ತಾಯಿ ಗರ್ಭದಲ್ಲಿದ್ದಾಗ ತಾಯಿ ಮಾಯಾದೇವಿ ತವರು ಮನೆಗೆ ಹೊರಟಿದ್ದಳು. ಮಾರ್ಗದಲ್ಲಿ ಆಕೆ ಲುಂಬಿಣಿ ಎಂಬ ವನವನ್ನು ತಲುಪಿದಾಗ ಆಯಾಸಗೊಂಡು ಸಖಿಯರ ಸಲಹೆಯಂತೆ ಅಲ್ಲೇ ಇದ್ದ ಒಂದು ಶಾಲವೃಕ್ಷದ ಕೆಳಗೆ ವಿಶ್ರಮಿಸಿಕೊಳ್ಳತೊಡಗುತ್ತಾಳೆ. ಆಗಲೇ ಸಿದ್ಧಾರ್ಥ ಆ ಮರದ ಕೆಳಗೆಯೇ



ಜನಿಸಿದ. ಅಂದು ವೈಶಾಖ ಶುದ್ಧ ಪೂರ್ಣಿಮೆ.ಬೆಳದಿಂಗಳಿನಂಥ ಸಿದ್ಧಾರ್ಥ ಜನಿಸಿದ ಆ ಕ್ಷಣ ಇಡೀ ಪ್ರಪಂಚವೇ ಬೆಳ್ಳಂಬೆಳಕಾಗಿ ಆನಂದಗೊಂಡಿತ್ತು. ಎಲ್ಲೆಲ್ಲೂ ಶಾಂತಿ ಪಸರಿಸಿ ಎಲ್ಲೆಡೆ ಬೆಳಕು ಪ್ರವಹಿಸಿತ್ತು. ತಾಯಿ ಮಾಯಾದೇವಿಗಂತೂ ಮಹದಾನಂದವಾಗಿ ಅಂದು ಮಗುವನ್ನು ಎದೆಗಪ್ಪಿಕೊಂಡರೆ ನಂತರದ ದಿನಗಳಲ್ಲಿ ಆ ಮಗುವೇ ಇಡೀಜಗತ್ತನ್ನೇ ಅಪ್ಪಿಕೊಂಡು ಬಿಟ್ಟಿತ್ತು.

ಹದಿನಾರು ವರ್ಷ ತುಂಬುತ್ತಿದ್ದಂತೆಯೇ ಮಗ ಸಿದ್ಧಾರ್ಥನಿಗೆ ಕೋಲಿರಾಜನ ಮಗಳಾದ ಚೆಲುವೆ ಯಶೋಧರಾಳನ್ನು ತಂದು ಶುದ್ಧೋದನ ಮಹಾರಾಜ ವಿವಾಹ ಮಾಡಿ ಮಗ ಸಿದ್ಧಾರ್ಥನನ್ನು ಸಂಸಾರ ಬಂಧನಕ್ಕೆ ಸಿಲುಕಿಸಿದ. ಕೆಲ ಕಾಲಾನಂತರ ಯಶೋಧರೆಗೆ ಒಂದು ಮುದ್ದಾದ ಗಂಡು ಮಗು ಜನಿಸಿದಾಗ ಅದಕ್ಕೆ 'ರಾಹುಲ' ಎಂದು ನಾಮಕರಣ ಮಾಡಲಾಯಿತು. ರಾಹುಲ ಎಂದರೆ ಪಾಳಿ ಭಾಷೆಯಲ್ಲಿ ಬಂಧನ ಅಥವಾ ಕಟ್ಟು ಎಂದರ್ಥ. ಎಲ್ಲಿ ತನ್ನ ಏಕಮಾತ್ರ ಪುತ್ರ ಭೂಚಕ್ರವರ್ತಿಯಾಗದೆ ಧರ್ಮಚಕ್ರವರ್ತಿಯಾಗಿಬಿಡುತ್ತಾನೋ ಎಂಬ ಆತಂಕದಲ್ಲಿದ್ದ ಶುದ್ಧೋದನ ಮಹಾರಾಜ ಮಗ ಸಿದ್ಧಾರ್ಥನಿಗೆ ಜಗತ್ತಿನ ಕಷ್ಟ-ಕಾರ್ಪಣ್ಯಗಳು ಕಣ್ಣಿಗೆ ಬೀಳದಂತೆ ಎಚ್ಚರವಹಿಸಿ ಪ್ರೀತಿ ಪ್ರೇಮಗಳು ಹಾಗೂ ಭೋಗ ಭಾಗ್ಯಗಳ ಸಿರಿಸುಪ್ಪತ್ತಿಗೆಯ ನಡುವೆ ಸುಖ ಸಂಪತ್ತಿನಲ್ಲಿ ಅರಮನೆಯಲ್ಲೇ ಇರಲು ಸಕಲ ವ್ಯವಸ್ಥೆ ಮಾಡಿದ್ದ. ಆದರೆ ಇದಾವ ಸುಖ ಭೋಗಗಳಲ್ಲೂ ಸಿದ್ಧಾರ್ಥನಿಗೆ ಆಸಕ್ತಿ ಇರಲಿಲ್ಲ. ಮತ್ತಾವುದೋ ಲೋಕದತ್ತ ಅವನ ಮನಸ್ಸು ಸೆಳೆಯುತ್ತಿತ್ತು.

ಒಮ್ಮೆ ತನ್ನ ಆಪ್ತ ಸಹಾಯಕ ಚೆನ್ನನೊಡನೆ ನಗರ ವೀಕ್ಷಣೆಗೆ ಹೊರಟ ಸಿದ್ಧಾರ್ಥ ಬೇರೆ ಬೇರೆ ದಿನಗಳಲ್ಲಿ ಓರ್ವ ಹಣ್ಣು ಹಣ್ಣು ಮುದುಕ, ಒಬ್ಬರೋಗಿ ಹಾಗೂ ಒಂದು ಹೆಣವನ್ನು ಕಂಡಾಗ ಮನುಷ್ಯನ ಹುಟ್ಟು-ಸಾವು, ಜೀವನದ ಬಗ್ಗೆ ಗಾಢವಾಗಿ ಚಿಂತಿಸಿದ. ಮನಸ್ಸು ವಿಚಲಿತಗೊಂಡು ಇದರ ಬಗೆಯಾಗಿಯೇ ಬಹಳ ಚಿಂತನ-ಮಂಥನ ನಡೆಸಿದ. ಮನಸ್ಸು ಮತ್ತಷ್ಟು ಕದಡಿತು. ಮತ್ತೊಂದು ದಿನ ತೇಜೋಮಯ ಸನ್ಯಾಸಿಯೊಬ್ಬನನ್ನು ಸಿದ್ಧಾರ್ಥ ನೋಡಿದ. ಆ ಕ್ಷಣವೇ ಅವನಿಗೆ ವೈರಾಗ್ಯ ಮೂಡಿತು. ತಾನೂ ಅವನಂತಾಗಬೇಕೆಂದು ದೃಢ ನಿರ್ಧಾರ ಮಾಡಿದ. ಸಿದ್ಧಾರ್ಥ ರಾಹುಲನ ತಂದೆಯಾದ ಕಾರಣಕ್ಕೆ ಅರಮನೆಯಲ್ಲಿ ಒಂದುಕಡೆ ಪುತ್ರ ಜನ್ಮೋತ್ಸವ ನಡೆಯುತ್ತಿದ್ದರೆ, ಮತ್ತೊಂದು ಕಡೆ ಸಿದ್ಧಾರ್ಥನ ಮನಸ್ಸಿನಲ್ಲಿ ವೈರಾಗ್ಯೋತ್ಸವ ನಡೆಯುತ್ತಿತ್ತು.

ಅದೊಂದು ದಿನ ಜಗವೆಲ್ಲಾ ಮಲಗಿರಲು ಅವನೊಬ್ಬನೆದ್ದ. ಎದ್ದವನು ಎಲ್ಲಾ ಭೋಗ-ಭಾಗ್ಯಗಳನ್ನೂ ತೊರೆದು, ಪ್ರೇಮದ ಪತ್ನೀ ಪುತ್ರರನ್ನೂ ಬಿಟ್ಟು ಇಡೀ ರಾಜ್ಯವನ್ನು ತೃಣ ಸಮಾನವಾಗಿ ಭಾವಿಸಿ, ತಾನು ಸನ್ಯಾಸಿಯಾದ ಸುದ್ದಿಯನ್ನು ತನ್ನ ತಂದೆಗೆ ತಿಳಿಸಲು ಸೇವಕ ಚೆನ್ನನಿಗೆ ಹೇಳಿ ಸಿದ್ಧಾರ್ಥ ಹೊರಟೇಬಿಟ್ಟ, ಗುರಿ ಯಾವುದೋ ಮಹಾಬೆಳಕನ್ನು ಅರಸುತ್ತಾ ಸಾಗಿದ. ಸಿದ್ಧಾರ್ಥ ಕಾಡು ಮೇಡುಗಳೆನ್ನದೆ ಹಲವಾರು ವರ್ಷಗಳ ಕಾಲ ಚಿಂತನಶೀಲನಾಗಿ, ಸತ್ಯಶೋಧಕನಾಗಿ ತನ್ನ ಗುರಿ ಸಾಧಿಸಲು ಅಲೆದಾಡಿದ. ಆದರೆ ತನ್ನೊಳಗೆ ಉದ್ಭವಿಸಿದ್ದ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ. ಆದರೆ ಹಠಬಿಡದ ಸಿದ್ಧಾರ್ಥ ಗಯಾದ ಬಳಿ ಬೋಧಿ ವೃಕ್ಷದಡಿ ಕುಳಿತು ದಿವ್ಯ ತಪಸ್ಸು ಕೈಗೊಂಡ. 'ಜ್ಞಾನದ ಬೆಳಕು ಕಾಣದೆ ಎದ್ದೇಳುವುದಿಲ್ಲ' ಎಂದು ಪ್ರತಿಜ್ಞೆಗೈದ. ಅವನ ದೃಢ ಸಂಕಲ್ಪ ಫಲ ನೀಡಿತು. 35ನೇ ವಯಸ್ಸಿನಲ್ಲಿ (ಕ್ರಿ.ಪೂ. 528) ಗಯಾ ಬಳಿ ಬೋಧಿ ವೃಕ್ಷದಡಿಯಲ್ಲಿ ತಪೋನಿರತ ಸಿದ್ಧಾರ್ಥನಿಗೆ ವೈಶಾಖ ಶುಕ್ಲ ಪೂರ್ಣಿಮೆಯಂದು ಜ್ಞಾನೋದಯವಾಗಿ ಬುದ್ಧನಾದ. ಆ ನಂತರ ಧರ್ಮೋಪದೇಶಕ್ಕೆ, ಧರ್ಮಚಕ್ರ ಪ್ರವರ್ತನೆಗೆ ಹೊರಟ.

ಬುದ್ಧ ಆಷಾಢ ಹುಣ್ಣಿಮೆಯಂದು ಕಾಶಿ ಬಳಿಯ ಜಿಂಕೆ ವನಕ್ಕೆ ಬಂದ. ಈಗ ಅದನ್ನು ಸಾರನಾಥ ಎನ್ನುತ್ತಾರೆ. ಜ್ಞಾನಸಿಂಧುವಾದ ಬುದ್ಧ ಪ್ರಪ್ರಥಮವಾಗಿ ಇಲ್ಲಿ ಉಪದೇಶ ಮಾಡಿದ. ಅನಂತರ ತಮ್ಮ ಶಿಷ್ಯರೊಡಗೂಡಿ ದೇಶಾದ್ಯಂತ, ಜಗದಾದ್ಯಂತ ಸಂಚರಿಸುತ್ತಾ ತಾನು ಕಂಡ ಜ್ಞಾನದ ಸಿಹಿಯನ್ನು ಬೋಧನೆಯ ಮೂಲಕ ಎಲ್ಲರಿಗೂ ಹಂಚಿದ.ಸುಮಾರು ನಲವತ್ತೈದು ವರ್ಷಗಳ ಕಾಲ ಬೋಧನೆಗಳನ್ನು ನಿರಂತರವಾಗಿ ಮಾಡಿದ ಭಗವಾನ್ ಬುದ್ಧ ಜಗದ ಕಣ್ಣಾದ. ಅವನು ಭೋದಿಸಿದ ಬೌದ್ಧ ತತ್ವ, ಬೌದ್ಧ ಮತ ವಿಶ್ವದೆಲ್ಲೆಡೆ ಹರಡಿತು.

'ಧಮ್ಮಪದ' ಎಂಬ ಗ್ರಂಥದಲ್ಲಿ 26 ವರ್ಗ ಮತ್ತು 423 ಪದ್ಯಗಳು ಸಂಗ್ರಹಿಸಲ್ಪಟ್ಟಿವೆ. ವೈದಿಕ ಧರ್ಮದಲ್ಲಿ ಗೀತೆ ಹೇಗೋ ಬೌದ್ಧ ಧರ್ಮದಲ್ಲಿ 'ಧಮ್ಮಪದ' ಹಾಗೆ. ಬೌದ್ಧ ಧರ್ಮವನ್ನು ಅರಿತುಕೊಳ್ಳಲು ಧಮ್ಮಪದವೊಂದೇ ಸಾಕು. ಮಾನವನನ್ನು ಕತ್ತಲಿಂದ ಬೆಳಕಿನತ್ತ ನಡೆಸುವ ಜ್ಞಾನ ದೀಪವಿದು. ಬುದ್ಧನ ಹಿಂದಿನ ಜನ್ಮಗಳನ್ನು 'ಬೋಧಿಸತ್ವ' ಎನ್ನುತ್ತಾರೆ. ಮುಂದೆ ಬುದ್ಧ ಭಗವಾನ್‌ನಾದ ಸಿದ್ಧಾರ್ಥ ಗೌತಮನೂ ಅನೇಕ ಬೋಧಿಸತ್ವ ಜನ್ಮಗಳನ್ನೆತ್ತಿದ್ದ. ಇಂತಹ 547 ಕಥೆಗಳು 'ತ್ರಿಪಿಟಕ'ದಲ್ಲಿವೆ. ಅವನ್ನು 'ಬುದ್ಧನ ಜಾತಕ ಕಥೆಗಳು' ಎನ್ನುತ್ತಾರೆ. ಇದು ಪಾಳಿ ಭಾಷೆಯಲ್ಲಿದ್ದು ಇದರ ಮೂರು ಭಾಗಗಳೇ ಒಂದನೆಯದು ಸುತ್ತ ಪಿಟಕ, ಎರಡನೆಯದು ವಿನಯ ಪಿಟಕ, ಮೂರನೆಯದು ಅಭಿಧರ್ಮ ಪಿಟಕ.

'ಬಹುಜನ ಹಿತಾಯ ಬಹುಜನ ಸುಖಾಯ' ಇದು ಬುದ್ಧ ದೇವನ ಮಹಾವಾಕ್ಯ. ಜಗತ್ತನ್ನು ಬೆಳಕಿನತ್ತ ಕೊಂಡೊಯ್ಯಲು ತಾವು ಬದುಕಿರುವವರೆಗೂ ಅಂದಿನ ಬಹುಜನರ ಭಾಷೆ ಪಾಳಿಯಲ್ಲೇ ಧರ್ಮ ಪ್ರಚಾರ ಮಾಡಿ ಜನಮನ ಸ್ಪರ್ಶಿಸಿ ಬುದ್ಧ ತನ್ನ 80ನೇ ವಯಸ್ಸಿನಲ್ಲಿ ಉತ್ತರ ಪ್ರದೇಶದ ಕುಶೀನಗರದಲ್ಲಿ ಕ್ರಿಪೂ. 483ರಲ್ಲಿ ವೈಶಾಖ ಪೂರ್ಣಿಮೆಯಂದು ಮಹಾಪರಿ ನಿರ್ವಾಣ ಹೊಂದಿದರು. ಹೀಗೆ ತಮ್ಮಉಜ್ವಲ ಧ್ಯೇಯೋದ್ದೇಶ. ಪ್ರಜ್ವಲ ತತ್ವಾದರ್ಶಗಳಿಂದ, ಶೋಧನೆ-ಬೋಧನೆಗಳ ಮೂಲಕ 'ಸರ್ವೇಜನೋಸುಖಿನೋಭವತು' ಎಂಬಂತೆ ಎಲ್ಲರ ಮನಸ್ಸುಗಳನ್ನು ಗೆದ್ದ ಬುದ್ಧ ನಿತ್ಯ ಸ್ಮರಣೀಯ. ಬುದ್ಧನಂಥ ಮಹಾತ್ಮನನ್ನು ಪಡೆದ ಭಾರತ ದೇಶವೇ ಧನ್ಯ.

ಮೈಸೂರಲ್ಲಿ ರಾತ್ರಿ ಎರಗಿದ ಮಳೆರಾಯ

ಧರೆಗುರುಳಿದ ಮರಗಳು, ಸಂಚಾರ ದುಸ್ಸಾಹಸ



ಮೈಸೂರು, ಮೇ 16(ಎಂಕೆ)– ಮೈಸೂರಿನಲ್ಲಿ ಪೂರ್ವ ಮುಂಗಾರು ಅಬ್ಬರ ಮುಂದುವರೆದಿದ್ದು, ಸೋಮವಾರ ಇಡೀ ದಿನ ಸುರಿದ ಮಳೆಗೆ ಹತ್ತಾರು ಮರಗಳು ನೆಲಕ್ಕುರುಳಿದರೆ, ಹಲವಾರು ಮನೆಗಳಿಗೆ ನೀರು ನುಗ್ಗಿ ಪರದಾಡುವಂತಾಗಿದೆ.

ಬೆಳಗ್ಗೆಯಿಂದಲೇ ಆರಂಭವಾದ ಮಳೆ ಮಧ್ಯಾಹ್ನ ಸ್ವಲ್ಪಹೊತ್ತು ಬಿಡುವು ನೀಡಿ, ಮತ್ತೆ ಸಂಜೆಯಿಂದ ತಡರಾತ್ರಿಯಲ್ಲೂ ಸುರಿಯುತ್ತಲೇ ಇತ್ತು. ಪರಿಣಾಮ ಸಿದ್ಧಾರ್ಥ ಬಡಾವಣೆಯ ವಿನಯ ಮಾರ್ಗದ 8ನೇ ಕ್ರಾಸ್, ನಾಯ್ಡುನಗರ ಇತರೆಡೆ ಮರಗಳು ಬುಡ ಸಮೇತ ನೆಲಕ್ಕುರುಳಿವೆ. ಬಳಿಕ ಸ್ಥಳಕ್ಕಾಗಮಿಸಿದ ನಗರ ಪಾಲಿಕೆ ಅಭಯ ತಂಡದ ಸಿಬ್ಬಂದಿ ಉರುಳಿ ಬಿದ್ದಿದ್ದ ಮರ ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಆದರೆ ಮೊದಲೇ ಗುಂಡಿಬಿದ್ದಿದ ರಸ್ತೆಗಳಲ್ಲಿ ನೀರು ನಿಂತು ಪಾದಚಾರಿಗಳು, ವಾಹನ ಸವಾರರಿಗೆ ಸಿಂಹಸ್ವಪ್ನವಾಗಿ ಪರಿಣಮಿಸಿವೆ. ಹಲವೆಡೆ ನೀರು ತುಂಬಿದ್ದ ಗುಂಡಿಗೆ ದ್ವಿಚಕ್ರ ವಾಹನ ಸವಾರರು ಬಿದ್ದ ಮಾಹಿತಿಯೂ ಬಂದಿದೆ.

ಪರದಾಟ: ನಗರದೆಲ್ಲೆಡೆ ಸುರಿದ ಜೋರು ಮಳೆಗೆ ರಸ್ತೆಗಳು, ಮೋರಿಗಳು ತುಂಬಿ ಹರಿದು ವಾಹನ ಸವಾರರು, ಪಾದಚಾರಿಗಳು, ವ್ಯಾಪಾರಸ್ಥರು ಪರದಾಡುವಂತಾಯಿತು. ನಿರಂತರ ಮಳೆಯಿಂದಾಗಿ ದೇವರಾಜ ಮಾರುಕಟ್ಟೆ, ಮಂಡಿ ಮಾರುಕಟ್ಟೆ, ಎಂ.ಜಿ.ರಸ್ತೆ ಮಾರುಕಟ್ಟೆಗಳ ವ್ಯಾಪಾರಸ್ಥರು, ಗ್ರಾಹಕರಿಲ್ಲದೆ ಭಣಗುಡುತ್ತಿದ್ದವು.

ಮನೆಗಳಿಗೆ ನುಗ್ಗಿದ ನೀರು: ಕುರುಬಾರಹಳ್ಳಿಯಲ್ಲಿ ಎರಡ್ಮೂರು ಮನೆಗಳಿಗೆ ನುಗ್ಗಿರುವ ಮಳೆ ನೀರು ಅವಾಂತರ ಸೃಷ್ಟಿಸಿದೆ. ಮನೆಯಲ್ಲಿದ್ದ ಕೆಲ ವಸ್ತುಗಳು ಹಾನಿಯಾಗಿದ್ದು, ನಿವಾಸಿಗಳ ನಿದ್ದೆಗೆಡಿಸಿದೆ. ಅಲ್ಲದೆ ತಗ್ಗು ಪ್ರದೇಶದಲ್ಲಿರುವ ಬಡಾವಣೆಗಳಲ್ಲಿನ ಮನೆಗಳಿಗೂ ನೀರು ನುಗ್ಗಿದೆ ಎಂದು ತಿಳಿದು ಬಂದಿದೆ.

ಮನೆಗಳಿಗೆ ಯುಜಿಡಿ ನೀರು: ಅಗ್ರಹಾರದ ರಾಮಾನುಜ ರಸ್ತೆ 6, 7, 12 ಹಾಗೂ 13ನೇ ಕ್ರಾಸ್‌ನ ಹಲವು ಮನೆಗಳಿಗೆ ಶೌಚಾಲಯಗಳ ಮೂಲಕ ಯುಜಿಡಿ ನೀರು ಹರಿದು ರಾಡಿಯಾಗಿದ್ದರಿಂದ ಜನ ತೀವ್ರ ಸಂಕಷ್ಟ ಅನುಭವಿಸಿದರು. ಟೆರೇಸ್‌ಗಳಿಂದ ಮಳೆ ನೀರು ಹರಿವನ್ನು ಯುಜಿಡಿಗೆ ಸಂಪರ್ಕ ನೀಡಿದ್ದು, ಭಾರೀ ಮಳೆ ಪರಿಣಾಮ ಈ ಅವ್ಯವಸ್ಥೆ ಸೃಷ್ಟಿಯಾಗಿದೆ. ಮೇಯರ್ ಸುನಂದಾ ಪಾಲನೇತ್ರ, ಸ್ಥಳೀಯ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಹಾಗೂ ಅಧಿಕಾರಿಗಳು ಪರಿಶೀಲನೆ ನಡೆಸಿ, ಸಮಸ್ಯೆ ಪರಿಹಾರಕ್ಕೆ ಕ್ರಮ ವಹಿಸಿದರು.

ಜಿಟಿಡಿ ನಿವಾಸಕ್ಕೆ ಸಚಿವ ಅಶ್ವಥ್ ನಾರಾಯಣ ಸೇರಿ ಹಲವು ಮುಖಂಡರ ಭೇಟಿ: ಕುಟುಂಬಕ್ಕೆ ಸಾಂತ್ವನ



ಮೈಸೂರು, ಮೇ 16(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಮೊಮ್ಮಗಳು ಗೌರಿ ನಿಧನದ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ, ಮಾಜಿ ಸಂಸದ ಆರ್.ಧ್ರುವನಾರಾಯಣ್, ಶಾಸಕ ಎಲ್. ನಾಗೇಂದ್ರ, ಸಂಸದ ಪ್ರಜ್ವಲ್ ರೇವಣ್ಣ, ಬಿಜೆಪಿ ಮುಖಂಡ ಮೈವಿ. ರವಿಶಂಕರ್ ಇನ್ನಿತರ ಮುಖಂಡರು ಸೋಮವಾರ ಜಿಟಿಡಿ ನಿವಾಸಕ್ಕೆ ಭೇಟಿ ನೀಡಿ, ಸಾಂತ್ವನ ಹೇಳಿದರು.

ಈ ವೇಳೆ ಜಿ.ಟಿ.ದೇವೇಗೌಡರು, ತಮ್ಮ ಮೊಮ್ಮಗಳ ಆಟೋಟ, ಚೆಲ್ಲಾಟ, ಆಕೆ ಅನಾರೋಗ್ಯಕ್ಕೆ ಒಳಗಾದಾಗ ಚಿಕಿತ್ಸೆ ಕೊಡಿಸಿದ್ದು ಇನ್ನಿತರ ವಿಚಾರಗಳನ್ನು ಹಂಚಿಕೊಂಡು, ದುಃಖಿತರಾದರು. ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಜಿ.ಡಿ.ಹರೀಶ್‌ಗೌಡರ ಮೂರು ವರ್ಷದ ಗೌರಿ, ಅನಾರೋಗ್ಯದಿಂದ ಶನಿವಾರ ರಾತ್ರಿ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಕೊನೆಯುಸಿರೆಳೆದಳು.

ಭಾನುವಾರ ಮಧ್ಯಾಹ್ನ ಗುಂಗ್ರಾಲ್ ಛತ್ರದ ಜಿಟಿಡಿ ತೋಟದಲ್ಲಿ ಅನೇಕ ರಾಜಕೀಯ ಮುಖಂಡರು ಸೇರಿದಂತೆ ಸಾವಿರಾರು ಜನರ ಅಶ್ರುತರ್ಪಣದ ನಡುವೆ ಗೌರಿಯ ಅಂತ್ಯ ಸಂಸ್ಕಾರ ನೆರವೇರಿತು.

ರಾಷ್ಟ್ರಗೀತೆ ಕಡ್ಡಾಯ ಮಾಡಿದ್ರೆ ನಮಗೂ ಖುಷಿಯೇ: ಜಮೀರ್

ಬೆಂಗಳೂರು, ಮೇ 16– ರಾಷ್ಟ್ರಗೀತೆ ಕಡ್ಡಾಯ ಮಾಡಿದರೆ ನಮಗೂ ಖುಷಿಯೇ ಎಂದು ಶಾಸಕ ಜಮೀರ್ ಅಹ್ಮದ್ ಖಾನ್ ಹೇಳಿದ್ದಾರೆ. ರಾಷ್ಟ್ರಗೀತೆ ಕಡ್ಡಾಯ ಮಾಡಬೇಕೆಂಬುದರ ಕುರಿತು ಮಾತನಾಡುತ್ತಾ ಮುತಾಲಿಕ್ ವಿರುದ್ಧ ಜಮೀರ್ ವಾಗ್ದಾಳಿ ನಡೆಸಿದರು. ರಾಷ್ಟ್ರಗೀತೆ ಕಡ್ಡಾಯ ಮಾಡಬೇಕು ಅಂತಾ ಪ್ರಮೋದ್ ಮುತಾಲಿಕ್ ಹೇಳಿದ್ದಾರೆ. ನಾವು ರಾಷ್ಟ್ರಗೀತೆ ಹಾಡಿಕೊಂಡೇ ಬರ್ತಾ ಇದ್ದೀವಿ. ಇದು ಬೇಕು ಅಂತಾ ಮಾಡ್ತಿರೋದು, ಇದೊಂದು ಹುನ್ನಾರ ಎಂದು ಕಿಡಿಕಾರಿದರು. ಇದೊಂದು ಪೊಲಿಟಿಕಲ್ ಗಿಮಿಕ್. ರಾಷ್ಟ್ರಗೀತೆ ಕಡ್ಡಾಯ ಮಾಡಿದರೆ ನಮಗೂ ಖುಷಿ. ರಾಷ್ಟ್ರಗೀತೆ ಕಡ್ಡಾಯ ಇಲ್ಲದ ಕಡೆ ನಾವು ರಾಷ್ಟ್ರಗೀತೆ ಹಾಡಿಲ್ಲವಾ..? ಎಂದು ಹರಿಹಾಯ್ದರು.

ನಾಳೆಯಿಂದ ಮೈಸೂರು ಬೇಸಿಗೆ ರೇಸ್ ಆರಂಭ

ಮೈಸೂರು,ಮೇ 16(ಪಿಎಂ)– ಮೈಸೂರು ರೇಸ್ ಕ್ಲಬ್‌ನ ಪ್ರಸಕ್ತ ಸಾಲಿನ (2022) ಮೈಸೂರು ಬೇಸಿಗೆ ರೇಸ್‌ಗಳು ಮೇ 18ರಿಂದ ಆರಂಭಗೊಳ್ಳಲಿವೆ. ಆ.10ರವರೆಗೆ 13 ದಿನಗಳ ಕಾಲ ಸದರಿ ರೇಸ್ ನಡೆಯಲಿದೆ ಎಂದು ಕ್ಲಬ್ (ಎಂಆರ್‌ಸಿ) ಅಧ್ಯಕ್ಷರೂ ಆದ ಸೀನಿಯರ್ ಸ್ಟೀವರ್ಡ್ ವೈ.ಬಿ.ಗಣೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂದ್ಯಗಳ ವಿವರ: ಮೇ 18ರಂದು 'ದಿ ಮೈಸೂರು ಜುವೆನೈಲ್ ಮಿಲಿಯನ್', ಮೇ 25ರಂದು 'ದಿ ಸ್ಟೀವರ್ಡ್ಸ್ ಟ್ರೋಫಿ', ಜೂ.1ರಂದು 'ದಿ ಮೈಸೂರು ಸಿಟಿ ಕಾರ್ಪೊರೇಷನ್ ಟ್ರೋಫಿ', ಜೂ.8ರಂದು 'ದಿ ಮೈಸೂರು ಫಿಲ್ಲಿಸ್ ಟ್ರಯಲ್ ಸ್ಟೇಕ್ಸ್ 2022', ಜೂ.15ರಂದು 'ದಿ ಕಾವೇರಿ ಮಿಲಿಯನ್ 2022', ಜೂ.22ರಂದು 'ದಿ ಡಾ.ಎನ್.ಎಂ. ಶ್ರೀನಿವಾಸ್ ಮೆಮೋರಿಯಲ್ ಟ್ರೋಫಿ', ಜೂ.29ರಂದು 'ದಿ ಎಸ್.ವಿ. ಸುಬ್ರಮಣ್ಯಂ ಮೆಮೋರಿಯಲ್ ಟ್ರೋಫಿ', ಜು.6ರಂದು 'ದಿ ಮೈಸೂರು ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್ 2022', ಜು.13ರಂದು 'ದಿ ಕಬಿನಿ ಮಿಲಿಯನ್ 2022', ಜು.20ರಂದು 'ದಿ ವರಾಹಿ ಟ್ರೋಫಿ', ಜು.27ರಂದು 'ದಿ ಆಕಾಶವಾಣಿ ಕಪ್', ಆ.3ರಂದು 'ದಿ ಮೈಸೂರು ರೇಸ್ ಕ್ಲಬ್ ಮಿಲಿಯನ್ 2022' ಮತ್ತು ಆ.10ರಂದು 'ದಿ ಹೇಮಾವತಿ ಮಿಲಿಯನ್ 2022' ರೇಸ್ ಪಂದ್ಯಗಳು ನಡೆಯಲಿವೆ.

ಆ.10ರವರೆಗೆ ವಿವಿಧ ದಿನಗಳಲ್ಲಿ ನಾನಾ ರೇಸ್‌ಗಳು



ಸ್ವೀಪ್‌ಸ್ಟೇಕ್ ರೇಸ್‌ಗಳು: ರೇಸ್‌ನ ಈ ಋತುವಿನಲ್ಲಿ 7 ಸ್ವೀಪ್‌ಸ್ಟೇಕ್ ರೇಸ್‌ಗಳು ನಡೆಯಲಿವೆ. ಇವೆಲ್ಲವೂ ಮಿಲಿಯನ್ ರೇಸ್‌ಗಳಾಗಿದ್ದು, ಈ ರೇಸ್‌ಗಳಲ್ಲಿ ದೇಶದಾದ್ಯಂತ ಇರುವ ಅತ್ಯುತ್ತಮ ಕುದುರೆಗಳು ಭಾಗವಹಿಸಿ, ಆಕರ್ಷಿಸಲಿವೆ.

ನೂತನ ತರಬೇತುದಾರರು: ಮೈಸೂರು ರೇಸ್ ಕ್ಲಬ್ ಇತ್ತೀಚೆಗೆ 6 ಹೊಸ ತರಬೇತುದಾರರಿಗೆ 'ಎ' ತರಬೇತುದಾರರ ಪರವಾನಗಿ ನೀಡಿದೆ. ಕೆ.ಆದಿತ್ಯ, ಅಶ್ವಿನ್ ಎಸ್.ರಾವ್, ಹಲೀಶ್ ರೇಮಂಡ್ ಮೋಸೆಸ್, ಜೋಸೆಫ್ ಬಿ.ಅವಲೆ, ಎಸ್.ರಮೇಶ್ ಮತ್ತು ವಿನೇಶ್ ನಾಯ್ಕ್ ಅವರೇ ಹೊಸ ತರಬೇತುದಾರರಾಗಿದ್ದಾರೆ.

ಕಾಂಬೈನಲ್ಡ್ ಟೋಟ್ ಆಪರೇಷನ್: ಒಂದು ತಿಂಗಳ ಅವಧಿಯಲ್ಲಿ ಮೈಸೂರು ರೇಸ್ ಕ್ಲಬ್‌ನಿಂದ ಕಾಂಬೈನಲ್ಡ್ ಟೋಟ್ ಆಪರೇಷನ್ ಪ್ರಾರಂಭವಾಗುವ ನಿರೀಕ್ಷೆಯಿದೆ. ಇದಕ್ಕಾಗಿ ಮೈಸೂರು ರೇಸ್ ಕ್ಲಬ್ ಭಾರತದ ಇತರ ಕ್ಲಬ್‌ಗಳೊಂದಿಗೆ ಕೈಜೋಡಿಸಿದೆ. ಅಲ್ಲದೆ, ರೇಸಿಂಗ್ ಪೋಷಕರ ಅನುಕೂಲದ ದೃಷ್ಟಿಯಿಂದ ಈ ಋತುವಿನಲ್ಲಿ 'ಫಿಕ್ಸೆಡ್ ಆಡ್ಸ್ ಬೆಟ್ಟಿಂಗ್' ಮುಂದುವರೆಸಲಾಗುತ್ತಿದೆ.

ವೆಬ್‌ಸೈಟ್‌ನಲ್ಲಿ ರೇಸ್ ನೇರಪ್ರಸಾರ: ಮೈಸೂರು ರೇಸ್ ಕ್ಲಬ್, ಫೇಸ್‌ಬುಕ್ ಮತ್ತು ಟ್ವಿಟರ್ ಖಾತೆಗಳನ್ನು ಹೊಂದಿದೆ. ನಮ್ಮ ವೆಬ್‌ಸೈಟ್‌ನಂತೆ (www.mysoreraceclub.com) ಈ ಖಾತೆಗಳನ್ನು ಮಲ್ಟೀಗೇರಿಸಲು ಉದ್ದೇಶಿಸಲಾಗಿದೆ. ಕ್ಲಬ್‌ನ ವೆಬ್‌ಸೈಟ್‌ಗೆ ಭೇಟಿ ನೀಡಿ, ರೇಸಿಂಗ್‌ನ ನೇರ ಪ್ರಸಾರ ವೀಕ್ಷಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ವಿವಿ ಬುದ್ಧ ಅಧ್ಯಯನ ಕೇಂದ್ರಕ್ಕೆ ಮುಂದಿನ ಬುದ್ಧ ಪೂರ್ಣಿಮೆಯೊಳಗೆ ನಿವೇಶನ

ಸಂಸದ ವಿ.ಶ್ರೀನಿವಾಸ ಪ್ರಸಾದ್‌ರ ಮನವಿಗೆ ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಭರವಸೆ

ಮೈಸೂರು,ಮೇ 16(ಪಿಎಂ)– ಮೈಸೂರು ವಿವಿಯ ಡಾ.ಅಂಬೇಡ್ಕರ್ ಕೇಂದ್ರದಲ್ಲಿ ಸದ್ಯ ಕಾರ್ಯ ನಿರ್ವಹಿಸುತ್ತಿರುವ ಬುದ್ಧ ಅಧ್ಯಯನ ಕೇಂದ್ರಕ್ಕೆ ಪ್ರತ್ಯೇಕ ಕಟ್ಟಡ ನಿರ್ಮಾಣಕ್ಕಾಗಿ ಮಾನಸ ಗಂಗೋತ್ರಿಯಲ್ಲಿ ನಿವೇಶನ ಕಲ್ಪಿಸಬೇಕೆಂಬ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಮನವಿ ಸಂಬಂಧ ಮುಂದಿನ ಬುದ್ಧನ ಪೂರ್ಣಿಮೆ ವೇಳೆಗೆ ಒಂದು ನಿವೇಶನ ಕಲ್ಪಿಸುವುದಾಗಿ ವಿವಿ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಭರವಸೆ ನೀಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ (ಡಾ.ಅಂಬೇಡ್ಕರ್ ಕೇಂದ್ರ) ವಿಶ್ವಜ್ಞಾನಿ ಸಭಾಂಗಣದಲ್ಲಿ ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ ಮತ್ತು ಕೇಂದ್ರದ ಜಂಟಿ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 2566ನೇ ಬುದ್ಧ ಪೂರ್ಣಿಮೆ ಹಾಗೂ 'ಸಮಕಾಲೀನ ಜಗತ್ತಿಗೆ ಬುದ್ಧನ ಚಿಂತನೆಗಳು' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿದ ಶ್ರೀನಿವಾಸ ಪ್ರಸಾದ್, ತಮ್ಮ ಭಾಷಣದಲ್ಲಿ ನಿವೇಶನ ಕಲ್ಪಿಸುವಂತೆ ಮಾಡಿದ ಮನವಿಗೆ ಕುಲಪತಿಗಳು ಭರವಸೆ ನೀಡಿದರು.

ಉದ್ಘಾಟನಾ ಭಾಷಣ ಮಾಡಿದ ಶ್ರೀನಿವಾಸ ಪ್ರಸಾದ್, ತಾವು ಕೇಂದ್ರ ಸಚಿವರಾಗಿದ್ದ ಸಂದರ್ಭದಲ್ಲಿ ಅಂಬೇಡ್ಕರ್ ಅಧ್ಯಯನ ಕೇಂದ್ರಕ್ಕೆ ನಿವೇಶನ ಹಾಗೂ ಕಟ್ಟಡ ಕಲ್ಪಿಸಿದ್ದನ್ನು ಸ್ಮರಿಸಿದರು. ಮುಂದುವರೆದು ಮಾತನಾಡಿದ ಅವರು, ಜಗತ್ತಿಗೆ ಬೆಳಕು ನೀಡಿದ ಬುದ್ಧನ ಹೆಸರಿನಲ್ಲಿ ಮೈಸೂರು ವಿವಿಯಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಿರುವುದು ಶ್ಲಾಘನೀಯ ಎಂದರು.

ಬುದ್ಧ ಅಧ್ಯಯನ ಕೇಂದ್ರ ಸದ್ಯ ಅಂಬೇಡ್ಕರ್ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ನಿಮ್ಮ ಅವಧಿಯಲ್ಲಿ ಉತ್ತಮವಾದ ನಿವೇಶನ ಕಲ್ಪಿಸಿದರೆ, ಅಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸುವ ಜವಾಬ್ದಾರಿ ವಹಿಸಿಕೊಳ್ಳುತ್ತೇನೆ. ಒಟ್ಟಾರೆ ಇಲ್ಲಿ ಅತ್ಯುತ್ತಮ ಕಟ್ಟಡದಲ್ಲಿ ಬುದ್ಧ ಅಧ್ಯಯನ ಕೇಂದ್ರ ತಲೆ ಎತ್ತಬೇಕು ಎಂದು ಕುಲಪತಿಗಳನ್ನು ಉದ್ದೇಶಿಸಿ ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ ರಾಜ್ಯದ ಮೊದಲ ವಿವಿಯಾಗಿ ಮೈಸೂರು ವಿವಿ ಸ್ಥಾಪನೆಗೊಂಡಿತು. ಇಲ್ಲಿ ಗಾಂಧಿ, ಬಸವೇಶ್ವರ, ರಾಷ್ಟ್ರಕವಿ ಕುವೆಂಪು ಅವರ ಅಧ್ಯಯನ ಕೇಂದ್ರಗಳಿದ್ದು, ಅವುಗಳಂತೆ ಬುದ್ಧ ಅಧ್ಯಯನ ಕೇಂದ್ರವೂ ಸ್ವತಂತ್ರ ಪ್ರತ್ಯೇಕ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುವಂತೆ ಆಗಬೇಕು ಎಂದರು.

ಖ್ಯಾತ ವಿಜ್ಞಾನಿ ಐನ್‌ಸ್ಟೈನ್ ಬುದ್ಧ ಚಿಂತನೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಪ್ರಶ್ನೆ ಮಾಡದೇ ಏನನ್ನೂ ಒಪ್ಪಬೇಡ ಎಂಬ ಮಾತನ್ನು ಬುದ್ಧ ಹೇಳಿದ್ದು, ಬೌದ್ಧ ಧರ್ಮ ವಾಸ್ತವಿಕತೆ ಮತ್ತು ವೈಚಾರಿಕತೆ ಹೊಂದಿದೆ. 20ನೇ ಶತಮಾನದಲ್ಲಿ ಅನ್ವೇಷಣೆಗೊಂಡು ನ್ಯೂಕ್ಲಿಯರ್ ಬಾಂಬ್ ಕ್ಷಣ ಮಾತ್ರದಲ್ಲಿ ಜಗತ್ತನ್ನು ಸುಟ್ಟರೆ, ಬುದ್ಧನ ಚಿಂತನೆಗಳು ಕ್ಷಣ ಮಾತ್ರದಲ್ಲಿ ಜಗತ್ತನ್ನು ಕಟ್ಟುವ ಶಕ್ತಿ ಹೊಂದಿದೆ. ಯಾವುದೇ ಸಮಸ್ಯೆಗೆ ಪರಿಹಾರ ನೀಡುವ ಶಕ್ತಿ ಬುದ್ಧನ ಚಿಂತನೆಗಳಲ್ಲಿದೆ ಎಂದರು.

ವಿಶೇಷ ಉಪನ್ಯಾಸ ನೀಡಿದ ಅಶೋಕ ವೃತ್ತದ ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ, ಸಮಕಾಲೀನ ಜಗತ್ತು ದ್ವೇಷ–ಅಸಹಿಷ್ಣುತೆ ಸೇರಿದಂತೆ ನೂರಾರು ಸಮಸ್ಯೆಗಳಿಂದ ತಲ್ಲಣದಲ್ಲಿ ಸಿಲುಕಿದೆ. ಈ ಎಲ್ಲಾ ತಲ್ಲಣಗಳನ್ನು ಶಮನ ಮಾಡುವ ಶಕ್ತಿ ಬುದ್ಧನ ಚಿಂತನೆಗಳಲ್ಲಿದೆ. ಮಾನವೀಯ ಮೌಲ್ಯಕ್ಕೆ ಆದ್ಯತೆ ನೀಡಿರುವ ಬುದ್ಧನ ಚಿಂತನೆಗಳನ್ನು ಯಾವುದೇ ಧರ್ಮ–ಜಾತಿಯವರೂ ಪಾಲನೆ ಮಾಡಬಹುದು ಎಂದು ಹೇಳಿದರು. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಂ.ತಳವಾರ್, ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಸಿ. ಬಸವರಾಜು, ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್, ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬುದ್ಧ ಪೂರ್ಣಿಮೆಯನ್ನು ಅಂಬೇಡ್ಕರ್ ಭಾವಚಿತ್ರ ಮತ್ತು ಬುದ್ಧನ ಮೂರ್ತಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಂಸದ ವಿ.ಶ್ರೀನಿವಾಸ ಪ್ರಸಾದ್ ಉದ್ಘಾಟಿಸಿದರು.

ಬೌದ್ಧ ಧರ್ಮದ ಪುನರುದ್ಧಾರಕರು ಅಂಬೇಡ್ಕರ್

ಭಾರತದಲ್ಲಿ ಉದಯಿಸಿದ ಬೌದ್ಧ ಧರ್ಮ ಏಷ್ಯಾಖಂಡದ ಬೆಳಕಾಗಿದೆ. ಆದರೆ ಭಾರತದಲ್ಲಿ ಅವನತಿ ಹಂತದಲ್ಲಿದ್ದು, ಸಾಮ್ರಾಟ ಅಶೋಕ ಮತ್ತು ಸಾಮ್ರಾಟ ಹರ್ಷವರ್ಧನರ ಬಳಿಕ ಅದು ಮತ್ತೇನಾದರೂ ಇಲ್ಲಿ ಪುನರ್ ಸ್ಥಾಪನೆಯಾಗುತ್ತಿದ್ದರೆ ಅದಕ್ಕೆ ಅಂಬೇಡ್ಕರ್ ಅವರೇ ಕಾರಣ. ಬೌದ್ಧ ಧರ್ಮದ ಪುನರ್ ಉದ್ಧಾರಕರು ಅಂಬೇಡ್ಕರ್ ಎಂದು ವಿ.ಶ್ರೀನಿವಾಸ ಪ್ರಸಾದ್ ಅಭಿಪ್ರಾಯಪಟ್ಟರು.

ಇಂದು ಜಗತ್ತಿನಲ್ಲಿ ಉದ್ಭವಿಸಿರುವ ಸಮಸ್ಯೆಗಳಿಗೆ ಬುದ್ಧನ ಚಿಂತನೆಗಳಲ್ಲಿ ಪರಿಹಾರವಿದೆ. ಸರ್ವವನ್ನೂ ತಿಳಿದ ವ್ಯಕ್ತಿ ಎಂದರೆ ಅದು ಬುದ್ಧ ಮಾತ್ರ ಎಂದು ಮಹನೀಯರೊಬ್ಬರು ಹೇಳಿದ್ದಾರೆ. ಬುದ್ಧ ಮೋಕ್ಷದಾತನಲ್ಲ, ಮಾರ್ಗದಾತ ಎಂದು ಅಂಬೇಡ್ಕರ್ ಹೇಳಿದ್ದು, ಬುದ್ಧನ ಕಾಲದ ಭಾರತ ಜಾತಿರಹಿತ ಸಮಾಜವಾಗಿತ್ತು ಎಂಬುದನ್ನು ಅಂಬೇಡ್ಕರ್ ಸ್ಪಷ್ಟಪಡಿಸಿದ್ದಾರೆ ಎಂದು ಹೇಳಿದರು.

'ಹಿಂದೂವಾಗಿ ಹುಟ್ಟಿದ್ದೇನೆ. ಆದರೆ ಹಿಂದೂವಾಗಿ ಸಾಯಲಾರೆ' ಎಂದು ಅಂಬೇಡ್ಕರ್ ಹೇಳುವ ಮುನ್ನ ಆಳವಾದ ಚಿಂತನೆ ಮಾಡಿದ್ದರು. ನಮಗೊಂದು ಧರ್ಮದ ಅವಶ್ಯಕತೆ ಇದೆ ಎಂದು ಮನಗಂಡು ಎಲ್ಲಾ ಧರ್ಮಗಳನ್ನು ಅಧ್ಯಯನ ಮಾಡಿದ ಅವರು, 1956ರಲ್ಲಿ ಲಕ್ಷಾಂತರ ಅನುಯಾಯಿಗಳೊಂದಿಗೆ ಅಧಿಕೃತವಾಗಿ ಬೌದ್ಧ ಧರ್ಮ ಸ್ವೀಕರಿಸಿದರು ಎಂದು ತಿಳಿಸಿದರು.

ಅಂಬೇಡ್ಕರ್ ಜ್ಞಾನ ದರ್ಶನ ಭವನ

ಹಿಂದಿನ ರಾಜ್ಯ ಸರ್ಕಾರ ಕಲ್ಪಿಸಿದ 3 ಕೋಟಿ ರೂ. ಅನುದಾನದಲ್ಲಿನ 2 ಕೋಟಿ ರೂ. ವೆಚ್ಚದಲ್ಲಿ ಕೇಂದ್ರದ ಆವರಣದಲ್ಲಿ ಗ್ರಂಥಾಲಯ, ವಸ್ತು ಸಂಗ್ರಹಾಲಯ ಹಾಗೂ ಡಾಕ್ಯುಮೆಂಟರಿ ಸೆಂಟರ್ ಒಳಗೊಂಡ ಅಂಬೇಡ್ಕರ್ ಜ್ಞಾನ ದರ್ಶನ ಭವನದ ನಿರ್ಮಾಣ ಕಾಮಗಾರಿ ಮೊದಲ ಹಂತದಲ್ಲಿ ಮುಂದುವರೆದಿದ್ದು, ಇದು ಒಟ್ಟು 6 ಕೋಟಿ ವೆಚ್ಚದ ಯೋಜನೆಯಾಗಿದೆ. ಜೊತೆಗೆ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಕೇಂದ್ರದಲ್ಲಿ ಬುದ್ಧ ಅಧ್ಯಯನ ಕೇಂದ್ರ ಕಾರ್ಯಾರಂಭ ಮಾಡಿದೆ.

-ಡಾ.ಎಸ್.ನರೇಂದ್ರಕುಮಾರ್

ಅಗತ್ಯವಿರುವ ಮೂಲಸೌಲಭ್ಯಗಳನ್ನು ಸರ್ಕಾರದಿಂದ ಪಡೆಯೋಣ

ಪ್ರತಿಯೊಬ್ಬ ಭಾರತೀಯ ಪ್ರಬುದ್ಧವಾಗಿ ಬೆಳೆಯಲು ಬುದ್ಧನ ಚಿಂತನೆಗಳು ಅಗತ್ಯ. ಆಗ ಮಾತ್ರ ಪ್ರಬುದ್ಧ ಭಾರತ ನಿರ್ಮಾಣಗೊಳ್ಳಲಿದೆ. ಇಂದು ನಾವೆಲ್ಲರೂ ಅಂಬೇಡ್ಕರ್ ಅವರ ಮೂಲಕ ಬುದ್ಧರನ್ನು ಕಾಣುತ್ತಿದ್ದೇವೆ. 2019ರ ಬುದ್ಧ ಪೂರ್ಣಿಮೆ ಸಂದರ್ಭದಲ್ಲಿ ವಿವಿಯಲ್ಲಿ ಬುದ್ಧ ಅಧ್ಯಯನ ಕೇಂದ್ರ ಆರಂಭಿಸಬೇಕೆಂಬ ಮನವಿ ಬಂದಿತ್ತು. ಅದರಂತೆ ಕೇಂದ್ರ ಸ್ಥಾಪನೆಯಾಗಿದೆ. ಸಂಸದರು ಹೇಳಿದಂತೆ ಬುದ್ಧ ಅಧ್ಯಯನ ಕೇಂದ್ರಕ್ಕೆ ವಿವಿ ಆವರಣದಲ್ಲಿ ಮುಂದಿನ ಬುದ್ಧನ ಪೂರ್ಣಿಮೆ ವೇಳೆಯೊಳಗೆ ಒಂದು ಜಾಗದ ವ್ಯವಸ್ಥೆ ಕಲ್ಪಿಸುತ್ತೇನೆ. ಕೇಂದ್ರಕ್ಕೆ ಅಗತ್ಯವಿರುವ ಮೂಲಸೌಲಭ್ಯಗಳನ್ನು ಸರ್ಕಾರದಿಂದ ಪಡೆಯೋಣ.


-ಪ್ರೊ.ಜಿ.ಹೇಮಂತ್‌ಕುಮಾರ್



ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ದಂಪತಿ, ತಮ್ಮ ಮೈಸೂರಿನ ಜಯಲಕ್ಷ್ಮೀಪುರಂನ ಭೀಮ ಸದನ ನಿವಾಸದಲ್ಲಿ ಬುದ್ಧಪೂರ್ಣಿಮಾ ಆಚರಿಸಿದರು. ಈ ವೇಳೆ ಅವರ ಕುಟುಂಬ ವರ್ಗದವರು ಉಪಸ್ಥಿತರಿದ್ದರು.



ಮೈಸೂರಿನ ಸಿದ್ಧಾರ್ಥನಗರದ ವೃತ್ತದಲ್ಲಿ ಭಗವಾನ್ ಬುದ್ಧರ ಪ್ರತಿಮೆಯನ್ನು ತಿ.ನರಸೀಪುರ ಶಾಸಕ ಅಶ್ವಿನ್‌ಕುಮಾರ್ ಅನಾವರಣಗೊಳಿಸಿದರು. ಈ ವೇಳೆ ಮಾಜಿ ಉಪ ಮೇಯರ್ ವಿ.ಶೈಲೇಂದ್ರ, ಪ್ರದೀಪ್, ವಿಜಯಕುಮಾರ, ಶಂಕರ, ದಯಾನಂದ, ಮಹದೇವ, ಚನ್ನಪ್ಪ, ಮಹೇಶ, ಗಿರೀಶ್ ಚಂದ್ರ ಉಪಸ್ಥಿತರಿದ್ದರು.



ಮೈಸೂರಿನ ಬಲ್ಲಾಳ್ ವೃತ್ತದಲ್ಲಿರುವ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ನಡೆದ '2566ನೇ ವೈಶಾಖ ಬುದ್ಧ ಪೂರ್ಣಿಮಾ ಜಯಂತ್ಯುತ್ಸವ'ದಲ್ಲಿ ಪಾಲ್ಗೊಂಡಿದ್ದ 30ಕ್ಕೂ ಹೆಚ್ಚು ಬೌದ್ಧ ಬಿಕ್ಕುಗಳು, ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಶ್ರೀ ಮಾದೇಶ್ವರಾಯ ನಮಃ ಸರಣಿ ಜಪಯಜ್ಞಕ್ಕೆ ಚಾಲನೆ



ಮೈಸೂರು, ಮೇ 16(ಎಂಕೆ)– ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಲೋಕ ಕಲ್ಯಾಣ ಹಾಗೂ ವಿಶ್ವಶಾಂತಿಗಾಗಿ 'ಶ್ರೀ ಮಾದೇಶ್ವರಾಯ ನಮಃ' ಸರಣಿ ಜಪಯಜ್ಞ ಕಾರ್ಯಕ್ರಮ ಶ್ರದ್ಧಾ–ಭಕ್ತಿಯಿಂದ ನೆರವೇರಿತು.

ಮಲೆ ಮಹದೇಶ್ವರ ಜಯಂತಿ ಮಹೋತ್ಸವ ಸಮಿತಿ, ಕುಂಬಾರಕೊಪ್ಪಲು ಅಭ್ಯುದಯ ಸಂಘ, ಮೈಸೂರು ಜಿಲ್ಲಾ ವೀರಶೈವ ಮಹಾಸಭಾ, ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ಜಪಯಜ್ಞ ಕಾರ್ಯಕ್ರಮದಲ್ಲಿ ಸಾಂಪ್ರದಾಯಿಕ ಉಡುಗೆ ಧರಿಸಿದ ನೂರಾರು ಮಂದಿ ಭಕ್ತರು ಭಾಗವಹಿಸಿ, ಮಣ್ಣಿನ ದೀಪ ಬೆಳಗಿಸಿದರಲ್ಲದೆ ಮಹದೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಮಹದೇಶ್ವರ ಬೆಟ್ಟದ ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮಿಜಿ ಮಾತನಾಡಿ, ಉತ್ತರ ನಾಡಿನಿಂದ ಕತ್ತಲ ನಾಡಿಗೆ ಅಂದರೆ ದಟ್ಟ ಅರಣ್ಯ ಪ್ರದೇಶದಲ್ಲಿ ನೆಲೆಸಿದ ಮಹದೇಶ್ವರರು, ಅಜ್ಞಾನದಿಂದ ಜ್ಞಾನದ ಕಡೆಗೆ ಸಮಾಜವನ್ನು ಮುನ್ನಡೆಸಿ ತಮ್ಮ ದೈವಿಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿ ಏಳುಮಲೆಯಲ್ಲಿ ನೆಲೆಸಿದ್ದಾರೆ ಎಂದು ಶ್ರೀ ಮಲೆ ಮಹದೇಶ್ವರ ಪವಾಡಗಳನ್ನು ತಿಳಿಸಿಕೊಟ್ಟರು.

ವಿಧಾನಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡರು ಮಾತನಾಡಿ, ಶ್ರೀ ಮಹದೇಶ್ವರ ಕೋಟಿ ಜಪ ಯಜ್ಞ ಮನುಷ್ಯನನ್ನು ಸಾತ್ವಿಕದೆಡೆಗೆ ಕೊಂಡೊಯ್ದು ಮನುಕಲದ ಕಲಹಗಳನ್ನು ನಾಶಮಾಡುತ್ತದೆ. ಆಧ್ಯಾತ್ಮಿಕ ಚಿಂತನೆಗಳನ್ನೇ ಮರೆಯುತ್ತಿರುವ ಈ ಕಾಲದಲ್ಲಿ ಇಂತಹ ಜಪಯಜ್ಞ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು ಎಂದು ಹೇಳಿದರು.

ವೀರಶೈವ ಲಿಂಗಾಯತ ಮಹಾಸಭಾದ ಶಿವಮೂರ್ತಿ ಕಾನ್ಯ, ಶ್ರೀ ಮಹದೇಶ್ವರ ಜಯಂತೋತ್ಸವದ ಉಪಾಧ್ಯಕ್ಷ ಯು.ಎಂ. ಪ್ರಭುಸ್ವಾಮಿ, ಶಿವಪ್ಪ, ಭೈರಪ್ಪ, ರಾಮಕೃಷ್ಣ, ದಿನೇಶ್, ಗಣೇಶ್ ಮತ್ತಿತರರಿದ್ದರು.



ಬುದ್ಧನ ಸಂದೇಶಗಳು ಸಾಂತ್ವನ ನೀಡುತ್ತವೆ

ಮಾಜಿ ಸಂಸದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣರ ಅನುಭವದ ಮಾತು

ಮೈಸೂರು, ಮೇ 16(ಎಸ್‌ಬಿಡಿ)– ಚುನಾವಣೆಯಲ್ಲಿ ಪರಾಭವಗೊಂಡ ಸಂದರ್ಭದಲ್ಲಿ ನನ್ನ ಮನಸ್ಸಿಗೆ ಸಮಾಧಾನ ನೀಡಿದ್ದು ಭಗವಾನ್ ಬುದ್ಧನ ಸಂದೇಶಗಳು ಎಂದು ಮಾಜಿ ಸಂಸದ ಆರ್.ಧ್ರುವನಾರಾಯಣ್ ತಿಳಿಸಿದರು.

ಬುದ್ಧ ಪೂರ್ಣಿಮೆ ಅಂಗವಾಗಿ ಭಾರತ್ ಮೂಲ ನಿವಾಸಿ ಫೌಂಡೇಷನ್ ಹಾಗೂ ಭಗವಾನ್ ಬುದ್ಧ ಸ್ನೇಹ ಬಳಗ ಸಹಯೋಗದಲ್ಲಿ ಮೈಸೂರಿನ ಗಾಂಧಿನಗರದ ಶಿವಯೋಗಿ ಮಠದಲ್ಲಿ ಸೋಮವಾರ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಹಾಗೂ ಧಮ್ಮ ಸಂಗೀತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡು ನೋವಿನಲ್ಲಿದ್ದಾಗ ಬುದ್ಧನ ಸರಳ ಸಂದೇಶಗಳು ಸಮಾಧಾನ ತಂದವು ಎಂದರು.

'ಯಾರಾದರೂ ನನಗೆ ಕೆಡುಕು ಮಾಡಿದರೆ ಅದು ಅವರ ಕರ್ಮ, ನಾನು ಯಾವ ಕೆಡುಕನ್ನೂ ಬಯಸದಿರುವುದು ನನ್ನ ಧರ್ಮ', 'ಸಮಯ, ಅಧಿಕಾರ, ಹಣ ಹಾಗೂ ಶರೀರ ನಮಗೆ ಜೀವನದ ಎಲ್ಲಾ ಸಮಯಗಳಲ್ಲೂ ಸಹಕರಿಸುವುದಿಲ್ಲ, ಆದರೆ ಪ್ರಾಮಾಣಿಕತೆ, ಒಳ್ಳೆಯ ನಡತೆ, ಒಳ್ಳೆಯ ತಿಳಿವಳಿಕೆ, ಒಳ್ಳೆಯ ಮನಸ್ಸುಗಳು ಯಾವಾಗಲೂ ನಮ್ಮ ಪರವಾಗಿ ಇರುತ್ತವೆ.' ಇಂತಹ ಸರಳ ಸಂದೇಶಗಳು ನನ್ನ ಮನಸ್ಸನ್ನು ಗಟ್ಟಿಗೊಳಿಸಿದವು ಎಂದು ತಿಳಿಸಿದರು.



ಮೈಸೂರಿನ ಗಾಂಧಿನಗರ ಶ್ರೀ ಶಿವಯೋಗಿ ಮಠದಲ್ಲಿ ಬುದ್ಧ ಪೂರ್ಣಿಮೆ ಅಂಗವಾಗಿ ನಡೆದ ವಿಶೇಷ ಉಪನ್ಯಾಸ ಹಾಗೂ ಧಮ್ಮ ಸಂಗೀತ ಕಾರ್ಯಕ್ರಮವನ್ನು ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಮಾಜಿ ಸಂಸದ ಆರ್. ಧ್ರುವನಾರಾಯಣ್ ಉದ್ಘಾಟಿಸಿದರು.

ದೇವಾಲಯಕ್ಕಿಂತ ಶಾಲೆ ಹೆಚ್ಚಾಗಿರುವ ದೇಶದಲ್ಲಿ ಶ್ರೀಮಂತಿಕೆ ಕಂಡುಬರುತ್ತದೆ ಎಂದು ಬುದ್ಧ ತಿಳಿಸಿದ್ದಾರೆ. ಆದರೆ ದೇವಾಲಯಕ್ಕೆ ಆರ್ಥಿಕ ಸಹಾಯ ಕೇಳಿಕೊಂಡು ಅರ್ಜಿ ನೀಡುವವರೇ ಹೆಚ್ಚು. ಅಂತಹವರನ್ನು ಯಾಕೆ ನಿಮ್ಮ ಊರಿಗೆ ಶಾಲೆ–ಅಂಗನವಾಡಿ ಬೇಡವೇ? ಎಂದು ಪ್ರಶ್ನಿಸಿದರೆ, ಅದನ್ನು ಸರ್ಕಾರ ಮಾಡುತ್ತದೆ ಎನ್ನುತ್ತಾರೆ. ಆದರೆ ಕೊರೊನಾ ಕಾಲಘಟ್ಟದಲ್ಲಿ ಎಲ್ಲಾ ದೇವಾಲಯ, ಚರ್ಚ್, ಮಸೀದಿಗಳು ಮುಚ್ಚಿದ್ದವು. ಆಗ ಆಸ್ಪತ್ರೆಯೇ ದೇವಾಲಯ ಹಾಗೂ ವೈದ್ಯರೇ ದೇವರಾಗಿದ್ದರು. ಇಂತಹ ವಿಷಯಗಳನ್ನು ಮನಗಂಡು ಇನ್ನಾದರೂ ಮೌಢ್ಯತೆ ತೊರೆದು ನಾವೆಲ್ಲಾ ಒಟ್ಟಾಗಿ ಬೆಳಕಿನತ್ತ ಸಾಗುವ ಕೆಲಸ ಮಾಡಬೇಕಿದೆ ಎಂದು ಆಶಿಸಿದರು.

ಮುಂದುವರಿದ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಹಬ್ಬಗಳನ್ನು ವಿಜೃಂಭಣೆಯಿಂದ ದೇಶದಾದ್ಯಂತ ಆಚರಿಸುತ್ತಾರೆ. ಸಾಂಪ್ರದಾಯಿಕ ಹಾಗೂ ಧಾರ್ಮಿಕ ಹಬ್ಬಗಳನ್ನು ತಮ್ಮ ಮನೆಗಳಲ್ಲಿ ಆಚರಿಸಿಕೊಳ್ಳುತ್ತಾರೆ. ಆದರೆ ನಮ್ಮ ದೇಶದಲ್ಲಿ ಇದಕ್ಕೆ ತದ್ವಿರುದ್ಧವಾದ ಪರಿಸ್ಥಿತಿ ಇದೆ. ಸಾಂಪ್ರದಾಯಿಕ ಆಚರಣೆಗಳನ್ನು ವಿಜೃಂಭಣೆಯಿಂದ ಆಚರಿಸಿ, ರಾಷ್ಟ್ರೀಯ ಹಬ್ಬಗಳನ್ನು ಕಚೇರಿ, ಸಂಘ ಸಂಸ್ಥೆಗಳಿಗೆ ಸೀಮಿತಗೊಳಿಸಿದ್ದೇವೆ. ಮುಂದಾದರೂ ವೈಜ್ಞಾನಿಕ ತಳಹದಿಯಲ್ಲಿ ಚಿಂತನೆ ಮಾಡಿ ಮುನ್ನಡೆಯಬೇಕಿದೆ ಎಂದರು.

ಚಿಂತಕ ಮಲ್ಕುಂಡಿ ಮಹದೇವಸ್ವಾಮಿ 'ಬೌದ್ಧ ಧಮ್ಮದ ಅನುಸರಣೆಯಲ್ಲಿ ನಮಗಿರುವ ಸವಾಲುಗಳು ಮತ್ತು ಸಾಧ್ಯತೆಗಳು' ಕುರಿತು ಉಪನ್ಯಾಸ ನೀಡಿದರು. ಲಕ್ಷ್ಮಿರಾಮ್ ಮತ್ತು ತಂಡದ ಕಲಾವಿದರು 'ಧಮ್ಮ ಸಂಗೀತ' ಪ್ರಸ್ತುತಪಡಿಸಿದರು. ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹನೂರು ಚೆನ್ನಪ್ಪ, ಸ್ಥಳೀಯ ಕಾರ್ಪೊರೇಟರ್ ಅಶ್ವಿನಿ ಶರತ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕ ಜವರಪ್ಪ, ಮುಖಂಡರಾದ ಆರ್.ಸಿದ್ದಪ್ಪ, ಶರತ್, ಸತೀಶ್, ಕಲ್ಕುಣಿ ಮಾದೇಶ್ ಮತ್ತಿತರರು ಉಪಸ್ಥಿತರಿದ್ದರು.

ಅದ್ಧೂರಿ ರಥೋತ್ಸವ: ಶ್ರೀ ಶಿವಯೋಗಿ ಸ್ವಾಮಿ ಮಠ ಸೇವಾ ಟ್ರಸ್ಟ್ ವತಿಯಿಂದ ಸೋಮವಾರ ಸಂಜೆ ಆಯೋಜಿಸಿದ್ದ ಭಗವಾನ್ ಬುದ್ಧ ಮೂರ್ತಿ ರಥೋತ್ಸವದಲ್ಲಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಹಾಗೂ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಸೇರಿದಂತೆ ನೂರಾರು ಮಂದಿ ಭಾಗಿಯಾಗಿದ್ದರು. ಎಫ್‌ಟಿಎಸ್ ವೃತ್ತದಿಂದ ಆರಂಭ ಗೊಂಡ ಮೆರವಣಿಗೆ ಗಾಂಧಿನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಶಿವಯೋಗಿ ಮಠದ ಬಳಿ ಮುಕ್ತಾಯಗೊಂಡಿತು.

ಭಗವಾನ್ ಬುದ್ಧರ ಬೋಧನೆ ಸರ್ವಕಾಲಕ್ಕೂ ವಿಧಿತ

ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣ ಸಿರಿ ಭಂತೇಜಿ ಅಭಿಮತ

ಮೈಸೂರು, ಮೇ 16(ಎಂಕೆ)– ಬುದ್ಧರ ಬೋಧನೆಯ ಎಲ್ಲಾ ಚಿಂತನೆಗಳು ಸರ್ವಕಾಲಿಕ ಸತ್ಯ. ಮಾನವನಿಗೆ ಉಪಯುಕ್ತವಾಗಿದ್ದು, ಯಾವ ಧರ್ಮಿಯ ವ್ಯಕ್ತಿಯಾದರೂ ಅನುಸರಣೆ ಮಾಡಬಹುದು ಎಂದು ವಿಶ್ವಮೈತ್ರಿ ಬುದ್ಧ ವಿಹಾರದ ಪೂಜ್ಯ ಡಾ.ಕಲ್ಯಾಣ ಸಿರಿ ಭಂತೇಜಿ ಹೇಳಿದರು.

ನಗರದ ಬಲ್ಲಾಳ ವೃತ್ತದಲ್ಲಿರುವ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಮಹಾಬೋಧಿ ಮೈತ್ರಿ ಮಂಡಲ ಸಹಯೋಗದೊಂದಿಗೆ ಆಯೋಜಿಸಿದ್ದ '2566ನೇ ವೈಶಾಖ ಬುದ್ಧ ಪೂರ್ಣಿಮಾ ಜಯಂತ್ಯುತ್ಸವ'ದಲ್ಲಿ ಮಾತನಾಡಿದ ಅವರು, ಭಗವಾನ್ ಬುದ್ಧರ ಬೋಧನೆಗಳು ಸಾಗರರೋಪಾದಿಯಲ್ಲಿ ಕಂಡುಬರುತ್ತಿದೆ. ಮಹತ್ತರ ಮಾನವೀಯ ಮೌಲ್ಯಗಳ ಅಡಕವಾಗಿರುವ ಧಮ್ಮಕ್ಕೆ ಯಾವುದೇ ಭೇದಭಾವವಿಲ್ಲ. ಯಾರು ಬೇಕಾದರೂ ಸ್ವೀಕರಿಸಬಹುದು. ಇಡೀ ಜಗತ್ತೇ ಅಜ್ಞಾನದ ಅಂಧಕಾರದಲ್ಲಿದ್ದಾಗ ಜ್ಞಾನದ ಬೆಳಕನ್ನು ಹರಿಸಿದವರು ತಥಾಗತ ಗೌತಮ ಬುದ್ಧ ಎಂದು ಹೇಳಿದ ಅವರು, ಬೌದ್ಧ ಧರ್ಮದ ಪಂಚಶೀಲ ತತ್ವಗಳನ್ನು ಬೋಧಿಸಿದರು.

ಬಳಿಕ 'ಬೌದ್ಧ ಧಮ್ಮ ಭಾರತದಲ್ಲಿ ಬಹುಜನರ ಧಮ್ಮವಾಗಿತ್ತೆ, ಹಾಗಾದರೆ ಪ್ರಸ್ತುತ ಭಾರತದಲ್ಲಿ..?? ವಿಷಯ ಕುರಿತು ಜಿ.ಪಂ ಉಪ ಕಾರ್ಯದರ್ಶಿ ಡಾ.ಎಸ್.ಪ್ರೇಮಕುಮಾರ್ ಮಾತನಾಡಿ, ಗೌತಮ ಬುದ್ಧರ ಬಗ್ಗೆ ಮಾತನಾಡುವುದಕ್ಕಿಂತ ಅನುಸರಣೆ ಮಾಡುವುದು ಮುಖ್ಯ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು 1918ರಿಂದ 1956 ರವರೆಗೆ ನಡೆಸಿದ ಅಧ್ಯಯನ, ಸಂಶೋಧನೆಯ ಫಲವಾಗಿ ಭಗವಾನ್ ಬುದ್ಧರು ನಮಗೆ ಸಿಗುತ್ತಾರೆ. ಬುದ್ಧ ಹುಟ್ಟುವುದಕ್ಕೂ ಮೊದಲಿದ್ದ ಅವೈದಿಕ ಪರಂಪರೆಯ ನಂತರ ವೈದಿಕ ಪರಂಪರೆ ಬಂದಿದ್ದು, ಆ ಕಾಲಘಟ್ಟದಲ್ಲಿ ಯಜ್ಞ, ಹೋಮ–ಹವನ, ಪೂಜೆಗಳು ಹೆಚ್ಚಾಗಿದ್ದವು. ಸಾಮ್ರಾಟ ಅಶೋಕನ ಕಾಲದಲ್ಲಿ ನಿಷೇಧ ಮಾಡಿದ ಮೌಢ್ಯಾಚರಣೆಗಳಲ್ಲಿ ತೊಡಗಿದ್ದ ಪುರೋಹಿತರಿಗೆ ಆರ್ಥಿಕ ಹೊಡೆತ ಬೀಳುತ್ತದೆ. ಅಶೋಕನ ನಂತರ (ಸುಮಾರು 4ನೇ ತಲೆಮಾರು) ಅಧಿಕಾರಕ್ಕೆ ಬಂದ ಬೃಹದೊತ್ತ ಮೌರ್ಯನ ಕಾಲದಲ್ಲಿ ಪುಷ್ಯಮಿತ್ರ ಶುಂಗ ಎಂಬ ಬ್ರಾಹ್ಮಣನು ಅಶೋಕ ಚಕ್ರವರ್ತಿ ರೂಪಿಸಿದ್ದ ಕಾನೂನಿಗೆ ವಿರುದ್ಧವಾಗಿ ಕಾನೂನು ಜಾರಿಗೆ ತರುತ್ತಾನೆ. ಮನಸ್ಮೃತಿ ಪ್ರಕಾರ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಾಗಿ ವಿಂಗಡಣೆಯಾಗುತ್ತದೆ ಎಂದು ಅಂಬೇಡ್ಕರ್ ಅವರು ಬರೆದ 9ನೇ ಕೃತಿ 'ಅಸ್ಪೃಶ್ಯರು ಯಾರು? ಯಾಕೆ ಅಸ್ಪೃಶ್ಯರಾದರು' ಕೃತಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ತಿಳಿಸಿಕೊಟ್ಟರಲ್ಲದೆ ಬುದ್ಧನ ಬೋಧನೆಯ ಮಧ್ಯಮ ಮಾರ್ಗವನ್ನು ವಿವರಿಸಿದರು.


ರಾಜ್ಯ ಲೆಕ್ಕಪತ್ರ ಇಲಾಖೆ ಜಂಟಿ ನಿರ್ದೇಶಕ ಉದ್ದನೂರು ಮಹದೇವ ನಾಯಕ ಅವರು 'ಬಹುಜನರಿಗೆ ಬೌದ್ಧ ಧಮ್ಮ ಅನುಸರಣೆ ಮಾರ್ಗಗಳು' ಕುರಿತು ಮಾತನಾಡಿದರು. ಮಾಜಿ ಮೇಯರ್‌ಗಳಾದ ನಾರಾಯಣ್, ವಿ.ಪುರುಷೋತ್ತಮ, ಮುಡಾ ಸದಸ್ಯ ಜಿ.ಲಿಂಗಯ್ಯ, ಪಾಲಿಕೆ ಸದಸ್ಯರಾದ ಶಾರದಮ್ಮ, ಪಲ್ಲವಿ ಬೇಗಂ, ಪಿ.ಟಿ.ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ಭಗವಾನ್ ಬುದ್ಧನ ಮೂರ್ತಿ ಮೆರವಣಿಗೆ...

ವೈಶಾಖ ಬುದ್ಧ ಪೂರ್ಣಿಮೆ ಅಂಗ ವಾಗಿ ಮೈಸೂರಿನ ಸರಸ್ವತಿಪುಂ ಮಹಾ ಬೋಧಿ ಮೈತ್ರಿ ಮಂಡಲದಿಂದ ವಿಶ್ವ ಮೈತ್ರಿ ಬುದ್ಧ ವಿಹಾರದವರೆಗೆ ಭಗವಾನ್ ಬುದ್ಧನ ಮೂರ್ತಿ ಮೆರವಣಿಗೆ ನಡೆಸಲಾಯಿತು. ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ಮೆರವಣಿಗೆಗೆ ಚಾಲನೆ ನೀಡಿದರು. 30 ಕ್ಕೂ ಹೆಚ್ಚು ಬೌದ್ಧಬಿಕ್ಕುಗಳು ಮೆರ ವಣಿಗೆಯಲ್ಲಿ ಭಾಗವಹಿಸಿದ್ದರು. ಮೆರವಣಿಗೆ ನಂತರ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು.

ಬ್ಲಡ್ ಕ್ಯಾನ್ಸರ್‌ನಿಂದ ಬಳಲುತ್ತಿರುವ ರಷ್ಯಾ ಅಧ್ಯಕ್ಷ ಪುಟಿನ್ ಆರೋಗ್ಯ ಗಂಭೀರ




ಕೀವ್, ಮೇ 16– ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಗುಣಪಡಿಸಲಾಗದ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂಬ ವರದಿಗಳ ನಡುವೆ, ಅವರು ಬ್ಲಡ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಆರೋಗ್ಯ ಗಂಭೀರವಾಗಿದೆ ಎಂದು ಸೋಮವಾರ ವರದಿಗಳು ತಿಳಿಸಿವೆ.

ಪುಟಿನ್ ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ ಎಂದು ರಷ್ಯಾ ಅಧ್ಯಕ್ಷರೊಂದಿಗೆ ನಿಕಟ ಸಂಬಂಧ ಹೊಂದಿರುವ ಹೆಸರು ಹೇಳಲು ಇಚ್ಛಿಸದ ಸರ್ಕಾರದ ಪ್ರತಿನಿಧಿಯೊಬ್ಬರು ಹೇಳಿರುವುದಾಗಿ ಅಮೆರಿಕದ ನಿಯತಕಾಲಿಕೆ ವರದಿ ಮಾಡಿದೆ.

ಈಗಾಗಲೇ ಪುಟಿನ್ ಅವರನ್ನು ಪದಚ್ಯುತಗೊಳಿಸುವ ದಂಗೆ ಆರಂಭವಾಗಿದ್ದು, ಈ ವರ್ಷದ ಅಂತ್ಯದ ವೇಳೆಗೆ ಮಾಸ್ಕೋ ಯುದ್ಧವನ್ನು ನಿಲ್ಲಿಸಲಿದೆ ಎಂದು ಉಕ್ರೇನ್‌ನ ಬೇಹುಗಾರಿಕಾ ಮುಖ್ಯಸ್ಥರು ಹೇಳಿದ್ದಾರೆ. ಈ ಬೇಸಿಗೆಯ ನಂತರ ರಷ್ಯಾ–ಉಕ್ರೇನ್ ಸಂಘರ್ಷ ಒಂದು ಮಹತ್ವದ ತಿರುವು ಪಡೆಯಲಿದೆ ಎಂದು ನಂಬಿದ್ದಾರೆ ಮತ್ತು ಅಂತಿಮವಾಗಿ ಪುಟಿನ್ ಅವರನ್ನು ಅಧಿಕಾರದಿಂದ ಕೆಳಗಿಳಿಸುವುದನ್ನು ನೋಡುವುದಾಗಿ ಮೇಜರ್ ಜನರಲ್ ಕೈರಿಲೋ ಬುಡಾನೋವ್ ಅವರು ಹೇಳಿರುವುದಾಗಿ ಡೈಲಿ ಮೇಲ್ ವರದಿ ಮಾಡಿದೆ.

ಮಾಜಿ ಕಾರ್ಪೊರೇಟರ್ ಜಯಶಂಕರಸ್ವಾಮಿ ನಿಧನ



ಮೈಸೂರು, ಮೇ 16– ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ, ಬಸವ ಬಳಗಗಳ ಒಕ್ಕೂಟದ ಮಾಜಿ ಅಧ್ಯಕ್ಷ, ರಾಜು ಸೌಂಡ್ ಸಿಸ್ಟಮ್ ಮಾಲೀಕ, ಅಗ್ರಹಾರದ ಬಸವೇಶ್ವರ ರಸ್ತೆ ನಿವಾಸಿ ಜಯಶಂಕರಸ್ವಾಮಿ(66) ಅವರು ಸೋಮವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ(ಮಂಗಳವಾರ) ಮಧ್ಯಾಹ್ನ 1 ಗಂಟೆ ವೇಳೆಗೆ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸನಾತನ ಧರ್ಮ ಉಳಿಸುವಲ್ಲಿ ಬಾಲಗಂಗಾಧರನಾಥಶ್ರೀ ಕೊಡುಗೆ ಅಪಾರ



ನಾಗಮಂಗಲ,ಮೇ 16(ಮೋಹನ್ ರಾಜ್)– ನಾಡಿನಲ್ಲಿ ಸನಾತನ ಧರ್ಮ ಉಳಿಸುವ ನಿಟ್ಟಿನಲ್ಲಿ ಆದಿಚುಂಚನಗಿರಿ ಮಠ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಮಠದ ಪೀಠಾಧಿಪತಿಗಳಾಗಿದ್ದ ಭೈರವೈಕ್ಯ ಶ್ರೀ ಬಾಲಗಂಗಾಧರನಾಥಶ್ರೀಗಳ ಕೊಡುಗೆ ಅಪಾರ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

ತಾಲೂಕಿನ ಬೆಳ್ಳೂರು ಕ್ರಾಸ್ ಬಳಿ ಇರುವ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದಲ್ಲಿ ಸೋಮವಾರ ನಡೆದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಬಾಲಗಂಗಾಧರನಾಥಶ್ರೀಗಳು ಹಾಗೂ ಪ್ರಸ್ತುತ ಪೀಠಾಧಿಪತಿಗಳಾಗಿರುವ ನಿರ್ಮಲಾನಂದಶ್ರೀಗಳು ವೈದ್ಯಕೀಯ ವಿದ್ಯಾರ್ಥಿಗಳನ್ನು ತಯಾರು ಮಾಡುವಲ್ಲಿ ಸಾಕಷ್ಟು ಶ್ರಮ ವಹಿಸಿದ್ದಾರೆ. ನೂರಾರು ವೈದ್ಯರನ್ನು ಸಮಾಜಕ್ಕೆ ಕೊಡುಗೆಯಾಗಿ ಕೊಟ್ಟ ಕೀರ್ತಿ ಶ್ರೀ ಮಠಕ್ಕೆ ಸಲ್ಲುತ್ತದೆ ಎಂದು ಶ್ಲಾಘಿಸಿದರು.

ಬಾಲಗಂಗಾಧರರು ಶಿಕ್ಷಣ, ದಾಸೋಹ, ಪರಿಸರ, ವೈದ್ಯಕೀಯ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಬಹಳ ದೊಡ್ಡದು. ಧ್ಯಾನ, ಜ್ಞಾನ ಎರಡಕ್ಕೂ ಸಮಾನ ಅವಕಾಶವನ್ನು ಕೊಡುತ್ತಾ ಬಾಲಗಂಗಾಧರನಾಥ ಶ್ರೀಗಳ ಕೆಲಸಗಳನ್ನು ನಿರ್ಮಲಾನಂದನಾಥಶ್ರೀಗಳು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದರು.

ವಿದ್ಯಾರ್ಥಿಗಳಾಗಿ ಶಿಕ್ಷಣ ಸಂಸ್ಥೆಗೆ ಒಮ್ಮೆ ಸೇರಿದರೆ ನಿರಂತರವಾಗಿ ಕಲಿಕೆ ನಡೆಯುತ್ತಾ ಹೋಗುತ್ತದೆ. ಕಾಲೇಜುಗಳಲ್ಲಿ ಮೊದಲು ಕಲಿಕೆ ನಂತರ ಪರೀಕ್ಷೆ ಇರುತ್ತದೆ. ಆದರೆ ಜೀವನದಲ್ಲಿ ಮೊದಲು ಪರೀಕ್ಷೆ ನಂತರ ಕಲಿಕೆ ಇರುತ್ತದೆ. ಈ ನಿಟ್ಟಿನಲ್ಲಿ ಯುವ ಮನಸ್ಸುಗಳು ಜೀವನದ ಕಷ್ಟಗಳನ್ನು ಅರಿತುಕೊಂಡು ಮುಂದೆ ಸಾಗಬೇಕು. ವೈದ್ಯಕೀಯ ವರ್ಗ ಬಹಳ ಮುಖ್ಯವಾದುದ್ದು ನೀವು ವೈದ್ಯರು ದೇವರ ಪ್ರತಿರೂಪ ಆಗಿರುತ್ತೀರಿ ಎಂದರು.

ಆದಿಚುಂಚನಗಿರಿ ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ಸಂಶೋಧನಾ ಕೇಂದ್ರ ಮಾಡಬೇಕೆಂಬುದು ಚುಂಚಶ್ರೀಗಳ ಆಸೆಯಾಗಿದೆ. ವಿಜ್ಞಾನ ಸಂಶೋಧನಾ ಕೇಂದ್ರಕ್ಕೆ ಬೇಕಾದ ಸಹಾಯ ಮತ್ತು ಅನುದಾನವನ್ನು ಸರ್ಕಾರ ನೀಡಲಿದೆ. ಭಾರತದಲ್ಲೇ ಅತ್ಯಂತ ದೊಡ್ಡ ಹಾಗೂ ಸುಸಜ್ಜಿತ ಮ್ಯೂಸಿಯಂ ಇಲ್ಲಿ ನಿರ್ಮಾಣವಾಗಲಿ. ಅದಕ್ಕೆ ಬೇಕಾದ ಸಹಕಾರ ನಾವು ನೀಡಲಿದ್ದು, ವಿಜ್ಞಾನ ಕ್ಷೇತ್ರದಲ್ಲಿ ಮತ್ತಷ್ಟು ಸೇವೆ ಸಿಗುವಂತಾಗಲಿ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನಿರ್ಮಲಾನಂದನಾಥಶ್ರೀಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಡಾಕ್ಟರೇಟ್ ನೀಡಿದ್ದಾಗ ಗೈರಾಗಿದ್ದ ಹಿನ್ನೆಲೆಯಲ್ಲಿ ಇಂದು ಸಿಎಂ ನೇತೃತ್ವದಲ್ಲಿ ಪ್ರದಾನ ಮಾಡಲಾಯಿತು.

ವೈದ್ಯಕೀಯ ಪದವಿ ಮುಗಿಸಿದ 142 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವಿವಿಧ ಭಾಗದಲ್ಲಿ ರ‍್ಯಾಂಕ್ ಪಡೆದ ಹತ್ತು ಮಂದಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು. ಕಾರ್ಯಕ್ರಮದ ಸಾನಿಧ್ಯವನ್ನು ಆದಿ ಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥಸ್ವಾಮೀಜಿ ವಹಿಸಿದ್ದರು. ವೇದಿಕೆಯಲ್ಲಿ ಶ್ರೀಮಠದ ಕಾರ್ಯದರ್ಶಿ ಪುರುಷೋತ್ತಮಾನಂದಶ್ರೀ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್, ರೇಷ್ಮೆ ಹಾಗೂ ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ, ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ, ಶಾಸಕ ಕೆ. ಸುರೇಶ್‌ಗೌಡ, ಇತರರು ಉಪಸ್ಥಿತರಿದ್ದರು.

ಕಾಂಗ್ರೆಸ್ಸಿಗರಿಗೆ ರಾಜಕೀಯ ಬಿಟ್ಟು ಬೇರೇನೂ ಗೊತ್ತಿಲ್ಲ

ನಾಗಮಂಗಲ,ಮೇ.16(ಮೋಹನ್‌ರಾಜ್)– ಕಾಂಗ್ರೆಸ್ಸಿಗರಿಗೆ ರಾಜಕೀಯ ಬಿಟ್ರೆ ಬೇರೆ ಏನೂ ಗೊತ್ತಿಲ್ಲ. ಕಾಂಗ್ರೆಸ್‌ನವರು ಎಲ್ಲಾ ವಿಚಾರಕ್ಕೂ ರಾಜಕಾರಣ ಮಾಡುತ್ತಾರೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಆದಿಚುಂಚನಗಿರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ಸಿಗರು ಅವರ ಲೋಪಗಳನ್ನು ಮುಚ್ಚಿಕೊಳ್ಳಲು ಬಾಯಿಗೆ ಬಂದ ಸ್ಟೇಟ್‌ಮೆಂಟ್ ಕೊಡುತ್ತಾರೆ. ಹಿಜಾಬ್ ಯಾರು ಪ್ರಾರಂಭ ಮಾಡಿದ್ದು ಅನ್ನೋದು ಜಗತ್ತಿಗೆ ಗೊತ್ತಿದೆ. ಅದನ್ನೆಲ್ಲ ನೀವೇ ತೋರಿಸಿದ್ದೀರಿ. ಅದರ ಹಿಂದಿರುವ ಶಕ್ತಿಗಳೆಲ್ಲ ಕಾಂಗ್ರೆಸ್ ಮಿತ್ರೇ ಎಂದು ಕಿಡಿಕಾರಿದರು.

ಎಲ್ಲವನ್ನೂ ಕಾನೂನುಬಾಹಿರವಾಗಿ ಮಾಡೋದು. ಅದನ್ನು ಇನ್ನೊಬ್ಬರ ಮೇಲೆ ಗೂಬೆ ಕೂರಿಸಿಕೊಂಡು ಹೋಗೋದು. ಇದೊಂದು ಕಾಂಗ್ರೆಸ್ಸಿಗರಿಗೆ ರೂಢಿ ಆಗೋಗಿದೆ. ಅದಕ್ಕೆಲ್ಲ ಹೆಚ್ಚಿನ ಮಹತ್ವ ಕೊಡುವ ಅಗತ್ಯವಿಲ್ಲ ಎಂದರು.

ಕೊಡಗಿನಲ್ಲಿ ಹಿಂದೂ ಕಾರ್ಯಕರ್ತರಿಗೆ ಶಸ್ತ್ರಾಸ್ತ್ರ ತರಬೇತಿ ವಿಚಾರಕ್ಕೆ ಪ್ರತಿಕ್ರಿಯಿಸಿ, ಕಾನೂನುಬಾಹಿರವಾಗಿ ಯಾವುದಿದೆ ಅದ್ಯಾವುದಕ್ಕೂ ಅವಕಾಶ ಕೊಡೋದಿಲ್ಲ ಎಂದ ಅವರು, ಜಾಮಿಯಾ ಮಸೀದಿಯಲ್ಲಿ ಹನುಮನ ಪೂಜೆಗೆ ಅವಕಾಶ ಕೋರಿ ಮನವಿ ವಿಚಾರಕ್ಕೆ ಪ್ರತಿಕ್ರಿಯಿಸಿ, ಯಾರಾರು ಅರ್ಜಿ ಕೊಡ್ತಾರೋ ಕೊಡಲಿ. ಕಾನೂನು ಪ್ರಕಾರ ಪರಿಶೀಲನೆ ಮಾಡುತ್ತೇವೆ ಎಂದರು.

ಬಿಜೆಪಿಯಿಂದ ಮಾತ್ರ ಜನಪರ ಕೆಲಸ ಸಾಧ್ಯ: ಸಚಿವ ಅಶ್ವತ್ಥ್ ನಾರಾಯಣ



ಮಂಡ್ಯ,ಮೇ 16(ಮೋಹನ್‌ರಾಜ್)– ಜನಪರ ಕೆಲಸ ಮಾಡಲು ಬಿಜೆಪಿ ಪಕ್ಷ ಬಿಟ್ಟರೆ ಬೇರೆ ಯಾವ ಪಕ್ಷಗಳಿಂದಲೂ ಸಾಧ್ಯವಿಲ್ಲ. ಬೇರೆ ಪಕ್ಷಗಳು ಕುಟುಂಬ ಆಧಾರಿತವಾಗಿ ಕೆಲಸ ಮಾಡುತ್ತವೆ. ಅವರಿಗೆ ಉದ್ಯೋಗ ಆಗುತ್ತದೆ, ಆದರೆ ಸಮಾಜಕ್ಕೆ ಒಳ್ಳೆಯದು ಮಾಡಲ್ಲ ಎಂದು ಉನ್ನತ ಶಿಕ್ಷಣ ಹಾಗೂ ಐಟಿ–ಬಿಟಿ ಸಚಿವ ಡಾ. ಸಿ.ಎನ್.ಅಶ್ವತ್ಥ್ ನಾರಾಯಣ ಇಂದಿಲ್ಲಿ ತಿಳಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದ ವಿಧಾನಪರಿಷತ್ ಚುನಾವಣೆ ಸಂಬಂಧ ಸೋಮವಾರ ನಗರದ ಮಾಂಡವ್ಯ ಶಿಕ್ಷಣ ಸಮೂಹ ಸಂಸ್ಥೆಗಳಲ್ಲಿ ಏರ್ಪಡಿಸಿದ್ದ ಮತದಾರರ ಭೇಟಿ, ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪದವೀಧರ ವಿದ್ಯಾವಂತರಾದ ತಾವುಗಳು ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದರು.

ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಚಿಕ್ಕಂದಿನಿಂದಲೇ ಸಂಘಟನೆಯಲ್ಲಿ ತೊಡಗಿಸಿಕೊಂಡು ರಾಜಕೀಯ ಕ್ಷೇತ್ರದಲ್ಲೂ ಕೆಲಸ ಮಾಡಿ ಅನೇಕರನ್ನು ನಾಯಕರನ್ನಾಗಿ ಬೆಳೆಸಿದ್ದಾರೆ. ಕಳೆದ ಬಾರಿ ಕಡಿಮೆ ಅಂತರದಲ್ಲಿ ಸೋತಿದ್ದಾರೆ. ಈ ಬಾರಿ ಮತ್ತೆ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದು, ಅವರಿಗೆ ಪ್ರಥಮ ಪ್ರಾಶಸ್ತ್ಯ ಮತ ಮತ್ತು ಬೆಂಬಲ ಕೊಡಬೇಕು ಎಂದು ಹೇಳಿದರು.

ಸಮಾಜಕ್ಕೆ ಬಹುಮುಖ್ಯವಾದುದು ಶಿಕ್ಷಣ, ಎಲ್ಲಾ ಸಮಸ್ಯೆಗಳಿಗೆ ಶಿಕ್ಷಣದ ಮೂಲಕ ಪರಿಹಾರ ಕೊಂಡುಕೊಳ್ಳಬಹುದು. ಶಿಕ್ಷಣದ ಗುಣಮಟ್ಟದಲ್ಲಿ ಕಡಿಮೆ ಇರಬಾರದು ಎಂದು ಶಿಕ್ಷಣದಲ್ಲಿ ಗುಣಮಟ್ಟವನ್ನು ಸರಿಪಡಿಸುವ ನಿಟ್ಟಿನಲ್ಲಿ ಮೊದಲ ಆದ್ಯತೆಯಾಗಬೇಕು ಎಂದು ಹೇಳಿದರು. ಈ ವರ್ಷದಿಂದಲೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುತ್ತಿದ್ದೇವೆ. ಉನ್ನತ ಶಿಕ್ಷಣದಲ್ಲಿ ಸುಧಾರಣೆ ತರುತ್ತಿದ್ದೇವೆ. ದೇಶದಲ್ಲೇ ನಮ್ಮ ಸರ್ಕಾರ ಡಿಜಿಟಲೀಕರಣ ವ್ಯವಸ್ಥೆ ಜಾರಿಗೊಳಿಸುತ್ತಿದ್ದೇವೆ. ರಾಷ್ಟ್ರದ ಬೇರೆ ಯಾವ ರಾಜ್ಯಗಳಲ್ಲೂ ಇಲ್ಲ. ಸ್ಮಾರ್ಟ್ ಕ್ಲಾಸ್, ಮ್ಯಾನೇಜ್‌ಮೆಂಟ್ ಸ್ಟಡೀಸ್ ಸೇರಿದಂತೆ ಗುಣಮಟ್ಟದ ಶಿಕ್ಷಣ ಕ್ಷೇತ್ರವನ್ನು ಎದುರು ನೋಡುತ್ತಿರುವುದರಿಂದ ಹೆಚ್ಚಿನ ಸಾಧನೆ ಮಾಡುತ್ತಿದ್ದೇವೆ ಎಂದರು. ಕೋವಿಡ್ ನಂತರದ ದಿನಗಳಲ್ಲಿ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಮುಚ್ಚಿಹೋಗಿವೆ. ಕೌಶಲ್ಯ ಶಿಕ್ಷಣ ಪಡೆದಾಗ ಗ್ರಾಮೀಣ ಭಾಗದಲ್ಲೂ ಉದ್ಯೋಗ ಸೃಷ್ಟಿ ಮಾಡಬಹುದಾಗಿದೆ. ಮನೆಯಲ್ಲೇ ಕುಳಿತು ಉದ್ಯೋಗ ಮಾಡಬಹುದು. ರಾಜ್ಯದಲ್ಲಿ ಉದ್ಯೋಗದ ಕೊರತೆ ಇಲ್ಲ. ಯಾವ ರೀತಿಯ ಶಿಕ್ಷಣ ಪಡೆದಿದ್ದಾರೋ ಅದಕ್ಕೆ ಅರ್ಹ ಉದ್ಯೋಗ ದೊರೆಯುತ್ತದೆ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಬೇರೆಯವರು ಆಶ್ವಾಸನೆ, ಹೇಳಿಕೆಗಳ ಮೂಲಕ ಹೊಟ್ಟೆ ತುಂಬಿಸುವ ಕೆಲಸ ಮಾಡುತ್ತಿದ್ದಾರೆ. ಆದರೆ ಇಂತಹುದಕ್ಕೆ ಮಾನ್ಯತೆ ಇಲ್ಲ ಎಂದು ಹೇಳಿದರು.

ಮೈಸೂರು ವಿ.ವಿ. ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜ್‌ಗೌಡ, ಮಾಂಡವ್ಯ ಸಮೂಹ ಸಂಸ್ಥೆ ಅಧ್ಯಕ್ಷ ಪ್ರೊ.ಬಿ.ಶಿವಲಿಂಗಯ್ಯ ಮಾತನಾಡಿದರು.

ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಮೈ.ವಿ.ರವಿಶಂಕರ್, ಎಸ್‌ಬಿಇಟಿ ಕಾರ್ಯದರ್ಶಿ ಮೀರಾ ಶಿವಲಿಂಗಯ್ಯ, ನಿರ್ದೇಶಕಿ ಡಾ.ಹೇಮಾ ರವೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಜೆ.ವಿಜಯಕುಮಾರ್, ಮಂಡ್ಯ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಿ.ಪಿ.ಉಮೇಶ್, ಮೈಷುಗರ್ ಅಧ್ಯಕ್ಷ ಶಿವಲಿಂಗೇಗೌಡ, ಮುಖಂಡರಾದ ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ, ನಾಗಣ್ಣಗೌಡ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಜಿಲ್ಲಾದ್ಯಂತ ಶಾಲೆಗಳು ಆರಂಭ

ಮಂಡ್ಯ,ಮೇ 16(ಮೋಹನ್‌ರಾಜ್)– ಮಂಡ್ಯ ಸೇರಿದಂತೆ ಜಿಲ್ಲಾದ್ಯಂತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಇಂದು ಆರಂಭಗೊಂಡವು. ಪ್ರತಿ ಶಾಲೆಯಲ್ಲೂ ಸಂಸ್ಥೆಯ ಆಡಳಿತ ಮಂಡಳಿ ಖುದ್ದಾಗಿ ನಿಂತು ಹೂ ಗುಚ್ಛ ಹಾಗೂ ಸಿಹಿ ನೀಡಿ ಮಕ್ಕಳನ್ನು ಸ್ವಾಗತಿಸಿದರು.



ಜಿಲ್ಲೆಯ ಪ್ರತಿ ಸರ್ಕಾರಿ ಶಾಲೆಯಲ್ಲೂ ಮಾವಿನ ತೋರಣ, ಬಾಳೆ ಕಂದು ಕಟ್ಟಿ ಶಾಲೆಗಳನ್ನು ಶೃಂಗರಿಸಲಾಗಿತ್ತು. ಖಾಸಗಿ ಶಾಲೆಗಳಲ್ಲೂ ಸಹ ಪ್ರತಿ ಕೊಠಡಿಗಳು ಹಾಗೂ ಶಾಲಾ ಆವರಣಗಳನ್ನು ಶೃಂಗರಿಸಿ ಮಕ್ಕಳನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು.

ಮಂಡ್ಯ ತಾಲೂಕಿನ ಹನಕೆರೆಯಲ್ಲಿರುವ ಶಾಸಕ ಎಂ.ಶ್ರೀನಿವಾಸ್ ಒಡೆತನದ ವಿವೇಕ ಶಾಲೆಯಲ್ಲಿ ಖುದ್ದು ಶಾಸಕ ಎಂ.ಶ್ರೀನಿವಾಸ್ ಅವರೇ ನಿಂತು ಮಕ್ಕಳನ್ನು ಸ್ವಾಗತಿಸಿ, ಆಟಿಕೆ ಹಾಗೂ ಸಿಹಿ ನೀಡಿದರು. ಜೊತೆಗೆ ಮಕ್ಕಳಿಗೆ ಮೊದಲ ದಿನ ತಾವೇ ನಿಂತು ಬೋಧನೆ ಮಾಡಿ, ಮಕ್ಕಳ ಮನ ಗೆದ್ದರು. ಮತ್ತೊಂದೆಡೆ ಪಾಂಡವಪುರ ತಾಲೂಕಿನ ಚಿನಕುರಳಿಯ ಎಸ್‌ಟಿಜಿ ಪಬ್ಲಿಕ್ ಶಾಲೆಯಲ್ಲೂ ಸಹ ಕ್ಷೇತ್ರದ ಶಾಸಕ ಸಿ.ಎಸ್.ಪುಟ್ಟರಾಜು ಪ್ರೀತಿಯಿಂದ ಮಕ್ಕಳನ್ನು ಬರಮಾಡಿಕೊಂಡರು. ಕೊರೊನಾ ಹಿನ್ನೆಲೆಯಲ್ಲಿ ಕಳೆದ 2019ರಿಂದ 2021ರವರೆಗೆ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳು ಸಮರ್ಪಕವಾಗಿ ನಡೆಯದೇ ಮಕ್ಕಳ ವಿದ್ಯಾಭ್ಯಾಸ ಕಗ್ಗಂಟಾಗಿತ್ತು. ಆದರೆ ಈ ಬಾರಿಯಾದರೂ ಕೊರೊನಾ ದೂರವಾಗಿ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ಸಿಗಲಿ ಎಂಬುದು ಮಕ್ಕಳನ್ನು ಬಿಡಲು ಬಂದಿದ್ದ ಪೋಷಕರ ಅಭಿಪ್ರಾಯವಾಗಿತ್ತು.

ಮೇನಲ್ಲೇ ನೂರಡಿ ತಲುಪಿ ದಾಖಲೆ ಬರೆದ ಕೆಆರ್‌ಎಸ್

ಶ್ರೀರಂಗಪಟ್ಟಣ,ಮೇ 16(ವಿನಯ್ ಕಾರೇಕುರ)–ವಿಶ್ವವಿಖ್ಯಾತ ಕೃಷ್ಣರಾಜಸಾಗರ ಅಣೆಕಟ್ಟೆ ಮೇ ತಿಂಗಳಲ್ಲಿ ವಿಶೇಷ ದಾಖಲೆ ಬರೆದಿದೆ. ಬರೋಬ್ಬರಿ ಹದಿನಾಲ್ಕು ವರ್ಷಗಳ ನಂತರ ಮೇ ತಿಂಗಳಲ್ಲಿ 100 ಅಡಿ ನೀರು ಸಂಗ್ರಹವಾಗಿದೆ.

ಸಾಮಾನ್ಯವಾಗಿ ಮೇನಲ್ಲಿ ಬಿಸಿಲು ಜಾಸ್ತಿಯೇ ಇರುತ್ತದೆ. ಪರಿಣಾಮ ಡ್ಯಾಂನಲ್ಲಿ ನೀರಿನ ಮಟ್ಟ ಕುಸಿತ ಕಾಣುತ್ತದೆ. ಆದರೆ ಈ ವರ್ಷ ಬೇಸಿಗೆಯ ನಡುವೆಯೂ ಅಣೆಕಟ್ಟೆಯಲ್ಲಿ 100 ಅಡಿ ನೀರಿನ ಸಂಗ್ರಹವಾಗಿದೆ. ಇದು ಜಿಲ್ಲೆಯ ರೈತರ ಮೊಗದಲ್ಲಿ ಮಂದಹಾಸ ಮೂಡುವಂತೆ ಮಾಡಿದೆ.

ಉತ್ತಮ ಮಳೆ: 2021ರಲ್ಲಿ ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗಿತ್ತು. ಪರಿಣಾಮ ಅಣೆಕಟ್ಟೆ ಗರಿಷ್ಠ 124.80 ಅಡಿ ನೀರಿನ ಸಂಗ್ರಹವಾಯಿತು. ಮಳೆ ಕ್ಷೀಣಿಸಿದ ಹಾಗೂ ಹೊರಹರಿವಿದ್ದ ಕಾರಣ ಏ.30 ರಂದು ನೀರಿನ ಮಟ್ಟ 99.35 ಅಡಿಗೆ ತಲುಪಿತ್ತು. ಆದರೆ ಕಳೆದ ಕೆಲ ದಿನದಿಂದ ನಿರಂತರವಾಗಿ ಕಾವೇರಿ ಹಿನ್ನೀರಿನ ಪ್ರದೇಶದಲ್ಲಿ ಸುರಿದ ಮಳೆಯ ಕಾರಣ ಅಣೆಕಟ್ಟೆಯ ಒಳಹರಿವು ಹೆಚ್ಚಾಗಿದೆ. ಅಂತೆಯೇ ಮೇ 14ರಂದು ಅಣೆಕಟ್ಟೆಯ ನೀರಿನ ಮಟ್ಟ 100.03 ಅಡಿಗೆ ತಲುಪಿದೆ. ಒಳಹರಿವು 1,253 ಕ್ಯೂಸೆಕ್ ಹಾಗೂ ಹೊರ ಹರಿವು 1,069 ಕ್ಯೂಸೆಕ್ ಇದೆ. ಇನ್ನು 2008ರಲ್ಲಿ ಕೂಡ ಮೇ ತಿಂಗಳಲ್ಲಿ ಏರಿಕೆ ಕಂಡಿಲ್ಲ. ಆದರೆ ಅಂದು ನೀರಿನ ಸಂಗ್ರಹ 115,30 ಅಡಿ ಇತ್ತು. ಪ್ರಸ್ತುತ ಪರಿಸ್ಥಿತಿಯಲ್ಲಿ ಡ್ಯಾಂನಲ್ಲಿ ನೀರಿನ ಸಂಗ್ರಹ ಉತ್ತಮವಾಗಿದೆ.



ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಮಾಹಿತಿಯಂತೆ ಮುಂದಿನ ಜೂನ್‌ವರೆಗೆ ಮಂಡ್ಯ, ಮೈಸೂರು, ಬೆಂಗಳೂರು, ರಾಮನಗರ ಜಿಲ್ಲೆಗಳ ಜನತೆಗೆ ಕುಡಿಯುವ ನೀರಿಗೆ ಯಾವುದೇ ಅಭಾವ ಉಂಟಾಗುವುದಿಲ್ಲ. ಆದರೆ ಒಪ್ಪಂದದಂತೆ ಬೆಳೆಗೆ ಸಮರ್ಪಕವಾಗಿ ನೀರು ಸಿಗುವುದಿಲ್ಲವೆಂಬ ಆತಂಕವೂ ಜಿಲ್ಲೆಯ ರೈತರಲ್ಲಿದೆ.

ಹತ್ತು ವರ್ಷದಲ್ಲಿ ನೀರಿನ ಸಂಗ್ರಹ: ಕಳೆದ ವರ್ಷದಲ್ಲಿ ಮೇ 14ರಂದು ನೀರಿನ ಸಂಗ್ರಹವನ್ನು ಗಮನಿಸಿದರೆ 2012ರಲ್ಲಿ 83.70 ಅಡಿ 2013 ರಲ್ಲಿ 64.12, 2014 ರಲ್ಲಿ 84.27, 2015 ರಲ್ಲಿ 84.18, 2016 ರಲ್ಲಿ 79.24, 2017ರಲ್ಲಿ 70.03, 2018 ರಲ್ಲಿ 70.13, 2019ರಲ್ಲಿ 82.05, 2020ರಲ್ಲಿ 96.28, 2021ರಲ್ಲಿ 88.50 ಅಡಿ ಇತ್ತು.

ಸಂತೆ ಜಾತ್ರೆ ನಿಷೇಧ

ಮಂಡ್ಯ, ಮೇ 16–ಗ್ರಾಮ ಪಂಚಾಯಿತಿಯ ಉಪಚುನಾವಣೆ ಮತದಾನವು ಮೇ 20 ರಂದು ನಡೆಯಲಿದೆ. ಮುಕ್ತ ಮತ್ತು ನ್ಯಾಯೋಚಿತ ಚುನಾವಣೆ ನಡೆಯುವ ಸಲುವಾಗಿ ಉಪ ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೇ.20 ರಂದು ಯಾವುದೇ ಜಾತ್ರೆ (ದನಗಳ ಜಾತ್ರೆಯೂ ಸೇರಿದಂತೆ) ಸಂತೆ ಹಾಗೂ ಇತ್ಯಾದಿ ಉತ್ಸವಗಳನ್ನು ನಿಷೇಧಿಸಿ ಜಿಲ್ಲಾಧಿಕಾರಿ ಎಸ್. ಅಶ್ವತಿ ಅವರು ಆದೇಶ ಹೊರಡಿಸಿದ್ದಾರೆ.

ಪತ್ನಿ ದಿನವನ್ನೂ ಆಚರಿಸಬೇಕು

ಮುಂಬೈ: ತಾಯಂದಿರ ದಿನದಂತೆಯೇ ಪತ್ನಿ ದಿನವನ್ನೂ ಆಚರಿಸಬೇಕೆಂದು ಕೇಂದ್ರ



ಸಾಮಾಜಿಕ ನ್ಯಾಯ ಖಾತೆ ರಾಜ್ಯ ಸಚಿವ ರಾಮದಾಸ್ ಅಠಾವಳೆ ಹೇಳಿದ್ದಾರೆ. ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಅವರು, ತಾಯಿಯು ಜನ್ಮ ನೀಡಿದರೆ, ಪತ್ನಿಯು ಒಳ್ಳೆಯ ಮತ್ತು ಕೆಟ್ಟ ಸಮಯದಲ್ಲಿ ತನ್ನ ಪತಿಗೆ ಬೆಂಬಲವಾಗಿ ನಿಲ್ಲುತ್ತಾಳೆ. ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೊಬ್ಬ ಮಹಿಳೆ ಇರುತ್ತಾಳೆ. ಆದ್ದರಿಂದ ನಾವು ಪತ್ನಿ ದಿನವನ್ನು ಆಚರಿಸಬೇಕು. ಪ್ರತಿ ವರ್ಷ ಮೇ ತಿಂಗಳ 2ನೇ ಭಾನುವಾರವನ್ನು ಅಂತರರಾಷ್ಟ್ರೀಯ ತಾಯಂದಿರ ದಿನ ಆಚರಿಸಲಾಗುತ್ತಿದೆ ಎಂದರು.

ಒಂದನೇ ಪುಟದಿಂದ

ಮೈಸೂರಲ್ಲಿ ಶಾಲೆಗಳು ಪ್ರಾರಂಭ

ಉತ್ಸಾಹದಿಂದಲೇ ಕರೆತಂದು ಬಿಡುತ್ತಿದ್ದರು. ಕೋವಿಡ್ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಶಾಲೆಗಳಲ್ಲಿ ಭೌತಿಕ ತರಗತಿಗಳು ನಡೆಯದೇ ಮಕ್ಕಳು ಮನೆಯಲ್ಲೇ ಆನ್‌ಲೈನ್ ಕಲಿಕೆಯಲ್ಲಿ ನಿರತವಾಗಿದ್ದವು. ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಸ್ಯಾನಿಟೈಸರ್ ನೀಡುವುದು, ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದೂ ಸೇರಿದಂತೆ ಎಲ್ಲಾ ಅಗತ್ಯ ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದ್ದು, ಟೊಮೆಟೋ ಜ್ವರದ ಬಗ್ಗೆಯೂ ಮುಂಜಾಗ್ರತಾ ಕ್ರಮ ವಹಿಸಲಾಗುತ್ತಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದರು.

ಸ್ವಚ್ಛ ವಾತಾವರಣ, ಕುಡಿಯಲು ಶುದ್ಧ ನೀರು, ಶೌಚಾಲಯ ಸೇರಿದಂತೆ ಶಾಲೆಗಳಲ್ಲಿ ಮಕ್ಕಳಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಲಾಗಿದ್ದು, ಆರೋಗ್ಯ ಇಲಾಖೆ ಸಿಬ್ಬಂದಿ ಆಗಿಂದಾಗ್ಗೆ ಶಾಲೆಗಳಿಗೆ ತೆರಳಿ, ಮಕ್ಕಳ ಆರೋಗ್ಯದ ಮೇಲೆ ನಿಗಾ ವಹಿಸುತ್ತಿದ್ದಾರೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯ 3,365 ಶಾಲೆಗಳಲ್ಲೂ ಶಾಲಾ ಆರಂಭಕ್ಕೆ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ತಾವೂ ಸಹ ಮೈಸೂರಿನ ಹೂಟಗಳ್ಳಿ, ಇಟ್ಟಿಗೆಗೂಡು, ಎನ್‌ಟಿಎಂಎಸ್, ನಂಜನಗೂಡು ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ಮಕ್ಕಳನ್ನು ಆತ್ಮೀಯವಾಗಿ ಬರಮಾಡಿಕೊಂಡು ಪಠ್ಯ ಪುಸ್ತಕ, ಲೇಖನ ಸಾಮಗ್ರಿ ವಿತರಿಸಿದ್ದಾಗಿಯೂ ರಾಮಚಂದ್ರರಾಜೇ ಅರಸ್ ತಿಳಿಸಿದರು.

ಮೊದಲ ದಿನದಿಂದಲೇ ಎಲ್ಲಾ ಶಾಲೆಗಳಲ್ಲಿ ಬಿಸಿಯೂಟ ವ್ಯವಸ್ಥೆ ಸಮರ್ಪಕವಾಗಿದ್ದು, ಎಲ್ಲಿಯೂ ಸಮಸ್ಯೆಯಾಗಿರುವ ಬಗ್ಗೆ ಮಾಹಿತಿ ಬಂದಿಲ್ಲ. ಕೆಲ ಶಾಲೆಗಳ ಅಡುಗೆ ಮನೆಗೆ ಭೇಟಿ ನೀಡಿ ಊಟ ತಯಾರಿಸುವ ಪ್ರಕ್ರಿಯೆ ಪರಿಶೀಲಿಸಿದ್ದಲ್ಲದೇ, ಊಟ ಸವಿದು ಗುಣಮಟ್ಟವನ್ನೂ ಪರೀಕ್ಷಿಸಿದ್ದೇನೆ ಎಂದು ರಾಮಚಂದ್ರರಾಜೇ ಅರಸ್ ಹೇಳಿದರು.

ಆಟೋ, ಕ್ಯಾಬ್, ಶಾಲಾ ಬಸ್‌ಗಳಲ್ಲಿ ಮಕ್ಕಳು ಸುರಕ್ಷಿತವಾಗಿ ಬಂದು ಹೋಗಿದ್ದು, ಶಿಕ್ಷಕರು ಮಕ್ಕಳ ಸುರಕ್ಷತೆ ಬಗ್ಗೆಯೂ ಗಮನಹರಿಸಬೇಕೆಂಬ ಸೂಚನೆ ನೀಡಲಾಗಿದೆ. ಆಯಾ ಬಿಇಓಗಳೂ ಸಹ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಮಳೆ ಇಲ್ಲದಿದ್ದರೆ ಇನ್ನೂ ಹೆಚ್ಚಿನ ಸಂಖ್ಯೆಯ ಹಾಜರಾತಿ ಇರುತ್ತಿತ್ತು. ಕೆಲವು ಪೋಷಕರು ಮಳೆಯಿಂದಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವ ಧೈರ್ಯ ಮಾಡಿಲ್ಲ. ಮಳೆ ನಿಲ್ಲುವವರೆಗೆ ಶಾಲೆ ಆರಂಭಿಸಬಾರದೆಂದೂ ಕೆಲ ಪೋಷಕರು ಮನವಿ ಮಾಡಿದ್ದರು. ಆದರೆ ರಾಜ್ಯ ಸರ್ಕಾರದ ಆದೇಶ ಪಾಲಿಸಬೇಕಾಗಿರುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಉಪನಿರ್ದೇಶಕರು ತಿಳಿಸಿದ್ದಾರೆ.

ಸಮವಸ್ತ್ರ, ಸೈಕಲ್ ವಿತರಣೆ

ನಿರ್ಮಾಣವಾಗಲಿ ಎನ್ನುವ ಆಶಯ ನಮ್ಮದು. ಶಾಲೆಯಲ್ಲಿಯೇ ಕಲಿತಾಗ ಮಕ್ಕಳಿಗೆ ಒಳ್ಳೆಯ ಕಲಿಕೆ ಸಾಧ್ಯವಾಗುತ್ತದೆ ಎಂದು ಹೇಳಿದರು. ಇದೇ ವೇಳೆ ಶಾಲಾ ಮಕ್ಕಳಿಗೆ ಶೀಘ್ರದಲ್ಲಿಯೇ ಪಠ್ಯ ಪುಸ್ತಕ, ಸಮವಸ್ತ್ರ, ಸೈಕಲ್ ವಿತರಿಸಲಾಗುತ್ತದೆ ಎಂದು ಭರವಸೆ ನೀಡಿದರು. ರಾಜ್ಯದಲ್ಲಿ ಇಂದಿನಿಂದ ಎಲ್ಲಾ ಮಾದರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಪುನರಾರಂಭಗೊಂಡಿದ್ದು, ಈ ಮೂಲಕ 2 ವರ್ಷಗಳ ಬಳಿಕ ನಿಗದಿತ ಸಮಯಕ್ಕೆ ಶೈಕ್ಷಣಿಕ ವರ್ಷ ಆರಂಭವಾಗಿದೆ. ಅಕ್ಷರ ದೇಗುಲಗಳನ್ನು ತಳಿರು ತೋರಣಗಳಿಂದ ಸಿಂಗರಿಸಿ, ಮಕ್ಕಳನ್ನು ಸಂತಸದಿಂದ ಸ್ವಾಗತಿಸಲಾಗಿದೆ.

ಸಭಾಪತಿ ಸ್ಥಾನಕ್ಕೆ ಹೊರಟ್ಟಿ ರಾಜೀನಾಮೆ

ರಾಜೀನಾಮೆ ನೀಡುವುದಾಗಿ ಘೋಷಿಸಿದರಲ್ಲದೆ, ಮಂಗಳವಾರ ಬಿಜೆಪಿ ಸೇರ್ಪಡೆಯಾಗುವುದಾಗಿಯೂ ತಿಳಿಸಿದರು. ಪರಿಷತ್ ಸಚಿವಾಲಯದ ಆಡಳಿತದಲ್ಲಿ ಪ್ರಾಮಾಣಿಕ ಪಾರದರ್ಶಕತೆಗೆ ಆದ್ಯತೆ ನೀಡಿದ್ದೇನೆ. ಕಲುಷಿತವಾದ ರಾಜಕಾರಣದಲ್ಲಿ ನಮ್ಮಂತವರಿಗೆ ನೋವು ಆಗಿದೆ. ಆದರೆ ಮನಸ್ಸು ಇಲ್ಲದೆ ಇದ್ದರೂ ರಾಜಕೀಯದಲ್ಲಿ ಇರಬೇಕಾಗುತ್ತದೆ ಎಂದರು. ಬಿಜೆಪಿ ಸೇರ್ಪಡೆ ಸಂಬಂಧಿಸಿದಂತೆ ಯಾವುದೇ ಷರತ್ತು ಹಾಕಿಲ್ಲ.ಅಮಿತ್ ಶಾ ಭೇಟಿ ವೇಳೆ ಯಾವುದೇ ಚರ್ಚೆ ಆಗಿಲ್ಲ ಎಂದರು. ಬಿಜೆಪಿ ರಾಜಕೀಯ ನಿಲುವಿನ ಬಗ್ಗೆ ಆಕ್ಷೇಪ ಇಲ್ಲ. ನನಗೆ ಎಲ್ಲ ಪಕ್ಷದವರು ಸಹಕಾರ ಕೊಟ್ಟಿದ್ದಾರೆ ಎಂದರು.

ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ

ಯುವಕ, ಆತನ ಕುಟುಂಬದ ವಿರುದ್ಧ ಯುವತಿ ದೂರು

ಕ್ರೈಂ ಬಾಕ್ಸ್

ನಾಗಮಂಗಲ, ಮೇ 16– ಪ್ರೀತಿಯ ನಾಟಕವಾಡಿ, ನಂತರ ಮದುವೆಯಾಗುವುದಾಗಿ ನಂಬಿಸಿ, ಅತ್ಯಾಚಾರ ಮಾಡಿದ್ದಲ್ಲದೆ ಜಾತಿ ಕಾರಣದಿಂದಾಗಿ ತನ್ನನ್ನು ಮದುವೆಯಾಗಲು ನಿರಾಕರಿಸಿ ಬೇರೊಂದು ಹುಡುಗಿಯನ್ನು ಮದುವೆಯಾಗಿದ್ದಾನೆ ಎಂದು ನಾಗಮಂಗಲ ತಾಲೂಕು ಲಕ್ಕೇಗೌಡಕೊಪ್ಪಲು ಗ್ರಾಮದ ಯುವಕ ಸೇರಿದಂತೆ ಆತನ ಕುಟುಂಬದ ಆರು ಮಂದಿ ವಿರುದ್ಧ ಮಾಗಡಿ ತಾಲೂಕು ವಿಶ್ವನಾಥಪುರ ಗ್ರಾಮದ ಯುವತಿ ದೂರು ದಾಖಲಿಸಿದ್ದಾಳೆ.

ತಾನು ಬೆಂಗಳೂರಿನ ಪೀಣ್ಯ ಎರಡನೇ ಹಂತದಲ್ಲಿರುವ ಕಾಂಪೋನಿಯಸ್ ಟೆಕ್ನಾಲಜಿಯಲ್ಲಿ ಕೆಲಸ ಮಾಡುತ್ತಿದ್ದಾಗ ಮೈಕ್ರೋಮ್ಯಾಕ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಗಿರೀಶ್ ಎಂಬಾತ 2019 ರಲ್ಲಿ ತನಗೆ ಪರಿಚಯವಾಗಿ ತಾವಿಬ್ಬರು ಪರಸ್ಪರ ಪ್ರೀತಿಸುತ್ತಿದ್ದೆವು. ಕಳೆದ ವರ್ಷ ಲಾಕ್‌ಡೌನ್ ಸಮಯದಲ್ಲಿ ತನ್ನ ತಾಯಿ ಊರಿಗೆ ಹೋಗಿದ್ದಾರೆ. ಮನೆ ಸ್ವಚ್ಛ ಮಾಡಬೇಕೆಂದು ತನ್ನನ್ನು ಮನೆಗೆ ಕರೆಸಿಕೊಂಡ ಗಿರೀಶ್ ಅತ್ಯಾಚಾರವೆಸಗಿದ್ದಾನೆ. ಅಲ್ಲದೆ ಈಗಲೇ ಮದುವೆ ಮಾಡಿಕೊಳ್ಳುವುದು ಬೇಡ ನನಗೆ ಸರ್ಕಾರಿ ಕೆಲಸ ಸಿಗಲಿದೆ, ಆಗ ಮನೆಯವರನ್ನು ಒಪ್ಪಿಸಿ ಮದುವೆ ಮಾಡಿಕೊಳ್ಳೋಣ ಎಂದು ಆತ ಹೇಳಿದ್ದನೆಂದು ದೂರಿನಲ್ಲಿ ಯುವತಿ ತಿಳಿಸಿದ್ದಾಳೆ.

ತಾನು ಗಿರೀಶ್‌ನ ಗ್ರಾಮಕ್ಕೆ ಹಲವು ಬಾರಿ ಬಂದಿದ್ದು, ಆತನ ತಾಯಿ, ತಂದೆ, ತಂಗಿ, ತಮ್ಮ, ಚಿಕ್ಕಮ್ಮ ಮುಂತಾದವರು ನನ್ನನ್ನು ಸೊಸೆ ಮಾಡಿಕೊಳ್ಳುವುದಾಗಿ ಭರವಸೆ ನೀಡಿದ್ದರು. ಆನಂತರ ಪರಿಶಿಷ್ಟ ಜಾತಿಗೆ ಸೇರಿದವಳು ಎಂದು ಗೊತ್ತಾದ ನಂತರ ನಿನ್ನನ್ನು ಮದುವೆಯಾದರೆ ಗ್ರಾಮದಲ್ಲಿ ನಮ್ಮ ಮರ್ಯಾದೆ ಹೋಗುತ್ತದೆ ಎಂದು ತಿಳಿಸಿ ಗಿರೀಶ್‌ನ ಮನೆಯವರು ಮದುವೆಗೆ ನಿರಾಕರಿಸಿದ್ದರು. ಆದರೆ ಗಿರೀಶ್ ನೀನು ನನಗೆ 3 ಲಕ್ಷ ರೂ.ಕೊಟ್ಟು ಸಹಾಯ ಮಾಡಿದ್ದೀಯಾ, ನಿನ್ನ ಋಣ ತೀರಿಸಲು ಸಾಧ್ಯವಿಲ್ಲ. ಮನೆಯವರು ಏನೇ ಹೇಳಲಿ ಮೇ 7 ಮತ್ತು 8 ರಂದು ಮದುವೆಯಾಗೋಣ. ಲಗ್ನಪತ್ರಿಕೆ ಮುದ್ರಿಸಿ ಮದುವೆಗೆ ಬೇಕಾದ ಏರ್ಪಾಡುಗಳನ್ನು ಮಾಡಿಕೊಂಡಿರು. ನಾನು ಲಗ್ನಪತ್ರಿಕೆ ತೆಗೆದುಕೊಂಡು ಹೋಗಲು ಬರುತ್ತೇನೆ ಎಂದು ಹೇಳಿದ್ದ.

ಆದರೆ ಆತ ನನ್ನ ಕರೆಯನ್ನೇ ಸ್ವೀಕರಿಸದಿದ್ದಾಗ ಮೇ 5ರಂದು ಅವರ ಗ್ರಾಮಕ್ಕೆ ಹೋಗಿದ್ದೆ. ಆಗ ಅವರ ಮನೆಯವರೆಲ್ಲಾ ನನಗೆ ಹಾಗೂ ಕುಟುಂಬದವರಿಗೆ ಅವಮಾನ ಮಾಡಿದರು. ಗಿರೀಶ್‌ನಿಗೆ ಬೇರೊಂದು ಹುಡುಗಿಯ ಜೊತೆ ನಿಶ್ಚಿತಾರ್ಥ ಆಗಿದೆ ಎಂದು ಆತನೇ ನನ್ನ ಬಳಿ ಹೇಳಿದಾಗ ಮೇ 13ರಂದು ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ದೂರು ಸಲ್ಲಿಸಲು ಹೋದಾಗ ಆತನ ಗ್ರಾಮದ ಮುಖಂಡರು ಠಾಣೆಗೆ ಬಂದು ಆತನನ್ನು ಕರೆತಂದು ಪಂಚಾಯಿತಿ ಮಾಡುವುದಾಗಿ ತಿಳಿಸಿದ್ದರು.

ಆದರೆ ಮೇ 14ರಂದು ಠಾಣೆಗೆ ಬಂದ ಮುಖಂಡರೋರ್ವರು ಗಿರೀಶ್‌ನಿಗೆ ಮೇ 13ರಂದು ಮದುವೆಯಾಗಿದೆ ಎಂದು ರಿಜಿಸ್ಟರ್ ಮ್ಯಾರೇಜ್‌ನ ದಾಖಲೆಯನ್ನು ತೋರಿಸಿದ್ದಾರೆ ಎಂದು ದೂರು ನೀಡಿರುವ ಯುವತಿ, ಗಿರೀಶ್ ಸೇರಿದಂತೆ ಆತನ ಕುಟುಂಬದ ಆರು ಮಂದಿ ವಿರುದ್ಧ ದೂರನ್ನು ದಾಖಲಿಸಿ ಕೊಂಡಿರುವ ನಾಗಮಂಗಲ ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಶಾಲೆ ಕಿಟಕಿ ಸರಳು ಮುರಿದು ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಕಳವು

ಚಾಮರಾಜನಗರ, ಮೇ 16– ಖಾಸಗಿ ಶಾಲೆಯ ಕಿಟಕಿ ಸರಳು ಮುರಿದು ಲ್ಯಾಪ್‌ಟಾಪ್ ಮತ್ತು ಪ್ರೊಜೆಕ್ಟರ್ ಕಳವು ಮಾಡಿರುವ ಘಟನೆ ಚಾಮರಾಜನಗರ ತಾಲೂಕು ಮಲ್ಲಯ್ಯನಪುರ ಗ್ರಾಮದಲ್ಲಿ ವರದಿಯಾಗಿದೆ.

ಅಲ್ಲಿನ ಸವೆಂತ್ ಡೇ ಅಡ್ವೆಂಟಿಸ್ಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಕಿಟಕಿ ಸರಳನ್ನು ಮುರಿದು ಒಳನುಗ್ಗಿದ ಖದೀಮರು ಡೆಲ್ ಕಂಪನಿಯ ಲ್ಯಾಪ್‌ಟಾಪ್ ಮತ್ತು ಎಪ್ಸನ್ ಕಂಪನಿಯ ಪ್ರೊಜೆಕ್ಟರ್ ಕಳವು ಮಾಡಿದ್ದಾರೆ. ಈ ಕೃತ್ಯ ಮೇ 14ರಂದು ರಾತ್ರಿ ನಡೆದಿದ್ದು, ಮೇ 15ರಂದು ಬೆಳಗ್ಗೆ ತಮ್ಮ ಗಮನಕ್ಕೆ ಬಂದಿದೆ ಎಂದು ಶಾಲೆಯ ಪ್ರಾಂಶುಪಾಲ ವಿನೋದ್ ಮ್ಯಾಥ್ಯೂ, ಚಾಮರಾಜನಗರ ಗ್ರಾಮಾಂತರ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಹಾಸನ ಜಿಲ್ಲೆಯಲ್ಲಿ ಪ್ರತ್ಯೇಕ ಅಪಘಾತ: ಐವರ ಸಾವು

ಹಾಸನ, ಮೇ 16– ಹಾಸನ ಜಿಲ್ಲೆಯಲ್ಲಿ ನಡೆದ ಪ್ರತ್ಯೇಕ ಅಪಘಾತಗಳಲ್ಲಿ ಐವರು ಮೃತಪಟ್ಟ ಬಗ್ಗೆ ವರದಿಯಾಗಿದೆ.

ಅರಸೀಕೆರೆ ತಾಲೂಕು ಬಾಣಾವರ ಬಳಿ ಚೆಲುವನಹಳ್ಳಿ ಗೇಟ್ ಬಳಿ ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಬೈಕ್ ಸವಾರ ಸಾವನ್ನಪ್ಪಿದ ಘಟನೆ ಮೇ 13ರಂದು ರಾತ್ರಿ 12.30ರ ಸುಮಾರಿನಲ್ಲಿ ನಡೆದಿದೆ. ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ



ಪಿಳ್ಳೆಗನಹಳ್ಳಿ ನಿವಾಸಿ, ಖಾಸಗಿ ಕಂಪನಿಯ ಇಂಜಿನಿಯರ್ ಮೊಹಮ್ಮದ್ ಜುಬೈರ್ (22) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಹಿಂಬದಿ ಸವಾರ ವಿದ್ಯಾರ್ಥಿ ಧನುಷ್ (17) ತೀವ್ರವಾಗಿ ಗಾಯಗೊಂಡಿದ್ದಾನೆ.

ಅರಸೀಕೆರೆ–ಚನ್ನಪಟ್ಟಣ ರಸ್ತೆಯ ಲಕ್ಷ್ಮೀ ಸ್ಟೀಲ್ಸ್ ಅಂಡ್ ಹಾರ್ಡ್‌ವೇರ್ಸ್ ಮುಂಭಾಗ ಬೈಕ್ (ಕೆಎ13 ಇಇ2043)ನಲ್ಲಿ ತೆರಳುತ್ತಿದ್ದ ಅರಸೀಕೆರೆ ತಾಲೂಕು ಮಹದೇವನಹಳ್ಳಿ ನಿವಾಸಿ ಗಂಗಾಧರ ಎಂಬುವರಿಗೆ ಕಾರೊಂದು (ಕೆಎ13 ಝಡ್2947) ಮುಖಾಮುಖಿ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ಗಂಗಾಧರ್ ಮೃತಪಟ್ಟಿದ್ದಾರೆ. ಈ ಸಂಬಂಧ ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾಸನ–ಹೊಳೆನರಸೀಪುರ ರಸ್ತೆಯಲ್ಲಿ ಬೈಕ್ (ಕೆಎ09 ಇಎಕ್ಸ್3881)ನಲ್ಲಿ ತೆರಳುತ್ತಿದ್ದ ಆಲೂರು ತಾಲೂಕು ಸಿಂಗೋಳನಹಳ್ಳಿ ನಿವಾಸಿ ರಾಜಣ್ಣ (45) ಎಂಬುವರಿಗೆ ಆಲ್ಟೋ ಕಾರು (ಕೆಎ53 ಎನ್7118) ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ನಂತರ ಚಾಲಕ ಕಾರನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಈ ಸಂಬಂಧ ಹಾಸನ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾಸನ–ಸಾಲಗಾಮೆ ರಸ್ತೆಯಲ್ಲಿ ಮೇ 13ರಂದು ಸಂಜೆ 7.30 ರಲ್ಲಿ ಬೈಕ್ (ಕೆಎ13 ಇಎಲ್ 0777)ನಲ್ಲಿ ತೆರಳುತ್ತಿದ್ದ ಹಾಸನ ಪಟ್ಟಣದ ಕುವೆಂಪು ನಗರ ನಿವಾಸಿ ಹೆಚ್.ಸಿ. ಚಂದ್ರು (72) ಅವರಿಗೆ ಟ್ರಾಕ್ಟರ್ (ಕೆಎ13 ಟಿಸಿ 1477) ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟಿದ್ದಾರೆ. ಈ ಸಂಬಂಧ ಹಾಸನ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರಸೀಕೆರೆ ತಾಲೂಕು ಸಿಂಗನಹಳ್ಳಿ ಕೆರೆ ಏರಿ ಮೇಲೆ ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿ ಸಾವನ್ನಪ್ಪಿದ ಘಟನೆ ಸಂಭವಿಸಿದೆ.

ಜಾವಗಲ್ ಹೋಬಳಿ ಮಾದನಹಳ್ಳಿ ನಿವಾಸಿ ಹೇಮಂತ್ (19) ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಈಗ ಸಿಂಗನಹಳ್ಳಿ ಕೆರೆ ಏರಿ ಮೇಲೆ ಹೀರೋ ಫ್ಯಾಷನ್ ಪ್ರೋ (ಕೆಎ13 ಇಡಿ8397)ನಲ್ಲಿ ಮೇ 14ರಂದು ಬೆಳಗ್ಗೆ ಹೋಗುತ್ತಿದ್ದಾಗ ಎದುರಿಗೆ ಬಂದ ಕಾರು (ಕೆಎ04 ಎಂಎಂ6041) ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಹೇಮಂತ್‌ನನ್ನು ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುಲಾಗಿ ಮಾರ್ಗಮಧ್ಯೆಯೇ ಆತ ಸಾವನ್ನಪ್ಪಿರುವುದಾಗಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಯಲ್ಲೇ ಕುಳಿತು ಕೆಲಸ ಮಾಡುವ ಪ್ರಯತ್ನಕ್ಕೆ ಕೈ ಹಾಕಿ 3.48 ಲಕ್ಷ ಕಳೆದುಕೊಂಡ ವಿದ್ಯಾರ್ಥಿ!

ಮೈಸೂರು, ಮೇ 16– ಮನೆಯಲ್ಲೇ ಕುಳಿತು ಕೆಲಸ ಮಾಡಿ ಹಣ ಸಂಪಾದಿಸಬಹುದು ಎಂದು ಆಮಿಷವೊಡ್ಡಿ ವಿದ್ಯಾರ್ಥಿಯೋರ್ವನಿಂದ ಆನ್‌ಲೈನ್ ಮೂಲಕ 3.48 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ.



ಮೂಲತಃ ರಾಯಚೂರು ಜಿಲ್ಲೆ ಬಾಗಲಕೋಟೆ ತಾಲೂಕು ಶಿರೂರು ಗ್ರಾಮದವನಾಗಿದ್ದು, ಮೈಸೂರು ತಾಲೂಕು ಯಲಚನಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ದ್ವಿತೀಯ ವರ್ಷದ ಬಿಎಸ್ಸಿ ವ್ಯಾಸಂಗ ಮಾಡುತ್ತಿರುವ ನಾಗರಾಜ್ ಅಯ್ಯಪ್ಪ ಛಲವಾದಿ (19) ಹಣ ಕಳೆದುಕೊಂಡವನಾಗಿದ್ದು, ಈತ ಮನೆಯಲ್ಲೇ ಕುಳಿತು ಹಣ ಸಂಪಾದನೆ ಮಾಡುವ ಬಗ್ಗೆ ಗೂಗಲ್‌ನಲ್ಲಿ ಹುಡುಕಿದ್ದಾನೆ. ಈ ವೇಳೆ ಕಳೆದ ಜನವರಿ 27ರಂದು ಈತನ ಮೊಬೈಲ್‌ಗೆ ಮೆಸೇಜ್‌ವೊಂದು ಬಂದಿದ್ದು, ಮನೆಯಲ್ಲೇ ಕುಳಿತು ಕೆಲಸ ಮಾಡಿ ದಿನಕ್ಕೆ 3 ಸಾವಿರ ರೂ. ಸಂಪಾದಿಸಬಹುದು ಎಂದು ಆಮಿಷವೊಡ್ಡಲಾಗಿದೆ. ಅದಕ್ಕೆ ವಿದ್ಯಾರ್ಥಿ ಸ್ಪಂದಿಸಿದಾಗ ಲಿಂಕ್‌ವೊಂದನ್ನು ಕಳುಹಿಸಿ ಅದರಲ್ಲಿ ರಿಜಿಸ್ಟರ್ ಮಾಡಿಕೊಳ್ಳಲು ತಿಳಿಸಲಾಗಿದೆ. ರಿಜಿಸ್ಟರ್ ಮಾಡಿಕೊಂಡ ನಂತರ ಫ್ಲಿಪ್‌ಕಾರ್ಟ್ ಎಂಬ ಹೋಂಪೇಜ್ ಓಪನ್ ಆಗಿದೆ. ಅದರಲ್ಲಿದ್ದ ರೀಚಾರ್ಜ್ ಆಪ್ಷನ್‌ನಲ್ಲಿ ಹಣ ವರ್ಗಾವಣೆ ಮಾಡಿದರೆ ಕಮಿಷನ್ ಸಿಗುತ್ತದೆ ಎಂದು ಹೇಳಲಾಗಿತ್ತು. ಅದನ್ನು ನಂಬಿದ ವಿದ್ಯಾರ್ಥಿ ಹಂತ ಹಂತವಾಗಿ 3,84,032 ರೂ. ವರ್ಗಾವಣೆ ಮಾಡಿದ್ದಾನೆ. ಆದರೆ ತನಗೆ ಯಾವುದೇ ಕಮಿಷನ್ ಬಾರದಿದ್ದಾಗ ಸಂಶಯಗೊಂಡು ತನ್ನ ಹಣವನ್ನು ಹಿಂಪಡೆಯಲು ಕರೆ ಮಾಡಿದರೆ ತನಗೆ ಆಮಿಷವೊಡ್ಡಿದ್ದ ವ್ಯಕ್ತಿ ಕರೆ ಸ್ವೀಕರಿಸುತ್ತಿಲ್ಲ ಎಂದು ವಿದ್ಯಾರ್ಥಿ ಮೈಸೂರು ಜಿಲ್ಲೆ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾನೆ.

ಗೂಡ್ಸ್ ಟೆಂಪೋ ಡಿಕ್ಕಿ: ಬೈಕ್ ಸವಾರ ಸಾವು

ಕೆ.ಆರ್.ಪೇಟೆ, ಮೇ 16– ಬೈಕ್‌ಗೆ ಗೂಡ್ಸ್ ಟೆಂಪೋ ಡಿಕ್ಕಿ ಹೊಡೆದು ಪಲ್ಟಿಯಾದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿ, ನಾಲ್ವರು ಗಾಯಗೊಂಡ ಘಟನೆ ಕೆ.ಆರ್. ಪೇಟೆ–ಮೈಸೂರು ರಸ್ತೆಯಲ್ಲಿರುವ ಅಂಚೆಮುದ್ದನಹಳ್ಳಿ ಗ್ರಾಮದ ಬಳಿ ಮೇ 14ರಂದು ಮಧ್ಯಾಹ್ನ ಸಂಭವಿಸಿದೆ.

ಪಾಂಡವಪುರ ತಾಲೂಕು ತಿರುಮಲಪುರ ಗ್ರಾಮದ ಟಿ.ಟಿ.ಸೋಮು (34) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಅಂದು ಮಧ್ಯಾಹ್ನ ತಮ್ಮ ಗ್ರಾಮದವರೇ ಆದ ದೊಡ್ಡೇಗೌಡ ಎಂಬುವರೊಂದಿಗೆ ಬೈಕ್ (ಕೆಎ11 ವೈ3988)ನಲ್ಲಿ ತೆರಳುತ್ತಿದ್ದಾಗ ಅಂಚೆಮುದ್ದನಹಳ್ಳಿ ಬಳಿ ಗೂಡ್ಸ್ ಟೆಂಪೋ (ಕೆಎ53 ಬಿ1888) ಇವರ ಬೈಕ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಇದರ ಪರಿಣಾಮ ಬೈಕ್ ಚಾಲನೆ ಮಾಡುತ್ತಿದ್ದ ಸೋಮು ಮೃತಪಟ್ಟಿದ್ದು, ಹಿಂಬದಿ ಸವಾರ ದೊಡ್ಡೇಗೌಡ ಹಾಗೂ ಟೆಂಪೋದಲ್ಲಿದ್ದ ಮೂವರು ಗಾಯಗೊಂಡಿದ್ದಾರೆ. ಈ ಸಂಬಂಧ ಕೆ.ಆರ್.ಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ ಮಂಗಳವಾರ 17 ಮೇ 2022

ಶಾಲೆಗಳಲ್ಲಿ ಮಕ್ಕಳ ಚಿಲಿಪಿಲಿ ಆರಂಭ

● ಜಿಲ್ಲಾದ್ಯಂತ ಎಲ್ಲಾ ಶಾಲೆಗಳ ಶೈಕ್ಷಣಿಕ ವರ್ಷ ಪ್ರಾರಂಭ ● ಮಕ್ಕಳಿಗೆ ಗುಲಾಬಿ ಹೂ, ಸಿಹಿ ನೀಡಿ ಸ್ವಾಗತ



ಚಾಮರಾಜನಗರ, ಮೇ 16– ಜಿಲ್ಲಾದ್ಯಂತ ಸೋಮವಾರದಿಂದ ಎಲ್ಲಾ ಮಾದರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಆರಂಭವಾಗಿದ್ದು, ಈ ಮೂಲಕ 2 ವರ್ಷಗಳ ಬಳಿಕ ನಿಗದಿತ ಸಮಯಕ್ಕೆ ಶೈಕ್ಷಣಿಕ ವರ್ಷ ಆರಂಭವಾಗುತ್ತಿದ್ದು ಕೋವಿಡ್ ಪೂರ್ವ ಮಾದರಿಯ ಮಕ್ಕಳ ಕಲರವಕ್ಕೆ ಶಾಲೆಗಳು ಸಾಕ್ಷಿಯಾಗಿವೆ.

ಚಾಮರಾಜನಗರ, ಹನೂರು, ಕೊಳ್ಳೇಗಾಲ, ಯಳಂದೂರು ಹಾಗೂ ಗುಂಡ್ಲುಪೇಟೆ ತಾಲೂಕು ಸೇರಿದಂತೆ ಜಿಲ್ಲಾದ್ಯಂತ ಎಲ್ಲಾ ಶಾಲೆಗಳಲ್ಲಿ ಹಾಜರಾದ ಮಕ್ಕಳನ್ನು ಶಿಕ್ಷಕರು ಗುಲಾಬಿ, ಸಿಹಿ ನೀಡುವ ಮೂಲಕ ಸ್ವಾಗತಿಸಿದರು. ಇನ್ನೂ ಕೆಲವು ಕಡೆಗಳಲ್ಲಿ ಸಿಂಗರಿಸಿದ ಎತ್ತಿನಗಾಡಿಗಳ ಮೂಲಕ ಮಕ್ಕಳನ್ನು ಶಾಲೆಗಳಿಗೆ ಕರೆತರಲಾಯಿತು.

ಶಾಲೆ ಆರಂಭ ಹಿನ್ನೆಲೆಯಲ್ಲಿ ಕಳೆದ ಎರಡು ದಿನಗಳ ಹಿಂದೆಯೇ ಶಾಲಾ ಕೊಠಡಿಗಳನ್ನು ಸ್ವಚ್ಛಗೊಳಿಸಿ ತಳಿರು, ತೋರಣಗಳಿಂದ ಸಿಂಗರಿಸಲಾಗಿತ್ತು. ಅಲ್ಲದೇ ಶಾಲಾ ಆವರಣದಲ್ಲಿ ಬೆಳಗ್ಗೆಯಿಂದಲೇ ವಿದ್ಯಾರ್ಥಿಗಳು ರಂಗೋಲಿ ಬಿಡಿಸಿ ಸಂಭ್ರಮಿಸಿದರು. ಶಾಲೆಗಳಲ್ಲಿ ಮಕ್ಕಳು ಹೊಸ ಬಟ್ಟೆ ತೊಟ್ಟು ಬಹಳ ಉತ್ಸಾಹದಿಂದ ಆಗಮಿಸಿದರು. ಶಾಲೆಗೆ ಬಂದ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು.

ಪ್ರತಿ ವರ್ಷ ಜೂನ್ 1 ರಿಂದ ಶಾಲೆಗಳು ಆರಂಭವಾಗುತ್ತವೆ. ಎರಡು ವರ್ಷಗಳಿಂದ ಕೋವಿಡ್ ಕಾರಣಕ್ಕೆ ತರಗತಿಗಳು ಸರಿಯಾಗಿ ನಡೆಯದೇ ಇರುವುದರಿಂದ ಈ ವರ್ಷ 15 ದಿನ ಮುಂಚಿತವಾಗಿ ತರಗತಿಗಳು ಆರಂಭವಾಗಿವೆ. ಈ ಬಾರಿ ಶಾಲಾ ಆರಂಭಕ್ಕೆ ಕೋವಿಡ್ ಹಾವಳಿ ಇಲ್ಲದಿರುವುದು ಸರ್ಕಾರ, ಶಿಕ್ಷಕರು ಹಾಗೂ ಪೋಷಕರಲ್ಲಿ ಸಮಾಧಾನ ಮೂಡಿಸಿದೆ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳ ಜೊತೆಗೆ ಬಹುತೇಕ ಖಾಸಗಿ ಶಾಲೆಗಳು ಕೂಡ ತರಗತಿ ಆರಂಭಿಸಿವೆ.

ಜಿಪಂ ಸಿಇಒ ಕೆ.ಎಂ.ಗಾಯತ್ರಿ ಅವರಿಂದ ಪಠ್ಯಪುಸ್ತಕ ವಿತರಣೆ: ಸಂತೇಮರಹಳ್ಳಿಯ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಜಿಪಂ ಸಿಇಒ ಕೆ.ಎಂ.ಗಾಯತ್ರಿ ಅವರು ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ವಿತರಿಸುವ ಮೂಲಕ ಶಾಲಾರಂಭಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಡಿಡಿಪಿಐ ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ, ಅಧಿಕಾರಿಗಳು, ಶಿಕ್ಷಕರು ಹಾಜರಿದ್ದರು.

ಹನೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳು ಪ್ರಾರಂಭವಾದ ಹಿನ್ನೆಲೆಯಲ್ಲಿ ಶೈಕ್ಷಣಿಕ ವಲಯ ವ್ಯಾಪ್ತಿಯ ವಿವಿಧ ಗ್ರಾಮಗಳ ಶಾಲೆಗಳಲ್ಲಿ ಮಕ್ಕಳನ್ನು ಅಲ್ಲಿನ ಶಿಕ್ಷಕರು ಆತ್ಮಿಯವಾಗಿ ಬರಮಾಡಿಕೊಂಡರು.

ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ಹೂ, ಸಿಹಿ ನೀಡಿ ಸ್ವಾಗತಿಸಿದರು.

ಆರತಿ ಬೆಳಗಿ ಮಕ್ಕಳಿಗೆ ಸ್ವಾಗತ



ಯಳಂದೂರು, ಮೇ 16(ವಿ.ನಾಗರಾಜು)– ಪಟ್ಟಣದ ಬಳೆಪೇಟೆ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಅಂಗವಾಗಿ ಶಾಲೆಯಲ್ಲಿ ತಳಿರು ತೋರಣಗಳಿಂದ ಸಿಂಗರಿಸಿ ಸ್ವಾಗತಿಸಲಾಯಿತು. ಕಳಸ ಹೊತ್ತುಕೊಂಡು ಬಂದ ಮಕ್ಕಳನ್ನು ಪೋಷಕರು, ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಆರತಿ ಬೆಳಗಿ, ಹೂವು, ಸಿಹಿ ನೀಡಿ ಪ್ರೀತಿಯಿಂದ ಬರಮಾಡಿಕೊಂಡರು.

ಪಪಂ ಮಾಜಿ ಅಧ್ಯಕ್ಷೆ ಶಾಂತಮ್ಮ ನಿಂಗರಾಜು ಅವರು ಮಕ್ಕಳಿಗೆ ಪುಸ್ತಕ ವಿತರಿಸಿದರು. ಈ ವೇಳೆ 1ನೇ ತರಗತಿಗೆ 7 ಮಕ್ಕಳನ್ನು ದಾಖಲಾತಿ ಮಾಡಲಾಯಿತು.

ಮುಖ್ಯಶಿಕ್ಷಕಿ ಆರ್.ಸಾವಿತ್ರಮ್ಮ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಂಜುನಾಥ್, ಶಿಕ್ಷಕರಾದ ಜರೀನಾಬಾನು, ರಾಧಾ, ಎಸ್‌ಡಿಎಂಸಿ ಸದಸ್ಯರಾದ ರಾಣಿ, ಚಿಕ್ಕತಾಯಮ್ಮ, ಶೋಭಾ, ಶಶಿಕಲಾ, ಹೇಮಾವತಿ, ಸುಬ್ಬಮ್ಮ ಆರೋಗ್ಯ ಇಲಾಖೆಯ ಸುಮ ಹಾಜರಿದ್ದರು.

ಹಳೆ ವೈಷಮ್ಯ: ಯುವಕನ ಕೊಲೆ



ಗುಂಡ್ಲುಪೇಟೆ, ಮೇ 16(ಸೋಮ್.ಜಿ)– ಹಳೆ ವೈಷಮ್ಯ ಕಾರಣದಿಂದ ಯುವಕನೋರ್ವನನ್ನು ಕೊಲೆ ಮಾಡಿರುವ ಘಟನೆ ಪಟ್ಟಣದ ನಾಯಕರ ಬೀದಿಯ ಅರಳಿಕಟ್ಟೆ ಸಮೀಪ ಸೋಮವಾರ ಸಂಜೆ ನಡೆದಿದೆ.

ಪಟ್ಟಣದ ನಿವಾಸಿ ಪುಟ್ಟಸ್ವಾಮಿನಾಯಕ ಅವರ ಪುತ್ರ ಸಂಜಯ್(23) ಕೊಲೆಯಾದ ಯುವಕ. ಈತನನ್ನು ಇದೇ ಬೀದಿಯ ನಿವಾಸಿ ಅಭಿ (23) ಮಾರಕಾಸ್ತ್ರದಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಈ ಹಿಂದೆಯೂ ಇಬ್ಬರ ನಡುವೆ ಜಗಳವಾಗಿತ್ತು ಎಂದು ಮಾಹಿತಿ ದೊರೆತಿದ್ದು, ಕೊಲೆ ಆರೋಪಿ ಅಭಿಯನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಅಕ್ರಮ ಮದ್ಯ ಸಾಗಾಟ: ಐವರ ಬಂಧನ

ಹನೂರು, ಮೇ 16(ಸೋಮು)– ಅಕ್ರಮವಾಗಿ ಮದ್ಯ ಸಾಗಾಣೆ ಮಾಡುತ್ತಿದ್ದವರನ್ನು ಪೊಲೀಸರು ಬಂಧಿಸಿರುವ ಘಟನೆ ತಾಲೂಕಿನ ನಾಲ್‌ರೋಡ್ ಚೆಕ್‌ಪೋಸ್ಟ್ ಬಳಿ ಭಾನುವಾರ ರಾತ್ರಿ ನಡೆದಿದೆ.



ತಮಿಳುನಾಡಿನ ಶಿವಚಂದ್ರನ್, ರಮೇಶ್‌ಕುಮಾರ್, ಕರುಪ್ಪಸ್ವಾಮಿ, ಕಾರ್ತೀಕೆನ, ರಾಜರಾಮ್ ಬಂಧಿತರು. ಇವರು ಟಾಟಾ ಸಫಾರಿ ಕಾರಿನಲ್ಲಿ ನಾಲ್‌ರೋಡ್ ಚೆಕ್‌ಪೋಸ್ಟ್ ಬಳಿ ಹೋಗುತ್ತಿದ್ದ ವೇಳೆ ರಾಮಾಪುರ ಪೊಲೀಸರು ಕಾರನ್ನು ಅಡ್ಡಗಟ್ಟಿ ನಿಲ್ಲಿಸಿ ತಪಾಸಣೆ ಮಾಡಿದಾಗ ಕಾರಿನಲ್ಲಿ 350 ಎಂಎಲ್‌ನ 60 ಮದ್ಯದ ಬಾಟಲ್‌ಗಳು ಪತ್ತೆಯಾಗಿದೆ.

ಕೂಡಲೇ ಪೊಲೀಸರು ಆರೋಪಿಗಳನ್ನು ಬಂಧಿಸಿ, ಮದ್ಯವನ್ನು ವಶಪಡಿಸಿಕೊಂಡಿದ್ದಾರೆ. ಈ ಬಗ್ಗೆ ರಾಮಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್ ನಂಜುಂಡಸ್ವಾಮಿ, ಮುಖ್ಯ ಪೇದೆ ಸೈಯದ್ ಮುಷರಫ್, ನಾಗೇಂದ್ರ, ನಾಗಶೆಟ್ಟಿ, ಪೇದೆಗಳಾದ ರಮೇಶ್, ಮಂಜು, ಪವಾರ್, ಚಾಲಕ ಪರಮೇಶ್ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಪಾಲ್ಗೊಂಡಿದ್ದರು.

ಬೈಕ್‌ಗೆ ಟ್ರಾಕ್ಟರ್ ಡಿಕ್ಕಿ: ಸವಾರ ಸಾವು

ಚಾಮರಾಜನಗರ, ಮೇ 16–ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಲೆಯೂರು ಸಮೀಪದ ಕನಕಗಿರಿ ಹತ್ತಿರದ ಮಹದೇಶ್ವರ ದೇವಸ್ಥಾನದ ಬಳಿ ಸೋಮವಾರ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ನಿಟ್ರೆ ಗ್ರಾಮದ ನಿವಾಸಿ ಜಗದೀಶ(26) ಮೃತ ಯುವಕ.

ಖಾಸಗಿ ಹಾಲಿನ ಡೈರಿಯ ಸೂಪರ್‌ವೈಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜಗದೀಶ ತನ್ನ ಬೈಕ್‌ನಲ್ಲಿ ಮಧ್ಯಾಹ್ನ 3.30ರಲ್ಲಿ ನಿಟ್ರೆಯಿಂದ ಚಾಮರಾಜನಗರದ ಕಡೆಗೆ ಬರುತ್ತಿದ್ದಾಗ ಕನಕಗಿರಿ ಎದುರಿನಿಂದ ಬಂದ ಟ್ರ್ಯಾಕ್ಟರ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಜಗದೀಶ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆ ನಡೆದ ಕೂಡಲೇ ಟ್ರ್ಯಾಕ್ಟರ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಈ ಸಂಬಂಧ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವಲ ಮಹರ್ಷಿ ಜಯಂತಿ ಆಚರಣೆ



ಕೊಳ್ಳೇಗಾಲ, ಮೇ 16(ನಾಗೇಂದ್ರಸ್ವಾಮಿ)– ಪಟ್ಟಣದಲ್ಲಿ ಸೋಮವಾರ ಶ್ರೀ ದೇವಲ ಮಹರ್ಷಿ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಪಟ್ಟಣದ ದೇವಲ ಮಹರ್ಷಿ ವೃತ್ತದಲ್ಲಿ ದೇವಾಂಗ ಸಮಾಜದ ಮುಖಂಡರು ಸಮಾವೇಶಗೊಂಡು ದೇವಲ ಮಹರ್ಷಿಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಬಳಿಕ, ಪ್ರಸಾದ ವಿತರಣೆ ಮಾಡಿದರು. ಚೌಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಸಲಾಯಿತು. ಜಯಂತಿ ಅಂಗವಾಗಿ ದೇವಾಂಗ ಬಡಾವಣೆಯನ್ನು ತಳಿರು, ತೋರಣಗಳಿಂದ ಸಿಂಗರಿಸಲಾಗಿತ್ತು.

ದೇವಲ ಮಹರ್ಷಿ ಜಯಂತಿ ಅಂಗವಾಗಿ ದೇವಾಂಗ ಸಮಾಜದವರು ಪಟ್ಟಣದಲ್ಲಿ ನಡೆಸುವ ವಹಿವಾಟುಗಳನ್ನು ಸ್ಥಗಿತಗೊಳಿಸಿದ್ದರು. ರಾಜರಾಜೇಶ್ವರಿ ಮತ್ತು ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ಮುಖಂಡರಾದ ಚಿಂತು ಪರಮೇಶ್, ಮಧುಚಂದ್ರ, ಎ.ಪಿ.ಶಂಕರ್, ಮನೋಹರ್, ಪಿ.ಎಂ.ಕೃಷ್ಣಯ್ಯ, ಪಿ.ಎನ್.ಶಿವಕುಮಾರ್, ಪಗಡೆನಾಗ, ಬಾಬು, ಮುಳ್ಳೂರು ಕಮಲ್, ನಿರಂಜನ್, ರವಿ, ಸುರೇಶ್, ರಾಜೇಶ್, ಚೇತನ್, ಕಿರಣ್, ಸುರೇಶ್, ಸೋಮಶೇಖರ್, ಚಂದ್ರಶೇಖರ್, ಬಿ.ಕೆ.ನಾಗರಾಜು, ನಾಗಲಿಂಗಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

ಬಿಳಿಗಿರಿರಂಗನಾಥ ಸ್ವಾಮಿಯ ತೆಪ್ಪೋತ್ಸವಕ್ಕೆ ಚಾಲನೆ



ಯಳಂದೂರು, ಮೇ 16(ವಿ.ನಾಗರಾಜು)– ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ಸೋಮೇಶ್ವರನ ಕೆರೆಯಲ್ಲಿ ಸೋಮವಾರ ಬಿಳಿಗಿರಿರಂಗನಾಥ ಸ್ವಾಮಿಯ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಗಿದ್ದು, 7 ದಿನಗಳ ಕಾಲ ಪ್ರತಿದಿನ ಸಂಜೆ ಕೆರೆಯಲ್ಲಿ ತೆಪ್ಪೋತ್ಸವ ನಡೆಯಲಿದೆ.

ಪ್ರತಿ ವರ್ಷ ಬಿಳಿಗಿರಿರಂಗನ ಬೆಟ್ಟದಲ್ಲಿ ಜರುಗುವ ದೊಡ್ಡ ಜಾತ್ರೆಯ ನಂತರ ಸೋಮೇಶ್ವರನ ಕೆರೆಯಲ್ಲಿ ತೆಪ್ಪೋತ್ಸವ ನಡೆಸುವುದು ವಾಡಿಕೆ. ಅದರಂತೆ ಸೋಮವಾರ ಸಂಜೆ 4.30ರಲ್ಲಿ ಬಿಳಿಗಿರಿ ರಂಗನಾಥಸ್ವಾಮಿಯ ಉತ್ಸವ ಮೂರ್ತಿಯ ತೆಪ್ಪೋತ್ಸವ ನಡೆಸಲಾಯಿತು.

ಬಿಳಿಗಿರಿರಂಗನಾಥ ಸ್ವಾಮಿಯ ಪುರಾತನ ದೇವಸ್ಥಾನದ ಜೀರ್ಣೋದ್ಧಾರ ಹಿನ್ನೆಲೆಯಲ್ಲಿ ಕಳೆದ 8 ವರ್ಷಗಳಿಂದಲೂ ತೆಪ್ಪೋತ್ಸವ ಸ್ಥಗಿತಗೊಂಡಿತ್ತು. ಅಲ್ಲದೇ 8 ವರ್ಷಗಳ ಹಿಂದೆ ಬರಗಾಲದ ಹಿನ್ನೆಲೆಯಲ್ಲಿ ಸೋಮೇಶ್ವರನ ಕೆರೆ ತುಂಬದ ಕಾರಣ ಕಲ್ಯಾಣ ಕೊಳದಲ್ಲಿ ತೆಪ್ಪೋತ್ಸವ ನಡೆಸಲಾಗಿತ್ತು.

ಆದರೆ, ಈ ಬಾರಿ ಬೆಟ್ಟದ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಸೋಮೇಶ್ವರನ ಕೆರೆಯು ಭರ್ತಿಯಾಗಿದೆ. ಹಾಗಾಗಿ, ಸಂಭ್ರಮದಿಂದ ತೆಪ್ಪೋತ್ಸವ ನಡೆಸಲಾಗುತ್ತಿದೆ 7 ದಿನಗಳ ಕಾಲ ಸೋಮೇಶ್ವರನ ಕೆರೆಯಲ್ಲಿ ಬಿಳಿಗಿರಿರಂಗನಾಥ ಸ್ವಾಮಿಯ ತೆಪ್ಪೋತ್ಸವ ನಡೆಯಲಿದೆ. 8ನೇ ದಿನ ಶ್ರೀಗಂಗಾಧರೇಶ್ವರನ ತೆಪ್ಪೋತ್ಸವ ನಡೆಸುವ ಮೂಲಕ ತೆಪ್ಪೋತ್ಸವಕ್ಕೆ ತೆರೆ ಬೀಳಲಿದೆ.

ಮೇ 22, ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಚಾಮರಾಜನಗರ, ಮೇ 16– ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಮೇ 22ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಮೇ 22ರಂದು ಮಧ್ಯಾಹ್ನ 3 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸಿ ಶ್ರೀವಿರಕ್ತ ಮಠದ ಆವರಣದಲ್ಲಿನ ಬಸವ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 5 ಗಂಟೆಗೆ ಗುಂಡ್ಲುಪೇಟೆ ತಾಲೂಕಿನ ಕಬ್ಬಳ್ಳಿಗೆ ಆಗಮಿಸಿ ಸ್ಕಂದಗಿರಿ ಪಾರ್ವತಮ್ಮನವರ ಬೆಟ್ಟದ ರಥೋತ್ಸವ ಸಂದರ್ಭದಲ್ಲಿ ಮೃತರಾದ ಸ್ವಾಮಿ ಹಾಗೂ ಕಂದೇಗಾಲ ಗ್ರಾಮದ ಸರ್ಪಭೂಷಣ ಅವರ ಮನೆಗೆ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳುವರು.

ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆ

ಚಾಮರಾಜನಗರ, ಮೇ 16– ಜಿಲ್ಲೆಯ ವಿವಿಧೆಡೆ ಸೋಮವಾರ ಬೆಳಗ್ಗೆ ಸುರಿದ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿತು. ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು, ಹನೂರು, ಗುಂಡ್ಲುಪೇಟೆ ವ್ಯಾಪ್ತಿಯ ಕೆಲವು ಕಡೆಗಳಲ್ಲಿ ಧಾರಾಕಾರ ಮಳೆ ಸುರಿಯಿತು. ಬೆಳಗ್ಗೆಯಿಂದಲೇ ತುಂತುರು ಮಳೆ ಪ್ರಾರಂಭವಾಗಿತ್ತು. ಮಧ್ಯಾಹ್ನ 12.30ರ ಬಳಿಕ ಕೆಲ ಸಮಯ ಧಾರಾಕಾರವಾಗಿ ಮಳೆ ಸುರಿಯಿತು. ಮಳೆಯಿಂದಾಗಿ ಜನರು ಪರದಾಡುವಂತಾಯಿತು. ಕೆಲಸದ ನಿಮಿತ್ತ ಪಟ್ಟಣಗಳಿಗೆ ಆಗಮಿಸಿದ ಜನರು ಮಳೆಯಿಂದ ರಕ್ಷಣೆ ಪಡೆಯಲು ಛತ್ರಿಗಳ ಮೊರೆ ಹೋದರು.

ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಜಮೀನುಗಳಲ್ಲಿ ಬಿತ್ತನೆ ಮಾಡಿದ್ದ ಅನೇಕ ಫಸಲು ನಾಶವಾಗಿದೆ. ಈ ನಡುವೆ ಮತ್ತೆ ಆರಂಭವಾದ ಮಳೆಯಿಂದಾಗಿ ಜನರು ಮತ್ತಷ್ಟು ಪರಿತಪಿಸುವ ಸ್ಥಿತಿ ಬಂದೊದಗಿದೆ.

ಶಸ್ತ್ರಾಸ್ತ್ರ ತರಬೇತಿ ಆರೋಪ ಅಲ್ಲಗಳೆದ ಬಜರಂಗದಳ





> ಕೊಡಗಿನಲ್ಲಿ ನಡೆದ ಶೌರ್ಯ ಪ್ರಶಿಕ್ಷಣ ವರ್ಗ ಶಿಬಿರದಲ್ಲಿ ಏರ್‌ಗನ್ ಬಳಸಲಾಗಿದೆಯೇ ಹೊರತು ಅಪಾಯಕಾರಿ ಶಸ್ತ್ರಾಸ್ತ್ರಗಳನ್ನು ಬಳಸಿಲ್ಲ. ಈ ಶಿಬಿರ ಹಲವು ವರ್ಷಗಳ ಹಿಂದಿನಿಂದಲೂ ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿದೆ. ಈ ಬಾರಿ ಕೊಡಗಿನಲ್ಲಿ ನಡೆದಿದೆ. ಈ ಶಿಬಿರದಲ್ಲಿ ಕಾನೂನುಬಾಹಿರವಾದ ಯಾವುದೇ ರೀತಿಯ ಚಟುವಟಿಕೆ ನಡೆಯುವುದಿಲ್ಲ ಬದಲಾಗಿ ದೇಶಭಕ್ತಿ ಮೂಡಿಸುವಂತಹ ಕಾರ್ಯಕ್ರಮಗಳು ನಡೆಯುತ್ತವೆ.
> –ಸಿ.ಟಿ.ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಮಡಿಕೇರಿ, ಮೇ 16– ಪೊನ್ನಂಪೇಟೆಯ ಖಾಸಗಿ ವಿದ್ಯಾಸಂಸ್ಥೆಯಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ವತಿಯಿಂದ ನಡೆದ ಶೌರ್ಯ ಪ್ರಶಿಕ್ಷಣ ವರ್ಗ ಶಿಬಿರವು ವಿವಾದಕ್ಕೆ ಎಡೆಮಾಡಿಕೊಟ್ಟಿದ್ದು, ಈ ಶಿಬಿರದಲ್ಲಿ ಕಾನೂನುಬಾಹಿರವಾಗಿ ಯಾವುದೇ ತರಬೇತಿ ನೀಡಿಲ್ಲ ಎಂದು ಹಿಂದೂ ಯುವ ವಾಹಿನಿ ಹಾಗೂ ಬಜರಂಗದಳ ಮುಖಂಡರು ಸ್ಪಷ್ಟಪಡಿಸಿದ್ದಾರೆ.

ಶಿಬಿರದಲ್ಲಿ ತ್ರಿಶೂಲ ದೀಕ್ಷೆ ಹಾಗೂ ಶಸ್ತ್ರಾಸ್ತ್ರ ತರಬೇತಿ ನೀಡಲಾಗಿದೆ ಎಂದು ಕೆಲವರು ಆರೋಪ ಮಾಡಿದ್ದು, ಇದು ಸಮಾಜವನ್ನು ದಿಕ್ಕು ತಪ್ಪಿಸುವ ಕೆಲಸವಾಗಿದೆ ಎಂದು ಹಿಂದೂ ಯುವ ವಾಹಿನಿ ರಾಜ್ಯ ಉಪಾಧ್ಯಕ್ಷ ಕುಲದೀಪ್ ಪೂಣಚ್ಚ ಸ್ಪಷ್ಟಪಡಿಸಿದ್ದಾರೆ. ಸನಾತನ ಹಿಂದೂ ಧರ್ಮದಲ್ಲಿ ದೇವಾನು ದೇವತೆಗಳು ತ್ರಿಶೂಲ ಹಾಗೂ ಶಸ್ತ್ರಾಸ್ತ್ರಗಳನ್ನು ಬಳಸುತ್ತಿದ್ದು, ಅದನ್ನು ನಾವು ಶ್ರದ್ಧಾ ಭಕ್ತಿಯಿಂದ ಪೂಜಿಸಿ ಅದಕ್ಕೆ ಅದರದೇ ಆದ ಗೌರವವನ್ನು ನೀಡುತ್ತಿದ್ದೇವೆ. ಕೊಡಗಿನಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಕಾನೂನು ಬದ್ಧವಾಗಿ ಶಸ್ತ್ರಾಸ್ತ್ರಗಳಿದ್ದು, ಅದನ್ನು ಗೌರವಯುತವಾಗಿ ಬಳಸುತ್ತಿದ್ದೇವೆ. ನಾನೂ ಸೇರಿದಂತೆ ನಮ್ಮ ಸಂಘಟನೆಯ ಅನೇಕ ಮುಖಂಡರು ಪ್ರಶಿಕ್ಷಣ ವರ್ಗಕ್ಕೆ ಭೇಟಿ ನೀಡಿ ಕಾರ್ಯಕರ್ತರೊಂದಿಗೆ ದೇಶಾಭಿಮಾನದ ಬಗ್ಗೆ ಚರ್ಚಿಸಿದ್ದೇವೆಯೇ ಹೊರತು ಭಯೋತ್ಪಾದಕ ಚಟುವಟಿಕೆ ಬಗ್ಗೆ ಅಲ್ಲ. ಸೈನಿಕರಿಗೆ ಹಾಗೂ ಭಾರತಾಂಬೆಗೆ ಗೌರವ ಸಲ್ಲಿಸುವ ಕಾರ್ಯಗಳು ಅಲ್ಲಿ ನಡೆಯುತ್ತಿತ್ತೇ ಹೊರತು ದೇಶದ್ರೋಹ ಚಟುವಟಿಕೆಗಳು ನಡೆಯುತ್ತಿರಲಿಲ್ಲ ಎಂದಿದ್ದಾರೆ.

ಶಿಬಿರದ ಪ್ರಾಯೋಜಕರಬ್ಬೊರಲ್ಲಾದ ಬಜರಂಗದಳದ ಚಿಕ್ಕಮಗಳೂರು ಪ್ರಾಂತ್ಯ ಸಂಚಾಲಕ ರಘು ಸ್ಪಷ್ಟನೆ ನೀಡಿದ್ದು, ದೇಶದ 33 ರಾಜ್ಯಗಳ ಎಲ್ಲಾ ಕಡೆಯೂ ಪ್ರತಿವರ್ಷ ಈ ಶಿಬಿರ ನಡೆಯುತ್ತದೆ. ಈ ವರ್ಷ ಕೊಡಗಿನಲ್ಲಿ ನಡೆದಿದೆ ಅಷ್ಟೆ. ಕೊಡಗಿನಲ್ಲಿ 116 ಕಾರ್ಯಕರ್ತರಿಗೆ ಶಾರೀರಿಕ, ಮಾನಸಿಕ ಸದೃಢಕ್ಕಾಗಿ ಶಿಬಿರ ಏರ್ಪಡಿಸಿದ್ದೆವು. ಪ್ರತಿದಿನ ಬೆಳಗ್ಗೆ 4.15 ರಿಂದ ರಾತ್ರಿ 10.15ರವರೆಗೆ ಶಿಬಿರ ನಡೆದಿದ್ದು, ಅಲ್ಲಿ ಏರ್‌ಗನ್ ಬಳಸಲಾಗಿದೆ. ಅದು ಶಸ್ತ್ರಾಸ್ತ್ರ ಕಾಯ್ದೆಯಡಿ ಬರುವುದಿಲ್ಲ. ತ್ರಿಶೂಲವೂ ಕೂಡ ಈ ಕಾಯ್ದೆ ಪ್ರಕಾರ ಅಪರಾಧವಲ್ಲ ಎಂದು ಹೇಳಿದ ಅವರು ಬಜರಂಗದಳ ಯಾವುದೇ ಕಾರಣಕ್ಕೂ ದೇಶದ ಕಾನೂನು ವಿರುದ್ಧ ಕಾರ್ಯ ನಿರ್ವಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಶೌರ್ಯ ಪ್ರಶಿಕ್ಷಾ ವರ್ಗ ಶಿಬಿರದ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಹರಡುತ್ತಿದ್ದಂತೆ ಶಿಬಿರದ ಬಗ್ಗೆ ಎಸ್‌ಡಿಪಿಐ ಆಕ್ಷೇಪ ವ್ಯಕ್ತಪಡಿಸಿದೆ. ಅಲ್ಲದೇ ಪಿಎಫ್‌ಐನ ಜಿಲ್ಲಾ ಸಮಿತಿ ಸದಸ್ಯ ಗೋಣಿ ಕೊಪ್ಪಲು ನಿವಾಸಿ ಕೆ.ಹೆಚ್.ಇಬ್ರಾಹಿಂ ಎಂಬವರು ಈ ಸಂಬಂಧ ಪೊನ್ನಂಪೇಟೆ ಠಾಣೆಗೆ ದೂರು ಸಲ್ಲಿಸಿದ್ದಾರೆ. ಶಿಬಿರದಲ್ಲಿ ಪಾಲ್ಗೊಂಡಿದ್ದ ಶಾಸಕರಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ಸುಜಾ ಕುಶಾಲಪ್ಪ, ಶಿಬಿರ ನಡೆದ ಶಾಲೆಯ ಅಧ್ಯಕ್ಷ ಜರು ಗಣಪತಿ, ವಿಹೆಚ್‌ಪಿ ಜಿಲ್ಲಾಧ್ಯಕ್ಷ ಪಿ. ಕೃಷ್ಣಮೂರ್ತಿ, ಬಜರಂಗದಳದ ಸಕಲೇಶಪುರ ಪ್ರಾಂತ್ಯ ಸಂಚಾಲಕ ರಘು ಸೇರಿದಂತೆ 120 ಶಿಬಿರಾರ್ಥಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ತಮ್ಮ ದೂರಿನಲ್ಲಿ ಕೋರಿದ್ದಾರೆ.

ಶಾಲೆಗಳು ಪುನಾರಂಭ; ಹೂ, ಸಿಹಿ ವಿತರಿಸಿ ಮಕ್ಕಳಿಗೆ ಸ್ವಾಗತ




ಮಡಿಕೇರಿ,ಮೇ 16–ಕಲಿಕಾ ಚೇತರಿಕೆ ಕಾರ್ಯಕ್ರಮದಡಿ ಸೋಮವಾರದಿಂದ ಶಾಲೆಗಳು ಪುನಾರಂಭವಾಗಿದ್ದು, ಪ್ರಾರಂಭೋತ್ಸವ ಅಂಗವಾಗಿ ಕೊಡಗಿನೆಲ್ಲೆಡೆ ಶಾಲೆಗಳನ್ನು ತಳಿರು–ತೋರಣಗಳಿಂದ ಸಿಂಗರಿಸಲಾಗಿತ್ತು. ಲವಲವಿಕೆಯಿಂದ ಶಾಲೆಗಳಿಗೆ ಆಗಮಿಸಿದ ಮಕ್ಕಳನ್ನು ಶಿಕ್ಷಕರು ಮುಖ್ಯ ದ್ವಾರದಲ್ಲಿ ನಿಂತು ಸಿಹಿ ವಿತರಿಸಿ, ವಿಶೇಷವಾಗಿ ಬರಮಾಡಿಕೊಂಡರು.

ಸುಂಟಿಕೊಪ್ಪ: ಹೋಬಳಿ ವ್ಯಾಪ್ತಿಯ ವಿವಿಧ ಶಾಲೆಗಳನ್ನು ತಳಿರು–ತೋರಣಗಳಿಂದ ಸಿಂಗರಿಸಲಾಗಿತ್ತು. ಶಿಕ್ಷಕರು ಮಕ್ಕಳಿಗೆ ಹೂವು ಹಾಗೂ ಸಿಹಿ ನೀಡಿ ಶಾಲೆಗೆ ಬರಮಾಡಿಕೊಂಡರು. ಶಾಲೆಗೆ ವಿದ್ಯಾರ್ಥಿಗಳು ಲವಲವಿಕೆಯಿಂದ ಆಗಮಿಸಿದ್ದು ಕಂಡು. ಶಿಕ್ಷಣ ಇಲಾಖೆ ಉಪನಿರ್ದೇಶಕ ವೇದಮೂರ್ತಿ ಅವರು ಶಾಲೆಗೆ ಭೇಟಿ ನೀಡಿ, ಕಲಿಕಾ ಚೇತರಿಕೆ ಕಾರ್ಯಕ್ರಮದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ನಂತರ ಶಿಕ್ಷಕರು ಮಕ್ಕಳೊಂದಿಗೆ ಪಠ್ಯ–ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಸುಂಟಿಕೊಪ್ಪ ಹೋಬಳಿ ವ್ಯಾಪ್ತಿ ಕೆದಕಲ್, ಹೊರೂರು, ಕಂಬಿಬಾಣೆ, ಕೊಡಗರಹಳ್ಳಿ, 7ನೇ ಹೊಸಕೋಟೆ, ಕಾನ್‌ಬೈಲ್, ಮಂಜಿಕೇರೆ, ಹೆರೂರು ಇತರ ಗ್ರಾಮಗಳಲ್ಲಿ ಶಿಕ್ಷಕರು ಮಕ್ಕಳಿಗೆ ಹೂವು, ಸಿಹಿ ವಿತರಿಸಿ ಶಾಲೆಗಳಿಗೆ ಆಹ್ವಾನಿಸಿದರು.

ನಾಪೋಕ್ಲು: ನಾಪೋಕ್ಲು ಕರ್ನಾಟಕ ಪಬ್ಲಿಕ್ ಶಾಲೆಯ ಶಿಕ್ಷರು, ಆಡಳಿತ ಮಂಡಳಿಯವರು ವಿದ್ಯಾರ್ಥಿಗಳಿಗೆ ಸಿಹಿ, ಪಠ್ಯ ಪುಸ್ತಕ ಹಾಗೂ ವಿವಿಧ ಬಣ್ಣದ ಬಲೂನು, ನೀಡಿ ಸಂಭ್ರಮದಿಂದ ಬರಮಾಡಿಕೊಂಡರು.

ಶಾಲೆ ಆರಂಭದ ಮೊದಲ ದಿನವಾದ ಇಂದು ಕೊಡಗಿನ ಶಾಲೆಗಳಲ್ಲಿ ಮಕ್ಕಳಿಗೆ ಪಾಯಸದೊಂದಿಗೆ ಬಿಸಿ ಊಟಕ್ಕೂ ಚಾಲನೆ ನೀಡಲಾಯಿತು.

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2,859 ಅಡಿ
ಸೋಮವಾರ	2848.01 ಅಡಿ
ಒಳ ಹರಿವು	96 ಕ್ಯೂಸೆಕ್
ಹೊರ ಹರಿವು	40 ಕ್ಯೂಸೆಕ್

ಮಳೆಹಾನಿ ನಿರ್ವಹಣೆ; ಸೆಸ್ಕ್ ನೋಡಲ್ ಅಧಿಕಾರಿಗಳ ನೇಮಕ

ಮಡಿಕೇರಿ, ಮೇ 16–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಮಳೆಹಾನಿ ಸಂದರ್ಭದಲ್ಲಿ ನಿರ್ವಹಣೆಗೆ ಮುಖ್ಯ ನೋಡಲ್ ಅಧಿಕಾರಿ ಹಾಗೂ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಮಡಿಕೇರಿ ತಾಲೂಕಿನ ಮಡಿಕೇರಿ, ಸಂಪಾಜೆ, ಭಾಗಮಂಡಲ ಮತ್ತು ನಾಪೋಕ್ಲು ಹೋಬಳಿಗಳಿಗೆ ಮುಖ್ಯ ನೋಡಲ್ ಅಧಿಕಾರಿಯಾಗಿ ವಿನಯಕುಮಾರ್(9449598602), ನೋಡಲ್ ಅಧಿಕಾರಿಗಳಾಗಿ ಸಂಪತ್‌ಕುಮಾರ್ (9449598603), ಅನಿಲ್ ಕುಮಾರ್ (9448994851), ಹರಿಣಾಕ್ಷಿ (9480810344) ಮತ್ತು ಹರೀಶ್(9449598606) ರನ್ನು ನೇಮಿಸಲಾಗಿದೆ.

ಸೋಮವಾರಪೇಟೆ ತಾಲೂಕಿನ ಸುಂಟಿಕೊಪ್ಪ, ಕುಶಾಲನಗರ ಹೋಬಳಿಗೆ ಮುಖ್ಯ ನೋಡಲ್ ಅಧಿಕಾರಿಯಾಗಿ ಅಶೋಕ್ (9449598538), ನೋಡಲ್ ಅಧಿಕಾರಿಯಾಗಿ ಜಯದೀಪ್ (9449598615), ಲವಕುಮಾರ್(9449598589), ಸೋಮವಾರಪೇಟೆ, ಶನಿವಾಸಂತೆ, ಕೊಡ್ಲಿಪೇಟೆ, ಶಾಂತಳ್ಳಿ ಹೋಬಳಿಗೆ ಮುಖ್ಯ ನೋಡಲ್ ಅಧಿಕಾರಿಯಾಗಿ ಧನಂಜಯ (9449598612), ನೋಡಲ್ ಅಧಿಕಾರಿಗಳಾಗಿ ಮನುಕುಮಾರ್ (9449598614), ಹೇಮಂತ್ ಕುಮಾರ್ (9449598616), ಬಿ.ಎಂ. ಹೀರೇಮಠ್ (9449598617), ವಿಜಯ ಕುಮಾರ್ (9480837509).

ವಿರಾಜಪೇಟೆ ತಾಲೂಕಿನ ವಿರಾಜಪೇಟೆ, ಅಮ್ಮತ್ತಿ ಸಿದ್ದಾಪುರ ಹೋಬಳಿಗಳಿಗೆ ಮುಖ್ಯ ನೋಡಲ್ ಅಧಿಕಾರಿಯಾಗಿ ಸುರೇಶ್ (9480837545), ರಮೇಶ್(9449598610), ನಾಗೇಂದ್ರ(9448994344), ಸ್ವರಾಗ್ (9449598611), ಹುದಿಕೇರಿ, ಶ್ರೀಮಂಗಲ, ಪೊನ್ನಂಪೇಟೆ ಮತ್ತು ಬಾಳೆಲೆ ಹೋಬಳಿಗೆ ಮುಖ್ಯ ನೋಡಲ್ ಅಧಿಕಾರಿಯಾಗಿ ನೀಲಶೆಟ್ಟಿ(9449598607), ಮನು ಕುಮಾರ್ (9449598609), ಕೃಷ್ಣಕುಮಾರ್(9449597484) ಮತ್ತು ರಂಗಸ್ವಾಮಿ(9449597484) ಅವರನ್ನು ನಿಯೋಜಿಸಲಾಗಿದೆ. ದಿನದ 24 ಗಂಟೆಯೂ ಉಚಿತ ದೂ. 1912 ಕರೆ ಮಾಡಿ ಮಳೆಹಾನಿಗೆ ಸಂಬಂಧಿಸಿದ ಮಾಹಿತಿ ಹಾಗೂ ಇತರೆ ವಿದ್ಯುತ್ ಸಂಬಂಧಿಸಿದ ದೂರು ನೀಡಬಹುದು ಎಂದು ಸೆಸ್ಕ್ ಇಇ ಅಶೋಕ್ ತಿಳಿಸಿದ್ದಾರೆ.

ಗೋಣಿಕೊಪ್ಪ ನೂತನ ಸರ್ಕಲ್ ಇನ್‌ಸ್ಪೆಕ್ಟರ್ ಗೋವಿಂದರಾಜು

ಬೆಂಗಳೂರು,ಮೇ 16– ರಾಜ್ಯ ಸರ್ಕಾರ 37 ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದ್ದು, ರಾಜ್ಯ ಗುಪ್ತವಾರ್ತೆಗೆ ಆದೇಶದಲ್ಲಿದ್ದ ಎಂ.ವಿ.ಗೋವಿಂದರಾಜು ಅವರನ್ನು ಕೊಡಗು ಜಿಲ್ಲೆಯ ಗೋಣಿಕೊಪ್ಪ ಸರ್ಕಲ್ ಇನ್‌ಸ್ಪೆಕ್ಟರ್ ಆಗಿ ವರ್ಗಾವಣೆ ಮಾಡಿದೆ. ಇಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಆಗಿದ್ದ ಎಸ್.ಎಂ. ಜಯರಾಂ ಅವರನ್ನು ಕರ್ನಾಟಕ ಲೋಕಾಯುಕ್ತಗೆ ವರ್ಗಾವಣೆ ಮಾಡಲಾಗಿದೆ ಸದ್ಯದಲ್ಲೇ ಗೋವಿಂದರಾಜು ಗೋಣಿಕೊಪ್ಪಗೆ ಆಗಮಿಸಿ ಅಧಿಕಾರಿ ವಹಿಸಕೊಳ್ಳಲಿದ್ದಾರೆ.

ಹಾಡಹಗಲೇ ಹುಲಿ ದಾಳಿ: ಹಸು ಬಲಿ



ಶ್ರೀಮಂಗಲ, ಮೇ 16–ಹಾಡಹಗಲೇ ಬಯಲಿನಲ್ಲಿ ಮೇಯಲು ಕಟ್ಟಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಕೊಂದಿರುವ ಘಟನೆ ಸಮೀಪದ ಬಿರುನಾಣಿ ಗ್ರಾಪಂ ವ್ಯಾಪ್ತಿಯ ತೆರಾಲು ಗ್ರಾಮದಲ್ಲಿ ಸೋಮವಾರ ನಡೆದಿದೆ.

ಗ್ರಾಮದ ರೈತ ಬೊಳ್ಳೇರ ಚಿಣ್ಣಪ್ಪ ಅವರು ಮನೆಯ ಬಳಿಯ ಬಯಲಲ್ಲಿ ಮೇಯಲು ಕಟ್ಟಿದ್ದ ಗಬ್ಬದ ಹಸುವಿನ ಮೇಲೆ ಸೋಮವಾರ ಮಧ್ಯಾಹ್ನ ಹುಲಿ ದಾಳಿ ನಡೆಸಿದೆ. ಈ ವೇಳೆ ಹಸುವಿನ ಚೀರಾಟ ಕೇಳಿ ಚಿಣ್ಣಪ್ಪ, ಕಾರ್ಮಿಕರು ಜೋರಾಗಿ ಕೂಗಿಕೊಂಡಾಗ ಸ್ಥಳದಿಂದ ಕಾಲ್ಕಿತ್ತ ಹುಲಿ ಸಮೀಪದ ಕಾಫಿ ತೋಟಕ್ಕೆ ಸೇರಿದೆ.

ಮೇ 12ರಂದು ಚಿಣ್ಣಪ್ಪ ಅವರಿಗೆ ಸೇರಿದ ಇನ್ನೊಂದು ಹಸುವಿನ ಮೇಲೆ ಹುಲಿ ದಾಳಿ ಮಾಡಿ ಗಂಭೀರ ಗಾಯಗೊಳಿಸಿತ್ತು. ಈ ಹಸು ಸಾವು ಬದುಕಿನ ನಡುವೆ ಒದ್ದಾಡುತ್ತಿದ್ದು, ಚಿಕಿತ್ಸೆ ಮುಂದುವರೆಸಲಾಗಿದೆ. ಇದರ ನಡುವೆಂಯೇ ಇನ್ನೊಂದು ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಕೊಂದಿರುವುದು ಚಿಣ್ಣಪ್ಪ ಕುಟುಂಬಕ್ಕೆ ತೀವ್ರ ನಷ್ಟ ಉಂಟುಮಾಡಿದೆ.

ಹಾಡಹಗಲೇ ಹುಲಿ ದಾಳಿ ನಡೆಸಿರುವುದರಲ್ಲದೆ, ಹುಲಿ ತೋಟದಲ್ಲೇ ಇರುವ ಸಾಧ್ಯತೆ ಇರುವುದರಿಂದ ಗ್ರಾಮಸ್ಥರು ಮನೆಯಿಂದ ಹೊರಗೆ ಬರಲು ಹಾಗೂ ತೋಟದಲ್ಲಿ ಕಾರ್ಮಿಕರು, ಬೆಳೆಗಾರರು ಕೆಲಸ ಮಾಡಲು ಭಯಪಡುವಂತಾಗಿದೆ ಎಂದು ಕೊಡಗು ಬೆಳೆಗಾರ ಒಕ್ಕೂಟದ ಬಿರುನಾಣಿ ವಿಭಾಗದ ಅಧ್ಯಕ್ಷ ಬೊಳ್ಳೇರ ಅಪ್ಪುಟ ಪೊನ್ನಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

4 ದಿನದ ಹಿಂದೆ ಚಿಣ್ಣಪ್ಪ ಅವರ ಹಸುವಿನ ಮೇಲೆ ದಾಳಿ ಮಾಡಿದಾಗ ಅರಣ್ಯ ಇಲಾಖೆ ಎಚ್ಚೆತ್ತು ಹುಲಿ ಸೆರೆಗೆ ಕಾರ್ಯಾಚರಣೆ ಕೈಗೊಂಡಿದ್ದರೆ, ಮತ್ತೆ ದಾಳಿ ನಡೆಯುತ್ತಿರಲಿಲ್ಲ. ಕೂಡಲೇ ಹುಲಿ ಸೆರೆಗೆ ಕಾರ್ಯಾಚರಣೆ ಕೈಗೊಳ್ಳಬೇಕು. ಹಸು ಕಳೆದುಕೊಂಡ ಚಿಣ್ಣಪ್ಪ ಅವರಿಗೆ ಕೂಡಲೇ ಪರಿಹಾರ ನೀಡಬೇಕು ಎಂದು ಅಪ್ಪುಟ ಪೊನ್ನಪ್ಪ ಒತ್ತಾಯಿಸಿದ್ದಾರೆ.

ಆಟೋ ಚಾಲಕರ ಸಂಘಕ್ಕೆ ಮರು ಚಾಲನೆ



ವಿರಾಜಪೇಟೆ, ಮೇ 16–ವಿರಾಜಪೇಟೆಯಲ್ಲಿ ನಿಷ್ಕ್ರಿಯವಾಗಿದ್ದ ಆಟೋ ಚಾಲಕರ ಸಂಘಕ್ಕೆ ಮರು ಚಾಲನೆ ನೀಡಿದ್ದು, ನೂತನ ಆಡಳಿತ ಮಂಡಳಿಗೆ ಪದಾಧಿಕಾರಿಗಳ ಆಯ್ಕೆ ಮಾಡಲಾಗಿದೆ ಎಂದು ಸಂಘದ ಗೌರವ ಸಲಹೆಗಾರ ಎನ್. ದಾಮೋದರ ತಿಳಿಸಿದರು.

ಪ್ರೆಸ್ ಕ್ಲಬ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘವು ಈ 2003ರಿಂದ 6 ರವರೆಗೆ ಸಕ್ರಿಯವಾಗಿದ್ದು, ಉತ್ತಮ ಸೇವಾ ಕೆಲಸಗಳನ್ನು ಮಾಡಿದೆ. ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ, ಲೇಖನ ಸಾಮಗ್ರಿ ವಿತರಿಸಿದ್ದು, ಸಂಘದ ಚಾಲಕರು 150 ಬಾರಿ ರಕ್ತದಾನ ಮಾಡಿ ಅನೇಕ ತುರ್ತು ಸಂದರ್ಭ ರೋಗಿಗಳಿಗೆ ನೆರವಾಗಿದ್ದರು. ಮೀನುಪೇಟೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ 1 ಲಕ್ಷ 30 ಸಾವಿರ ರೂ. ವೆಚ್ಚದಲ್ಲಿ ಸಾರ್ವಜನಿಕರಿಗೆ ವಿಶ್ರಾಂತಿ ತಾಣ, ನೀರಿನ ಟ್ಯಾಂಕ್, ಹರಿಶ್ಚಂದ್ರ ಕಲ್ಲಿಗೆ ಬೇಲಿ ಸೇರಿದಂತೆ ಹತ್ತಾರು ಜನಪರ ಕೆಲಸ ಮಾಡಲಾಗಿತ್ತು ಆದರೆ ಹಲವು ಕಾರಣದಿಂದ ಸಂಘ ನಿಷ್ಕ್ರೀಯವಾಗಿತ್ತು. ಸದ್ಯ ಸಂಘವನ್ನು ಮತ್ತೆ ಸಕ್ರಿಯಗೊಳಿಸಿದ್ದು, ವಿರಾಜಪೇಟೆಯ ಎಲ್ಲಾ ಆಟೋ ಚಾಲಕರನ್ನು ಒಂದೇ ವೇದಿಕೆಗೆ ತರುವ ಪ್ರಯತ್ನ ಮಾಡಲಾಗಿದೆ ಎಂದರು.

ಸಂಘದ ನೂತನ ಅಧ್ಯಕ್ಷರಾಗಿ ಎನ್.ಎನ್. ಶಿವು, ಉಪಾಧ್ಯಕ್ಷರಾಗಿ ಹ್ಯಾರೀಶ್ ಮತ್ತು ಅರ್ಜುನ್ ತಿಮ್ಮಯ್ಯ, ಪ್ರಧಾನ ಕಾರ್ಯದರ್ಶಿ–ಪ್ರದೀಪ್‌ಕುಮಾರ್, ಸಹಕಾರ್ಯದರ್ಶಿ–ಎಂಡ್ರಿ ನರೋನ, ಖಜಾಂಚಿ–ಸೋಮಶೇಖರ್, ಗೌರವ ಅಧ್ಯಕ್ಷ–ತೋರೇರ ಪ್ರಭು ಕುಟ್ಟಪ್ಪ, ಕಾನೂನು ಸಲಹೆಗಾರ–ವಕೀಲ ಪುಷ್ಪರಾಜ್, ಗೌವರ ಸಲಹೆಗಾರರಾಗಿ ದಾಮೋದರ ಅಚಾರ್ಯ, ಎಂ.ಪ್ರವೀಣ್, ಎಂ.ಎಂ.ಪರಮೇಶ್ವರ, ಸಂಘಟನಾ ಕಾರ್ಯದರ್ಶಿ–ಸುಗುಣ ಸುರೇಶ್ ಹಾಗೂ ಐದು ಮಂದಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀನಿವಾಸ ರೈ ನಿಧನ



ಮಡಿಕೇರಿ,ಮೇ 16–ನಗರದ ಆಶಿಕಾ ಎಂಟರ್ ಪ್ರೈಸಸ್‌ನ ಮಾಲೀಕ ಶ್ರೀ ಓಂಕಾರೇಶ್ವರ ದೇವಾಲಯದ ಸಮೀಪದ ನಿವಾಸಿ ಶ್ರೀನಿವಾಸ ರೈ(42) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ವರ್ತಕ ಬಳಗ ಶ್ರೀನಿವಾಸ ರೈ ಅವರ ನಿಧನಕ್ಕೆ ಸಂತಾಪ ಸೂಚಿಸಿದೆ.

ಒಂದನೇ ಪುಟದಿಂದ

ಬಿಜೆಪಿ ಬೊಂಬಾಟ್ ಪ್ಲಾನ್!

ನಡೆಸುವುದಲ್ಲದೆ, ಕಾವೇರಿ ನ್ಯಾಯಮಂಡಳಿ ಮುಂದೆ ರಾಜ್ಯದ ವಾದ ಮಂಡನೆಯಾಗುವಂತೆ ನೋಡಿಕೊಳ್ಳುತ್ತಿದ್ದಾರೆ. ಮೇಕೆದಾಟು ಯೋಜನೆ ವಿದ್ಯುತ್ ಉತ್ಪಾದನೆಗೆ ಬಳಕೆಯಾಗಲಿದ್ದು, ವಿದ್ಯುತ್ ಉತ್ಪಾದನೆ ನಂತರ ಅಣೆಕಟ್ಟೆಯಲ್ಲಿ ಸಂಗ್ರಹವಾದ ನೀರು ತಮಿಳುನಾಡಿಗೆ ಹರಿದು ಹೋಗುತ್ತದೆ. ಮೇಕೆದಾಟು ಯೋಜನೆಗೆ ತಮಿಳುನಾಡು ವಿರೋಧ ವ್ಯಕ್ತಪಡಿಸುತ್ತಿರುವುದರಲ್ಲಿ ಯಾವ ಹುರುಳೂ ಇಲ್ಲ. ಕೇವಲ ರಾಜಕೀಯ ಲಾಭದ ದೃಷ್ಟಿಯಿಂದ ಅದು ಕರ್ನಾಟಕದ ಹೆಜ್ಜೆಗೆ ತಕರಾರು ಮಾಡುತ್ತಿದೆ ಎಂದು ಕಾವೇರಿ ನ್ಯಾಯಮಂಡಳಿಗೆ ಮೇಲಿಂದ ಮೇಲೆ ವಿವರಿಸುವ ಕೆಲಸವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಡುತ್ತಿದ್ದಾರೆ. ತಮ್ಮ ವಾದವನ್ನು ರಾಜ್ಯದ ಪರ ಕಾನೂನು ತಜ್ಞರಿಂದ ಕಾವೇರಿ ನ್ಯಾಯಮಂಡಳಿಯ ಮುಂದೆ ಮಂಡನೆ ಮಾಡಿಸುತ್ತಿರುವ ಬಸವರಾಜ ಬೊಮ್ಮಾಯಿ ಇತ್ತೀಚಿನ ದಿನಗಳಲ್ಲೇ ಮೂರು ಬಾರಿ ದೆಹಲಿಗೆ ಹೋಗಿ ಈ ಕೆಲಸವಾಗುವಂತೆ ನೋಡಿಕೊಂಡಿದ್ದಾರೆ.

ಮೇಕೆದಾಟು ಯೋಜನೆಗೆ ಹಸಿರು ನಿಶಾನೆ ಪಡೆದರೆ ಹಳೆ ಮೈಸೂರು ಭಾಗದಲ್ಲಿ ಪ್ರಬಲವಾಗುವ ಪ್ರತಿಪಕ್ಷ ಕಾಂಗ್ರೆಸ್ ಬಯಕೆಗೆ ತಣ್ಣೀರು ಎರಚಿದಂತಾಗುತ್ತದೆ ಎಂಬುದು ಬಿಜೆಪಿ ಲೆಕ್ಕಾಚಾರ. ಇದೇ ರೀತಿ ಕರ್ನಾಟಕ-ಗೋವಾ-ಮಹಾರಾಷ್ಟ್ರ ರಾಜ್ಯಗಳ ನಡುವೆ ಬಿಕ್ಕಟ್ಟಿಗೆ ಕಾರಣವಾಗಿರುವ ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಸೋಮವಾರ ಕೂಡಾ ಕಾನೂನು ತಜ್ಞರೊಂದಿಗೆ ಸಭೆ ನಡೆಸಿದ ಬಸವರಾಜ ಬೊಮ್ಮಾಯಿ, ಈಗಿನ ಕಾನೂನು ತೊಡಕುಗಳನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಿವಾರಿಸಲು ಕ್ರಮ ಕೈಗೊಳ್ಳುವಂತೆ ಕಾನೂನು ತಜ್ಞರಿಗೆ ಹೇಳಿದ್ದಾರೆ.

ಮಹದಾಯಿ ಯೋಜನೆಗೆ ಸಹಮತ ನೀಡಿದ ಗೋವಾ ರಾಜ್ಯ ಅಡ್ಡಗಾಲು ಹಾಕುತ್ತಿದ್ದು ಕಾನೂನಿನ ಅಂಶಗಳು ರಾಜ್ಯದ ಪರವಾಗಿವೆ ಎಂಬ ಅಂಶ ಬಸವರಾಜ ಬೊಮ್ಮಾಯಿ ಅವರಿಗೆ ಉತ್ಸಾಹ ತುಂಬಿದೆ. ಉಳಿದಂತೆ ನೆರೆಯ ಮಹಾರಾಷ್ಟ್ರ ಕೂಡಾ ತುಂಬಾ ಅಡಚಣೆ ಮಾಡುವ ಸ್ಥಿತಿಯಲ್ಲಿಲ್ಲ ಎಂಬುದು ಅವರ ಯೋಚನೆ. ಮಹದಾಯಿ ಯೋಜನೆಗೆ ಇರುವ ಕಾನೂನು ತೊಡಕುಗಳನ್ನು ನಿವಾರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅವರು ಹರಸಾಹಸ ಮಾಡುತ್ತಿದ್ದಾರೆ. ಮಹದಾಯಿ ವಿವಾದ ಬಗೆಹರಿದು ಯೋಜನೆ ಕಾರ್ಯಗತಗೊಂಡರೆ ಮುಂಬೈ-ಕರ್ನಾಟಕ ಭಾಗದ ಮತದಾರರ ಮೇಲೆ ಪ್ರಭಾವ ಬೀರಬಹುದು ಎಂಬುದು ಅವರ ಯೋಚನೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದ ತೊಡಕುಗಳನ್ನು ನಿವಾರಿಸಿಕೊಂಡು ಕೇಂದ್ರ ಸರ್ಕಾರದ ಹಣಕಾಸು ನೆರವಿನೊಂದಿಗೆ ಭೂಸ್ವಾಧೀನ ಕಾರ್ಯ ಪೂರ್ಣಗೊಳಿಸುವುದು ಅವರ ಸದ್ಯದ ಲೆಕ್ಕಾಚಾರ. ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿಗೆ ಇರುವ ತೊಡಕುಗಳನ್ನು ನಿವಾರಿಸಿ ಮುಂದಡಿ ಇಟ್ಟರೆ ಉತ್ತರ ಕರ್ನಾಟಕ ಭಾಗದ ಮತದಾರರ ಮುಂದೆ ಹೋಗುವುದು ಸುಲಭ ಎಂದವರು ಲೆಕ್ಕ ಹಾಕಿದ್ದಾರೆ.

ಇಂದು ಹೈಕೋರ್ಟ್ ವಿಚಾರಣೆ

ಉಳಿದಿದೆ. ಹಾಗಾಗಿ ಈ ಪ್ರಕರಣದ ಶೀಘ್ರ ವಿಚಾರಣೆಗೆ ಮೆಮೊ ಸಲ್ಲಿಸಲಾಗಿತ್ತು. 2021ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕರ್ನಾಟಕದಲ್ಲಿ ZP-TP ಚುನಾವಣೆಗೆ ರಾಜ್ಯ ಚುನಾವಣಾ ಆಯೋಗ ತಯಾರಿ ನಡೆಸಿತ್ತು ಎಂದು ವಾದ ಮಂಡಿಸಿದರು.

ಕ್ಷೇತ್ರಗಳ ಡಿಲಿಮಿಟೇಶನ್ ಪ್ರಕ್ರಿಯೆ ಪೂರ್ಣಗೊಂಡಿದೆ ಮತ್ತು ಮತದಾರರ ಅಂತಿಮ ಪಟ್ಟಿಯನ್ನು ಎಸ್‌ಇಸಿ ಪ್ರಕಟಿಸಿದೆ. ಕಳೆದ ವರ್ಷ ಮೀಸಲಾತಿ ಕರಡನ್ನು ಕೂಡ ಪ್ರಕಟಿಸಲಾಗಿತ್ತು. ಆದರೆ ಎಸ್‌ಇಸಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸುವ ಮೊದಲು, ರಾಜ್ಯ ಸರ್ಕಾರವು ಕ್ಷೇತ್ರಗಳನ್ನು ಮರು ವಿನ್ಯಾಸಗೊಳಿಸುವ ಮತ್ತು ಮೀಸಲಾತಿ ಪಟ್ಟಿಯನ್ನು ಸಿದ್ಧಪಡಿಸುವ ಎಸ್‌ಇಸಿಯ ಅಧಿಕಾರವನ್ನು ಹಿಂತೆಗೆದುಕೊಂಡಿತು. ಪ್ರಕ್ರಿಯೆ ನಡೆಸಲು ಸರ್ಕಾರ ಹೊಸ ಡಿಲಿಮಿಟೇಶನ್ ಪ್ಯಾನೆಲ್ ಅನ್ನು ರಚಿಸಿದೆ. ಚುನಾವಣಾ ಆಯೋಗವು ಈ ಸಮಿತಿ ರಚನೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆಗೆ ಬಾಕಿ ಇತ್ತು. ಎಸ್‌ಇಸಿಯ ಮೆಮೊದ ನಂತರ, ಹೈಕೋರ್ಟ್ ಈ ವಿಷಯದ ವಿಚಾರಣೆಯನ್ನು ಮೇ 17ಕ್ಕೆ ಮುಂದೂಡಿದೆ.

ಬಿಜೆಪಿಗೆ ಭರ್ಜರಿ ಗೆಲುವು

ನಾಯಕರನ್ನು ಸೇರ್ಪಡೆಗೊಳಿಸಲಾಗುತ್ತದೆ. ಪ್ರಮುಖವಾಗಿ ಪಕ್ಷವು ದುರ್ಬಲವಾಗಿರುವ ಪ್ರದೇಶಗಳಲ್ಲಿ ಇತರೆ ಪಕ್ಷಗಳ ನಾಯಕರನ್ನು ಬಿಜೆಪಿಗೆ ಸೇರ್ಪಡೆಗೊಳಿಸಲಾಗುತ್ತದೆ ಎಂದು ಹೇಳಿದ್ದಾರೆ. ಇದೇ ವೇಳೆ ಪ್ರತಿಪಕ್ಷ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಕಾಂಗ್ರೆಸ್ ಒಂದು ಪಿತೂರಿ ಪಕ್ಷವಾಗಿ ಮಾರ್ಪಟ್ಟಿದೆ ಮತ್ತು ಸುಳ್ಳು ನಿರೂಪಣೆಯನ್ನು ನೀಡಲು ಪ್ರಯತ್ನಿಸುತ್ತಿದೆ. ಕಾಂಗ್ರೆಸ್‌ನ್ನು ಬೆಂಬಲಿಸುತ್ತಿರುವ ರಾಜ್ಯ ಗುತ್ತಿಗೆದಾರರ ಸಂಘವು ಕೆಲವು ಸದಸ್ಯರು ಈ ರೀತಿಯ ಆರೋಪಗಳನ್ನು ಮಾಡುತ್ತಿದ್ದಾರೆಂದು ತಿಳಿಸಿದ್ದಾರೆ.

ನಾವು ಎಲ್ಲದಕ್ಕೂ ಉತ್ತರ ನೀಡಬೇಕಾಗಿಲ್ಲ. ಈ ರೀತಿ ಮಾಡಿದರೆ ಸಮಸ್ಯೆ ದೊಡ್ಡದಾಗುತ್ತದೆ. ನಾವು ದೊಡ್ಡ ಗುರಿಯನ್ನು ಇಟ್ಟುಕೊಳ್ಳಬೇಕಿದ್ದು, ಈ ಮೂಲಕ ಜನಪರ ಕೆಲಸಗಳನ್ನು ಮಾಡುತ್ತಿದ್ದೇವೆ. ಉತ್ತರಪ್ರದೇಶ, ಗೋವಾ, ಮಣಿಪುರ ಹಾಗೂ ಉತ್ತರಾಖಂಡದಲ್ಲೂ ಇದೇ ತಂತ್ರವನ್ನು ಬಳಸಿದ್ದೆವು. ಸರ್ಕಾರ ಮತ್ತು ಪಕ್ಷ ಅಭಿವೃದ್ಧಿಯತ್ತ ಗಮನಹರಿಸುತ್ತಿದ್ದು, ಅಭಿವೃದ್ಧಿಯೇ ನಮ್ಮ ಗುರಿಯಾಗಿದೆ ಎಂದಿದ್ದಾರೆ.

ಸರ್ಕಾರ ಮತ್ತು ಮುಖ್ಯಮಂತ್ರಿ ಬೊಮ್ಮಾಯಿಯವರ ವರ್ಚಸ್ಸು ಉತ್ತಮವಾಗಿದೆ. ಸರ್ಕಾರ ಮತ್ತು ಮುಖ್ಯಮಂತ್ರಿಗಳ ಕೆಲಸಗಳ ಬಗ್ಗೆ ಜನರಿಗೆ ತಿಳಿಯುವಂತೆ ಮಾಡಬೇಕು. ಸರ್ಕಾರವು ರಕ್ಷಣಾತ್ಮಕವಾಗಿಲ್ಲ, ಆದರೆ ಅದು ಆಕ್ರಮಣಕಾರಿಯಾಗಿರಲು ಸಾಧ್ಯವಿಲ್ಲ. ಜನರಿಗಾಗಿ ಕೆಲಸ ಮಾಡಬೇಕು ಎಂದರು. ಇದೇ ವೇಳೆ ರಾಜ್ಯ ನಾಯಕತ್ವದಲ್ಲಿ ಯಾವುದೇ ಬದಲಾವಣೆಗಳಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ ಅವರು, ರಾಜ್ಯದಲ್ಲಿ ಕೆಲವೊಮ್ಮೆ ಭ್ರಷ್ಟಾಚಾರ, ಕೆಲವೊಮ್ಮೆ ನಾಯಕತ್ವ ಬದಲಾವಣೆ ಕುರಿತು ಊಹಾಪೋಹಗಳು ಶುರುವಾಗಿರುತ್ತದೆ. ಆದರೆ, ನಾಯಕತ್ವದಲ್ಲಿ ಯಾವುದೇ ಬದಲಾವಣೆಗಳಾಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಸಿಎಂ ಬೊಮ್ಮಾಯಿಯವರು ಉತ್ತಮ ಕೆಲಸ ಮಾಡುತ್ತಿದ್ದು, ಇದು ಹೀಗೆಯೇ ಮುಂದುವರೆಯಲಿದೆ ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ವಂಶಾಡಳಿತದ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದ ಬಿಜೆಪಿ ಇದೀಗ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿವೈ ವಿಜಯೇಂದ್ರ ಅವರ ಹೆಸರನ್ನು ವಿಧಾನಪರಿಷತ್ ಚುನಾವಣೆಗೆ ಶಿಫಾರಸ್ಸು ಮಾಡುತ್ತಿರುವ ಕುರಿತು ಮಾತನಾಡಿ, ಪಕ್ಷಕ್ಕಾಗಿ ಕೆಲಸ ಮಾಡುವ ನಾಯಕರಿಗೆ ಅವಕಾಶ ನೀಡುವುದನ್ನು ನಿರಾಕರಿಸಲಾಗುವುದಿಲ್ಲ ಎಂದಿದ್ದಾರೆ.

ಶಿಕ್ಷಕನ ಅಮಾನತು

ತಾನು ಶಾಲೆಗೆ ಹೋಗುವುದಿಲ್ಲವೆಂದು ಹಠ ಹಿಡಿದಿದ್ದಾಳೆ. ಈ ವೇಳೆ ಪೋಷಕರಿಗೆ ಲೈಂಗಿಕ ಕಿರುಕುಳದ ವಿಚಾರ ಗೊತ್ತಾಗಿದೆ ಎನ್ನಲಾಗಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ನೂರಾರು ಗ್ರಾಮಸ್ಥರು ಶಾಲೆಯ ಮುಂದೆ ಜಮಾಯಿಸಿ, ಪ್ರತಿಭಟಿಸಲಾರಂಭಿಸಿದರು.

ತಕ್ಷಣವೇ ಶಾಲೆಗೆ ದೌಡಾಯಿಸಿದ ಕಿಕ್ಕೇರಿ ಠಾಣೆ ಪೊಲೀಸರು ಶಿಕ್ಷಕನನ್ನು ವಶಕ್ಕೆ ಪಡೆದಿದ್ದಾರೆ. ಲೈಂಗಿಕ ಕಿರುಕುಳ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜು ಅವರು ಸೋಮವಾರ ಸಂಜೆ ವೇಳೆಗೆ ಶಿಕ್ಷಕ ಚಂದ್ರಶೇಖರ್‌ನನ್ನು ಅಮಾನತು ಪಡಿಸಿ ಆದೇಶಿಸಿದ್ದಾರೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ ಎಂದು ಕಿಕ್ಕೇರಿ ಪೊಲೀಸ್ ಇನ್ಸ್‌ಪೆಕ್ಟರ್ ಜಗದೀಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಬೊಮ್ಮಾಯಿ ಸಂಪುಟ ಪುನರ್ರಚನೆ?

ಅಲ್ಲದೇ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದಾವೋಸ್ ಪ್ರವಾಸಕ್ಕೆ ತೆರಳುತ್ತಿರುವ ಹಿನ್ನೆಲೆಯಲ್ಲಿ ಸಂಪುಟ ಪುನರ್ರಚನೆಗೆ ಮುಂದೆ ಸಮಯಾವಕಾಶ ದೊರಕದೆ, ಮತ್ತೆ ನನೆಗುದಿಗೆ ಬೀಳುವ ಸಾಧ್ಯತೆಯೂ ಇದೆ. ಅಲ್ಲದೇ, ಈಗ ಯಾವುದೇ ಚುನಾವಣೆಗೆ ಹೋಗಬೇಕಿದ್ದರೂ ಸಮರ್ಥ ತಂಡವನ್ನು ಅಣಿಗೊಳಿಸಬೇಕಾದ ಅನಿವಾರ್ಯತೆ ಇದ್ದು, ಯುವ ತಂಡವನ್ನು ಸಜ್ಜುಗೊಳಿಸುವ ಉದ್ದೇಶವೂ ಇದೆ. ಹಾಗಾಗಿ ಬಿ.ವೈ. ವಿಜಯೇಂದ್ರ ಸೇರಿದಂತೆ ಯುವ ಶಾಸಕರನ್ನು ಸಂಪುಟಕ್ಕೆ ಸೇರ್ಪಡೆಗೊಳಿಸಿ, ಸ್ಥಳೀಯ ಸಂಸ್ಥೆ ಚುನಾವಣೆ ಮೂಲಕ ವಿಧಾನಸಭೆ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವ ತವಕದಲ್ಲಿದ್ದಾರೆ. ಹಾಗಾಗಿ ಶುಕ್ರವಾರವೇ ಸಂಪುಟ ಪುನರ್ರಚನೆಗೆ ಪ್ರಶಸ್ತವಾಗಿದ್ದು, ಅಂದೇ ವರಿಷ್ಠರ ಸೂಚನೆಯಂತೆ ಸಿಎಂ ಬೊಮ್ಮಾಯಿ ಸಂಪುಟಕ್ಕೆ ಸರ್ಜರಿ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ನಾಲೆಗೆ ಹಾರಿದ ಕಾರು

ಪ್ರಭಾಕರ್ ಅವರು ಹನೂರು ತಾಲೂಕು ರಾಮಾಪುರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ತನಿಖೆ ನಡೆಸಿದ್ದ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯಲು ಕೊಳ್ಳೇಗಾಲ ನ್ಯಾಯಾಲಯಕ್ಕೆ ತಮ್ಮ ಖಾಸಗಿ ಕಾರಿ(ಕೆಎ08 ಎ6759)ನಲ್ಲಿ ಕಾನ್ಸ್‌ಟೇಬಲ್‌ನೊಂದಿಗೆ ಇಂದು ಬೆಳಗ್ಗೆ ತೆರಳಿದ್ದರು. ಅಲ್ಲಿಂದ ಹಿಂತಿರುಗುತ್ತಿದ್ದ ವೇಳೆ ಕಾಳಕೆಂಪನದೊಡ್ಡಿ ಗೇಟ್ ಬಳಿ ಚಾಲಕನ ನಿಯಂತ್ರಣ ತಪ್ಪಿದ ಕಾರು ನಾಲೆಗೆ ಹಾರಿದೆ. ಇದನ್ನು ಕಂಡ ಸಾರ್ವಜನಿಕರು ತಕ್ಷಣವೇ ಕಾರ್ಯಪ್ರವೃತ್ತರಾಗಿ ಕಾರಿನಲ್ಲಿ ಸಿಲುಕಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್ ಅನ್ನು ರಕ್ಷಿಸಿ 108 ಆಂಬುಲೆನ್ಸ್ ಮೂಲಕ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಅಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಇಬ್ಬರನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಮಳೆ ಸುರಿಯುತ್ತಿದ್ದರಿಂದ ಸರಿಯಾಗಿ ರಸ್ತೆ ಕಾಣದೇ ಕಾರು ಚಾಲಕನ ನಿಯಂತ್ರಣ ತಪ್ಪಿತು ಎಂದು ಹೇಳಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಮಳವಳ್ಳಿ ಗ್ರಾಮಾಂತರ ಠಾಣಾ ಪೊಲೀಸರು ಸ್ಥಳಕ್ಕೆ ತೆರಳಿ ನಾಲೆಯಲ್ಲಿ ಬಿದ್ದಿದ್ದ ಕಾರನ್ನು ಹೊರ ತೆಗೆದು ಠಾಣೆಗೆ ಕೊಂಡೊಯ್ದರಲ್ಲದೇ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಪ್ರತಾಪ್ ರೆಡ್ಡಿ ನೇಮಕ

ಆಗಿದ್ದ ಅಲೋಕ್‌ಕುಮಾರ್ ಅವರನ್ನು ರಾಜ್ಯದ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ಅವರ ಜಾಗಕ್ಕೆ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ(ಪ್ರಭಾರ) ಆಗಿದ್ದ ಆರ್. ಹಿತೇಂದ್ರ ಅವರನ್ನು ವರ್ಗಾಯಿಸಲಾಗಿದೆ. ಇನ್ನೂ ಬೆಂಗಳೂರು ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್.ಅನುಚೇತ್ ಅವರನ್ನು ಸಿಐಡಿ ಎಸ್‌ಪಿಯಾಗಿ ವರ್ಗಾಯಿಸಲಾಗಿದ್ದು, ಅವರ ಜಾಗಕ್ಕೆ ವೆಂಕಟೇಶ್ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರಲ್ಲಿ ಮಾರಕ ಡೆಂಗೀ ನಿಯಂತ್ರಣ ಸಂಬಂಧ ಜನಜಾಗೃತಿ ಕಾರ್ಯಕ್ರಮ



ಸೋಂಕಿನ ಮೂಲವಾದ ಸೊಳ್ಳೆ ನಿರ್ಮೂಲನೆಗೆ ವ್ಯಾಪಕ ಕ್ರಮಕ್ಕೆ ಸೂಚನೆ



ಮೈಸೂರು, ಮೇ 16(ಎಂಟಿವೈ)– ರಾಷ್ಟ್ರೀಯ ಡೆಂಗೀ ದಿನದ ಹಿನ್ನೆಲೆಯಲ್ಲಿ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಜಾಗೃತಿ ಜಾಥಾದಲ್ಲಿ ಆರೋಗ್ಯ ಕಾರ್ಯಕರ್ತರು ಡೆಂಗೀ ಬಗ್ಗೆ ಅರಿವು ಮೂಡಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆಹೆಚ್.ಪ್ರಸಾದ್ ಜಾಥಾಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕಳೆದ ಹಲವು ವರ್ಷಗಳಿಂದ ಮೈಸೂರಲ್ಲಿ ಡೆಂಗೀ ನಿಯಂತ್ರಣಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಲವು ಕ್ರಮ ಕೈಗೊಂಡಿದೆ. ಸಾರ್ವಜನಿಕರಿಂದ ಹೆಚ್ಚಿನ ಸಹಕಾರದ ಅಗತ್ಯವಿದೆ. ಡೆಂಗೀ ನಿರ್ಮೂಲನೆಗೆ ಪ್ರಮುಖವಾಗಿ ಸೊಳ್ಳೆ ನಿರ್ಮೂಲನೆ ಆಗಬೇಕು. ಇದಕ್ಕಾಗಿ ಆರೋಗ್ಯ ಇಲಾಖೆ ಹಲವು ಕ್ರಮ ಕೈಗೊಂಡಿದೆ. ಪ್ರಮುಖವಾಗಿ ಸಮುದಾಯ ಹಾಗೂ ವೈಯಕ್ತಿಕವಾಗಿ ಸೊಳ್ಳೆ ನಿಯಂತ್ರಣಕ್ಕೆ ಇಲಾಖೆಯೊಂದಿಗೆ ಕೈಜೋಡಿಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಸೊಳ್ಳೆ ನಿರ್ಮೂಲನೆ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ನೀರಿನ ತೊಟ್ಟಿ, ಸಂಪು, ಪಾಟ್, ಹೂವಿನ ಕುಂಡ, ಟೇಬಲ್ ವಾಸ್ ಸೇರಿದಂತೆ ವಿವಿಧೆಡೆ ಸೊಳ್ಳೆಗಳು ಸಮೃದ್ಧಿಯಾಗುತ್ತವೆ. ಹೀಗಾಗಿ ವಾರಕ್ಕೊಮ್ಮೆ ಸ್ವಚ್ಛಗೊಳಿಸುವಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಸಮುದಾಯದತ್ತ ಕಾರ್ಯಕ್ರಮದಡಿ ರಸ್ತೆ ಬದಿ ಮಳೆ ನೀರು ಸಂಗ್ರಹವಾಗುವ ಗುಂಡಿ, ಚರಂಡಿ, ಬಿಡಾಡಿ ಜಾನುವಾರುಗಳಿಗಾಗಿ ಇರುವ ನೀರಿನ ತೊಟ್ಟಿ, ಸಂಪು ಹಾಗೂ ಇನ್ನಿತರೆಡೆ ಸೊಳ್ಳೆಗಳ ಉತ್ಪಾದನೆಯಾಗದಂತೆ ಇಲಾಖೆ ಸಿಬ್ಬಂದಿ ಪರಿಶೀಲನೆ ಮಾಡುತ್ತಿದ್ದಾರೆ. ಅಲ್ಲದೆ ಅಗತ್ಯ ಬಿದ್ದ ಕಡೆ ಫಾಗಿಂಗ್ ಮಾಡುವ ಮೂಲಕ ಸೊಳ್ಳೆ ಸಂತತಿ ಹೆಚ್ಚಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಜನ ಸಂದಣಿ ಹೆಚ್ಚಾಗಿರುವ ಬಡಾವಣೆಗಳಲ್ಲಿ ಡೆಂಗೀ ಪ್ರಕರಣ ಹೆಚ್ಚಾಗುತ್ತಿದೆ. 2022ನೇ ಸಾಲಿನಲ್ಲಿ ಜನವರಿಯಿಂದ ಮೇ ವರೆಗೆ ಒಟ್ಟು 139 ಪ್ರಕರಣ ದಾಖಲಾಗಿವೆ. ಅದರಲ್ಲಿ ರಾಮಕೃಷ್ಣನಗರ, ದಟ್ಟಗಳ್ಳಿ, ಕುವೆಂಪುನಗರ, ಹೂಟಗಳ್ಳಿಯಲ್ಲಿ ಹೆಚ್ಚಾಗಿದ್ದರೆ, ಪಿರಿಯಾಪಟ್ಟಣ ತಾಲೂಕಲ್ಲಿ ಡೆಂಗೀ ಪ್ರಕರಣಗಳ ಸಂಖ್ಯೆ ಹೆಚ್ಚಾಗಿ ಕಂಡು ಬರುತ್ತಿದೆ. ಜ್ವರ ಸೇರಿದಂತೆ ಇನ್ನಿತರೆ ಡೆಂಗೀ ಲಕ್ಷಣ ಕಂಡು ಬಂದರೆ ಕೂಡಲೇ ಸಮೀಪದ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಳ್ಳಬೇಕು. ಪ್ರಮುಖವಾಗಿ ಸೊಳ್ಳೆಗಳಿಂದ ಕಚ್ಚಿಸಿಕೊಳ್ಳುವುದನ್ನು ತಪ್ಪಿಸಲು ಸೊಳ್ಳೆ ಪರದೆ, ಸೊಳ್ಳೆ ಬತ್ತಿ ಸೇರಿದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ವರ್ಷ	ಡೆಂಗ್ಯೂ	ಸಾವು	ಚಿಕನ್‌ಗುನ್ಯಾ
2012	15		5
2013	334	3	7
2014	65		13
2015	382		111
2016	582		152
2017	843	2	78
2018	49		41
2019	122		81
2020	32		13
2021	182		37
2022 (ಜ–ಮೇ16)	139		5

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ ಮಾತನಾಡಿ, ಪ್ರತಿವರ್ಷ ಇಲಾಖೆ ವತಿಯಿಂದ ನಿರಂತರವಾಗಿ ಸಮೀಕ್ಷೆ ನಡೆಸಲಾಗುತ್ತಿದೆ. ಮನೆ ಮನೆಗೆ ತೆರಳಿ ನೀರಿನ ಟ್ಯಾಂಕ್‌ಗಳನ್ನು ಪರಿಶೀಲಿಸುವ ಕೆಲಸವನ್ನು ಆರೋಗ್ಯ ಇಲಾಖೆ ಸಿಬ್ಬಂದಿಗಳೇ ಮಾಡುತ್ತಿದ್ದಾರೆ. ನೀರಿನ ಬವಣೆ ಇರುವ ಬಡಾವಣೆಗಳಲ್ಲಿ ಜನರು ಪ್ಲಾಸ್ಟಿಕ್ ಡ್ರಮ್, ತೊಟ್ಟಿ, ಸಂಪು ಸೇರಿದಂತೆ ವಿವಿಧ ಪಾತ್ರೆಗಳಲ್ಲಿ ನೀರನ್ನು ಸಂಗ್ರಹಿಸಿಕೊಳ್ಳುತ್ತಾರೆ. ವಾರಕ್ಕೊಮ್ಮೆ ಸ್ವಚ್ಛಗೊಳಿಸದಿದ್ದರೆ ಸೊಳ್ಳೆಗಳು ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಇದರಿಂದ ಡೆಂಗೀ ಸೇರಿದಂತೆ ಇನ್ನಿತರ ಸಾಂಕ್ರಾಮಿಕ ರೋಗ ಹರಡಲು ಕಾರಣವಾಗುತ್ತದೆ. ಮನೆ ಸುತ್ತಮುತ್ತ ನಿರುಪಯುಕ್ತ ಟೈರ್, ತೆಂಗಿನಚಿಪ್ಪು ಹಾಗೂ ಇನ್ನಿತರ ಪ್ಲಾಸ್ಟಿಕ್ ವಸ್ತುಗಳಲ್ಲೂ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಾಥಾ: ಕೃಷ್ಣಮೂರ್ತಿಪುರಂನ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಿಂದ ಆರಂಭವಾದ ಜಾಥ ಬುದ್ಧ ವಿಹಾರ್, ಬಲ್ಲಾಳ್ ವೃತ್ತ, ಆರ್‌ಟಿಒ ಕಚೇರಿ ವೃತ್ತದ ಮೂಲಕ ಮತ್ತೆ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣ ತಲುಪಿತು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ವಿಭಾಗೀಯ ಜಂಟಿ ನಿರ್ದೇಶಕ ಡಾ.ಉದಯ್ ಕುಮಾರ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸಿರಾಜ್ ಅಹ್ಮದ್, ಆರ್‌ಸಿಹೆಚ್ ಅಧಿಕಾರಿ ಡಾ.ಜಯಂತ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶಿವಪ್ರಸಾದ್, ತಾಲೂಕು ಆರೋಗ್ಯಾಧಿಕಾರಿ ಡಾ.ರಾಜೇಶ್ವರಿ, ವೈದ್ಯಾಧಿಕಾರಿ ಡಾ.ಸುವರ್ಣಕುಮಾರಿ, ಕರ್ನಾಟಕ ರಾಜ್ಯ ವೈದ್ಯಾಧಿಕಾರಿಗಳ ಸಂಘದ ಮೈಸೂರು ಘಟಕದ ಅಧ್ಯಕ್ಷ ಡಾ.ದೇವಿಆನಂದ್, ವೈದ್ಯಾಧಿಕಾರಿ ಡಾ.ನವೀನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜ್ಞಾನವಾಪಿ ಮಸೀದಿಯಲ್ಲಿ ಶಿವಲಿಂಗ ಪತ್ತೆಯಾದ ಸ್ಥಳವನ್ನು ಸೀಲ್ ಮಾಡಿ: ಕೋರ್ಟ್ ಆದೇಶ

ವಾರಣಾಸಿ, ಮೇ 16– ಉತ್ತರ ಪ್ರದೇಶದ ವಾರಣಾಸಿಯ ಜ್ಞಾನವಾಪಿ ಮಸೀದಿ ಸಂಕೀರ್ಣದೊಳಗಿನ ಕೊಳದಲ್ಲಿ ಶಿವಲಿಂಗ ಪತ್ತೆಯಾಗಿದೆ ಎಂಬ ಹೇಳಿಕೆಯ ನಂತರ ನ್ಯಾಯಾಲಯವು ಆ ಸ್ಥಳವನ್ನು ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿ ಸೀಲ್ ಮಾಡುವಂತೆ ಆದೇಶಿಸಿದೆ. ಮಸೀದಿಯ ಹಿಂದಿರುವ ದೇಗುಲದಲ್ಲಿ ಪ್ರಾರ್ಥನೆ ಸಲ್ಲಿಸಲು ಪ್ರವೇಶ ಕೋರಿ ಐವರು ಮಹಿಳೆಯರು ಅರ್ಜಿ ಸಲ್ಲಿಸಿದ ನಂತರ ಮಸೀದಿ ಸಂಕೀರ್ಣದ



ಚಿತ್ರೀಕರಣಕ್ಕೆ ನ್ಯಾಯಾಲಯ ಆದೇಶಿಸಿದ್ದು, ಚಿತ್ರೀಕರಣದ ಕೊನೆಯ ದಿನದಂದು ಶಿವಲಿಂಗ ಅಥವಾ ಶಿವನ ಅವಶೇಷವು ಕಂಡುಬಂದಿದೆ ಎಂದು ವರದಿಯಾಗಿದೆ. ಇಂದು ಬೆಳಗ್ಗೆ ಕೊಳದಿಂದ ನೀರನ್ನು ಹರಿಸುವಾಗ ಶಿವಲಿಂಗ ಕಂಡುಬಂದಿದೆ ಎಂದು ದೇಗುಲದಲ್ಲಿ ಪ್ರಾರ್ಥನೆ ಮಾಡಲು ವರ್ಷಪೂರ್ತಿ ಪ್ರವೇಶವನ್ನು ಕೋರಿರುವ ಹಿಂದೂ ಮಹಿಳೆಯರ ಗುಂಪನ್ನು ಪ್ರತಿನಿಧಿಸುವ ವಕೀಲ ಸುಭಾಷ್ ನಂದನ್ ಚತುರ್ವೇದಿ ಹೇಳಿದ್ದಾರೆ.

ಇಸ್ಲಾಮಿಕ್ ವುಜು ಅಥವಾ ಶುದ್ಧೀಕರಣ ಆಚರಣೆಗಳಿಗಾಗಿ ಬಳಸಲಾಗುವ ಕೊಳದಲ್ಲಿ ಶಿವ ಲಿಂಗ ಪತ್ತೆಯಾದ ನಂತರ ಅದನ್ನು ಸಂಪೂರ್ಣವಾಗಿ ಬಂದ್ ಮಾಡಬೇಕೆಂದು ಅರ್ಜಿದಾರರು ನ್ಯಾಯಾಲಯಕ್ಕೆ ಮನವಿ ಮಾಡಿದರು. ನ್ಯಾಯಾಲಯವು ಮನವಿ ಸ್ವೀಕರಿಸಿ, ಸದ್ಯಕ್ಕೆ ಕೊಳವನ್ನು ಬಳಸದಂತೆ ನೋಡಿಕೊಳ್ಳಲು ವಾರಣಾಸಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಆದೇಶಿಸಿದೆ. ಜಿಲ್ಲಾ ಮ್ಯಾಜಿಸ್ಟ್ರೇಟ್, ಪೊಲೀಸ್ ಮುಖ್ಯಸ್ಥರು ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಉನ್ನತ ಅಧಿಕಾರಿಗಳು ಸೀಲ್ ಮಾಡಿದ ಪ್ರದೇಶಕ್ಕೆ ಯಾರೂ ಕೂಡ ಪ್ರವೇಶಿಸದಂತೆ ನೋಡಿಕೊಳ್ಳುತ್ತಾರೆ ಎಂದು ನ್ಯಾಯಾಲಯ ಹೇಳಿದೆ. ಜ್ಞಾನವಾಪಿ ಮಸೀದಿಯು ಕಾಶಿ ವಿಶ್ವನಾಥ ದೇವಾಲಯದ ಸಮೀಪದಲ್ಲಿದೆ. ಐದು ಮಹಿಳಾ ಅರ್ಜಿದಾರರು ಅದರ ಹೊರಗೋಡೆಗಳ ಮೇಲೆ ಮತ್ತು ಇತರ ಹಳೆಯ ದೇವಾಲಯದ ಸಂಕೀರ್ಣದೊಳಗೆ ಇರುವ ದೇವರ ಮೂರ್ತಿಗಳಿಗೆ ವರ್ಷ ಪೂರ್ತಿ ದೈನಂದಿನ ಪ್ರಾರ್ಥನೆಗೆ ಅವಕಾಶ ನೀಡುವಂತೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಸದ್ಯ ಇಲ್ಲಿ ಪ್ರಾರ್ಥನೆ ಸಲ್ಲಿಸಲು ವರ್ಷಕ್ಕೊಮ್ಮೆ ಮಾತ್ರ ಬಾಗಿಲು ತೆರೆಯಲಾಗುತ್ತಿದೆ. ವಾರಣಾಸಿ ಸಿವಿಲ್ ನ್ಯಾಯಾಲಯವು 3 ಗುಮ್ಮಟಗಳು, ಭೂಗತ ನೆಲಮಾಳಿಗೆಗಳು ಮತ್ತು ಕೊಳ ಸೇರಿದಂತೆ ಮಸೀದಿ ಸಂಕೀರ್ಣದ ವೀಡಿಯೊ ಮೌಲ್ಯಮಾಪನಕ್ಕೆ ಆದೇಶಿಸಿದ್ದು, ಈ ಕಾರ್ಯಕ್ಕಾಗಿ ನ್ಯಾಯಾಲಯದ ಆಯುಕ್ತರನ್ನು ನೇಮಿಸಿದೆ.

ಯಕೃತ್ ಕುರಿತು ಅಪೋಲೊ ಬಿಜಿಎಸ್‌ನಿಂದ 'ಪುನರ್ಜನ್ಮ' ಕಾರ್ಯಕ್ರಮ



ಮೈಸೂರು, ಮೇ 16– ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆ ವತಿಯಿಂದ ಗಾನಭಾರತಿ ಸಭಾಂಗಣದಲ್ಲಿ ಯಕೃತ್ತಿನ ಕಾಯಿಲೆಗಳ ಬಗ್ಗೆ ಅರಿವು ಮೂಡಿಸುವ 'ಪುನರ್ಜನ್ಮ' ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ಸಮಾಜದಲ್ಲಿ ಇಂತಹ ಕಾರ್ಯಕ್ರಮಗಳು ಅಗತ್ಯವಾಗಿದೆ. ಅಂಗಾಂಗ ದಾನಕ್ಕೆ ಸಹಿ ಮಾಡಿ ಸಾವಿನ ಅಂಚಿನಲ್ಲಿರುವವರ ಜೀವ ಉಳಿಸಲು ಜನರು ಮುಂದಾಗುವ ಮೂಲಕ ಮಾನವೀಯತೆ ಮೆರೆಯಬೇಕು ಎಂದರಲ್ಲದೇ, ಅಪೋಲೊ ಮೈಸೂರು ಆಸ್ಪತ್ರೆಯು ವೈದ್ಯಕೀಯ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿದರು.

ಆಸ್ಪತ್ರೆಯ ಉಪಾಧ್ಯಕ್ಷ ಭರತ್ ರೆಡ್ಡಿ, ದೀರ್ಘ ಕಾಲದಿಂದ ಯಕೃತ್ತಿನ ಕಾಯಿಲೆಯಿಂದ ಬಳಲುತ್ತಿರುವವರ ಬದುಕಿನಲ್ಲಿ ಅಪೋಲೊ ಆಸ್ಪತ್ರೆ ಯಕೃತ್ತಿನ ಕಸಿ ಮೂಲಕ ಯಾವ ರೀತಿ ಬದಲಾವಣೆ ತಂದಿದೆ ಎಂಬುದರ ಬಗ್ಗೆ ವಿವರಿಸಿದರು. ಡಾ. ರಾಜ್‌ಕುಮಾರ್ ಪಿ. ವಾಧ್ವಾ ಅವರು, ಯಕೃತ್ತಿನ ಆರೋಗ್ಯ ಕಾಪಾಡಿಕೊಳ್ಳಲು ವಿಫಲವಾದರೆ ವ್ಯಕ್ತಿ ಬದುಕುಳಿಯಲು ಸಾಧ್ಯವೇ ಇಲ್ಲ ಎಂದರಲ್ಲೇ, ಗಂಭೀರ ಮತ್ತು ದೀರ್ಘ ಕಾಲದಿಂದ ಯಕೃತ್ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಮಹತ್ವಪೂರ್ಣವಾಗ ಸಲಹೆಗಳನ್ನು ನೀಡಿದರು. ಡಾ. ಸುರೇಶ್ ರಾಘವಯ್ಯ ಅವರು ಅಂಗಾಂಗ ದಾನ ಕುರಿತು ವಿವರಿಸಿದರು. ಡಾ. ನೈರುತ್ಯ ಎಸ್. ಮತ್ತು ಡಾ. ಯಶವಂತ್‌ಕುಮಾರ್ ವಿ. ಅವರು ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ಕುರಿತು ವಿವರಿಸಿದರು. ಅಂಗಾಂಗ ಕಸಿ ಮಾಡಿಸಿಕೊಂಡಿರುವವರು ತಮ್ಮ ಅನುಭವ ಹಂಚಿಕೊಂಡರಲ್ಲದೇ, ಅಪೋಲೊ ಬಿಜಿಎಸ್ ಆಸ್ಪತ್ರೆ ತಜ್ಞ ವೈದ್ಯರಿಗೆ ಧನ್ಯವಾದ ಸಲ್ಲಿಸಿದರು.

ಗ್ರಾಹಕರು ಸದಾ ಜಾಗೃತರಾಗಿರಬೇಕು

ಗ್ರಾಹಕ ಪಂಚಾಯತ್‌ನ ಡಾ. ಚಂದ್ರಶೇಖರ್ ಕಿವಿಮಾತು



ಮೈಸೂರು, ಮೇ 16(ಎಂಟಿವೈ)– ಮೈಸೂರಿನ ಗೋಪಾಲಸ್ವಾಮಿ ಶಿಶುವಿಹಾರದ ಸಭಾಂಗಣದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್‌ನ ಮೈಸೂರು ಜಿಲ್ಲಾ ಶಾಖೆಯ ಅಭ್ಯಾಸ ವರ್ಗದ ಸಭೆ ನಡೆಯಿತು.

ಕಾರ್ಯಕ್ರಮವನ್ನು ಅಖಿಲ ಭಾರತೀಯ ಗ್ರಾಹಕ ಪಂಚಾಯತ್‌ನ ಹಿರಿಯ ಮುಖಂಡ ಡಾ.ಚಂದ್ರಶೇಖರ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಎಲ್ಲರಲ್ಲೂ ಗ್ರಾಹಕ ಚಿಂತನೆಯ ಅವಶ್ಯಕತೆ ಇರಬೇಕು. ಪ್ರತಿಯೊಬ್ಬ ಗ್ರಾಹಕನಾಗಿ ಪದಾರ್ಥಗಳನ್ನು ಕೊಂಡು ಕೊಳ್ಳುವಾಗ ಯಾವ ರೀತಿಯ ಎಚ್ಚರಿಕೆ ವಹಿಸಬೇಕು. ವಂಚನೆಗಳು ನಿರಂತರವಾಗಿ ನಡೆಯುತ್ತಿರುವುದರಿಂದ ಯಾವುದೇ ಖರೀದಿಯ ವೇಳೆ ಸೂಕ್ಷ್ಮ ಗ್ರಹಿಕೆ, ಸೂಕ್ಷ್ಮ ಪರಿಶೀಲನೆ ಅಗತ್ಯವಾಗಿದೆ ಎಂದು ಸಲಹೆ ನೀಡಿದರು.

ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ವಂಚನೆಗೊಳಗಾಗುವ ಗ್ರಾಹಕರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಕೆಲವು ಕಾಯ್ದೆ, ನಿಯಮಗಳಿವೆ. ಗ್ರಾಹಕರ ವ್ಯಾಜ್ಯದ ಇತ್ಯರ್ಥಕ್ಕಾಗಿ ನ್ಯಾಯಾಲಯವೂ ಇದೆ ಆದರೂ ವಂಚಕರು ಯಾವುದೇ ಭಯವಿಲ್ಲದೆ ಗ್ರಾಹಕರನ್ನು ವಂಚಿಸುತ್ತಲೇ ಇರುತ್ತಾರೆ. ಹಾಗಾಗಿ ಗ್ರಾಹಕರು ಯಾವುದೇ ವಸ್ತುಗಳನ್ನು ಖರೀದಿಸಲು ಮುಂದಾದರೂ, ಅವುಗಳ ನೈಜತೆಯ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದರು.

ಕರ್ನಾಟಕ ಪ್ರಾಂತದ ಮಾಜಿ ಅಧ್ಯಕ್ಷ ಟಿ.ಸಿ.ರಂಗನಾಥ ಅಭ್ಯಾಸ ವರ್ಗ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಹಕರಿಗೆ ಆರ್ಥಿಕ ಸಾಕ್ಷರತೆಯ ಅವಶ್ಯಕತೆ ಇದೆ. ಆಗ ಮಾತ್ರ ವಂಚನೆಗೊಳಗಾಗುವುದರಿಂದ ತಪ್ಪಿಸಿಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂತ ಸಹ ಕೋಶಾಧ್ಯಕ್ಷೆ ಶ್ರೀಲಕ್ಷ್ಮಿ, ಜಯಶ್ರೀ, ಪ್ರಾಂತ ಮಹಿಳಾ ಪ್ರಮುಖ್ ಗಾಯತ್ರಿ, ಕೊಡಗು ಜಿಲ್ಲೆ ಕುಸುಮರ್ ಅಧ್ಯಕ್ಷೆ ರೇಣುಕಾಂಬ, ಸ್ವದೇಶೀ ಮಂಚ್ ದಕ್ಷಿಣ ಮಧ್ಯ ಕ್ಷೇತ್ರ ಸಂಯೋಜಕ ಮಂಜುನಾಥ್, ಕರ್ನಾಟಕ ಪ್ರಾಂತದ ಸಂಘಟನಾ ಮಂತ್ರಿ ರಾಜೇಶ್ ಪ್ರಸಾದ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿದ್ಯೆ ಜೊತೆಗೆ ಕೌಶಲ್ಯತೆ ಅನಿವಾರ್ಯ

- ಇನ್‌ಫೋಸಿಸ್ ಪ್ರತಿಷ್ಠಾನದ ಡಾ.ಸುಧಾಮೂರ್ತಿ ಕಿವಿಮಾತು
- ಕೌಶಲ್ಯ ಜ್ಞಾನ ಇಲ್ಲದೇ ಇದ್ದರೆ ವಿದ್ಯೆಯೂ ನಿರರ್ಥಕ



ಮೈಸೂರು, ಮೇ 16(ಎಂಕೆ)– ವಿದ್ಯಾರ್ಥಿಗಳು ಪದವಿ ಪಡೆದರೆ ಸಾಲದು ಕೌಶಲ್ಯ ಜ್ಞಾನವನ್ನು ಬೆಳೆಸಿಕೊಳ್ಳಬೇಕು. ಕೌಶಲ್ಯ ಜ್ಞಾನ ಇಲ್ಲದೇ ಎಷ್ಟೋ ಇಂಜಿನಿಯರ್‌ಗಳು ಆಟೋ ಚಾಲಕರಾಗಿ, ಅಕ್ಕಿಗಿರಣಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಇನ್‌ಫೋಸಿಸ್ ಪ್ರತಿಷ್ಠಾನದ ಮಾಜಿ ಮುಖ್ಯಸ್ಥರೂ ಆದ ಕವಯತ್ರಿ ಡಾ.ಸುಧಾಮೂರ್ತಿ ಬೇಸರ ವ್ಯಕ್ತಪಡಿಸಿದರು.

ನಗರದ ಸಪ್ನ ಬುಕ್‌ಹೌಸ್‌ನಲ್ಲಿ ಆಯೋಜಿಸಿದ್ದ 'ಜೀವನ ಪಾಠ ಮತ್ತು ಹಸ್ತಾಕ್ಷರ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪಠ್ಯಕ್ಕೆ ಸಿಮೀತವಾಗದೇ ಪ್ರತಿಯೊಬ್ಬರೂ ಕೌಶಲ್ಯದ ಜ್ಞಾನವನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ಪದವಿ ಪಡೆದು ಹೊರ ಬರುವಾಗ ಪ್ರಪಂಚಕ್ಕೆ ಬೇಕಾದ ಕೌಶಲ್ಯ ಜ್ಞಾನವನ್ನು ಪಡೆದುಕೊಂಡಿರಬೇಕು ಎಂದು ಹೇಳಿದರು.

ಕನ್ನಡ ಮಾಧ್ಯಮದಲ್ಲಿ ಓದಿದರೂ ಕಂಪನಿಯೊಂದಕ್ಕೆ ಸೇರುವಾಗ ಇಂಗ್ಲಿಷ್ ಮುಖ್ಯವಾಗುತ್ತದೆ ಆದ್ದರಿಂದ ಕನ್ನಡದ ಜೊತೆ ಜೊತೆಗೆ ಇಂಗ್ಲಿಷ್ ಅನ್ನು ಮಕ್ಕಳಿಗೆ ಕಲಿಸಬೇಕು ಎಂದು ಸಲಹೆ ನೀಡಿದ ಅವರು, ತಾವು ಬರೆದ ಪುಸ್ತಕಗಳನ್ನು ಖರೀದಿಸಿದ ನೂರಾರು ಮಂದಿ ಓದುಗರು, ವಿದ್ಯಾರ್ಥಿಗಳೊಂದಿಗೆ ಫೋಟೊ ತೆಗೆಸಿಕೊಂಡರಲ್ಲದೆ, ಪುಸ್ತಕಗಳಿಗೆ ಸಹಿ ಹಾಕಿ ಹೆಚ್ಚೆಚ್ಚು ಪುಸ್ತಕ ಓದುವಂತೆ ಪ್ರೋತ್ಸಾಹಿಸಿದರು. ಸಪ್ನ ಬುಕ್‌ಹೌಸ್ ವ್ಯವಸ್ಥಾಪಕ ದೊಡ್ಡೇಗೌಡ ಉಪಸ್ಥಿತರಿದ್ದರು.

ಶಿಕ್ಷಣ ಕ್ಷೇತ್ರಕ್ಕೆ ಬಲ ತುಂಬಲು ಬಿಜೆಪಿ ಅಭ್ಯರ್ಥಿ ಗೆಲ್ಲಿಸಿ

ಉನ್ನತ ಶಿಕ್ಷಣ ಸಚಿವ ಅಶ್ವಥ್ ನಾರಾಯಣ ಮನವಿ



ಮೈಸೂರು, ಮೇ 16(ಎಂಕೆ)– ಶಿಕ್ಷಣ ಕ್ಷೇತ್ರದಲ್ಲಿ ಬಹುದೊಡ್ಡ ಸುಧಾರಣೆ ತಂದಿರುವ ರಾಜ್ಯ ಸರ್ಕಾರಕ್ಕೆ ಇನ್ನಷ್ಟು ಬಲ ತುಂಬಲು ದಕ್ಷಿಣ ಪದವೀಧರರ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಗೆಲ್ಲಿಸುವಂತೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ ಮನವಿ ಮಾಡಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ (ಕೆಎಸ್‌ಒಯು)ಯ ಕಾವೇರಿ ಸಭಾಂಗಣದಲ್ಲಿ ಸೋಮವಾರ ದಕ್ಷಿಣ ಪದವೀಧರ ಕ್ಷೇತ್ರದ ಮತದಾರರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 40ಕ್ಕೂ ಹೆಚ್ಚು ವರ್ಷಗಳಿಂದ ಬಿಜೆಪಿ ಪ್ರಾಮಾಣಿಕ ಕಾರ್ಯಕರ್ತರಾದ ಮೈ.ವಿ.ರವಿಶಂಕರ್, ವಿಧಾನ ಪರಿಷತ್ ಪ್ರವೇಶ ಮಾಡುವವರಲ್ಲಿಯೇ ಉತ್ತಮ ಅಭ್ಯರ್ಥಿಯಾಗಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿನ ಇನ್ನಷ್ಟು ಸುಧಾರಣೆಗಾಗಿ ಮೈವಿಯವರನ್ನು ಗೆಲ್ಲಿಸುವಂತೆ ಕೋರಿದರು.

ರಾಜ್ಯ ಈಗಾಗಲೇ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಸುಧಾರಣೆ ತಂದಿದೆ. ವಿಶ್ವ ವಿದ್ಯಾನಿಲಯಗಳಲ್ಲಿ ಉಪನ್ಯಾಸಕರ ಕೊರತೆ ನೀಗಿಸಲು ನೇಮಕಾತಿ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ನೇಮಕಾತಿಯಲ್ಲಿದ್ದ ಸವಾಲುಗಳನ್ನು ಬಗೆಹರಿಸಲಾಗುತ್ತಿದೆ. ಪ್ರತಿಯೊಬ್ಬರಿಗೂ ಶಿಕ್ಷಣವನ್ನು ನೀಡುವುದು ಸರ್ಕಾರದ ಮುಖ್ಯ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ನಮಗೆ ಅಧಿಕಾರ ಇರುವುದೇ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕಾಗಿ. ನಮ್ಮಂತೆಯೇ ಸಮಾಜದ ಎಲ್ಲರೂ ಚೆನ್ನಾಗಿರಬೇಕು ಎಂಬ ಉದ್ದೇಶವನ್ನು ಮನದಲ್ಲಿಟ್ಟುಕೊಂಡು ರಾಜಕೀಯಕ್ಕೆ ಬರುತ್ತೇವೆಯೇ ಹೊರತು ನಮ್ಮ ಸ್ವ-ಹಿತಾಸಕ್ತಿಗಲ್ಲ ಎಂದರು.

ಶಾಸಕ ಎಲ್.ನಾಗೇಂದ್ರ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಿಂಗರಾಜ್‌ಗೌಡ, ಬಿಜೆಪಿ ಯುವಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸಂಸತ್ ಭವನದ ಬಳಿ ಬೆಂಕಿ; ಕಾರ್ಮಿಕರು ಪಾರು

ನವದೆಹಲಿ, ಮೇ 16– ಸೆಂಟ್ರಲ್ ದೆಹಲಿಯ ಸಂಸತ್ ಭವನದ ಬಳಿ ಸೆಂಟ್ರಲ್ ವಿಸ್ತಾ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರಿಗಾಗಿ ನಿರ್ಮಿಸಲಾಗಿರುವ ಮೂರು ತಾತ್ಕಾಲಿಕ ವಸತಿ ಕೇಂದ್ರಗಳಲ್ಲಿ ಸೋಮವಾರ ಬೆಂಕಿ ಕಾಣಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಘಟನೆಯಲ್ಲಿ ಯಾವುದೇ ಕಾರ್ಮಿಕರು ಗಾಯಗೊಂಡ ಬಗ್ಗೆ ವರದಿಯಾಗಿಲ್ಲ. ಹೆಚ್ಚಿನ ಭದ್ರತೆ ಇರುವ ಪ್ರದೇಶದಲ್ಲಿ ಇಂದು ಸಂಜೆ 4-16ರ ಸುಮಾರಿನಲ್ಲಿ ಬೆಂಕಿ ಕಾಣಿಸಿಕೊಂಡ ಮಾಹಿತಿ ತಿಳಿದ ಬಳಿಕ ಐದು ಅಗ್ನಿ ಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆ ನಡೆಸಿದ್ದಾಗಿ ಅಗ್ನಿಶಾಮಕ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ. ಆಕಸ್ಮಿಕ ಬೆಂಕಿಯಿಂದಾಗಿ ವಸತಿ ಕೇಂದ್ರಗಳಲ್ಲಿದ್ದ ದಿನಬಳಕೆಯ ವಸ್ತುಗಳು ಹಾನಿಯಾಗಿದ್ದು, ಸಂಜೆ 4.55 ರ ಸುಮಾರಿನಲ್ಲಿ ಬೆಂಕಿಯನ್ನು ನಿಯಂತ್ರಿಸಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ದಾಖಲಾತಿ ಹೆಚ್ಚಳಕ್ಕೆ ಕಲಿಕಾ ಚೇತರಿಕೆ ಕಾರ್ಯಕ್ರಮ ಆಯೋಜನೆ

ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಮಚಂದ್ರರಾಜೇ ಅರಸ್



ನಂಜನಗೂಡು, ಮೇ 16– ಸಂತಸದಾಯಕ ಕಲಿಕಾ ವಾತಾವರಣ ನಿರ್ಮಿಸುವ ಮೂಲಕ ಸರ್ಕಾರಿ ಶಾಲೆಗಳ ದಾಖಲಾತಿ ಹೆಚ್ಚಿಸುವ ಸಲುವಾಗಿ ಕಲಿಕಾ ಚೇತರಿಕೆ ಕಾರ್ಯಕ್ರಮ ಹಮ್ಮಿಕೊಂಡು ವಿದ್ಯಾರ್ಥಿಗಳನ್ನು ಶಾಲೆಗಳತ್ತ ಬರಮಾಡಿಕೊಳ್ಳಲಾಗುತ್ತಿದೆ ಎಂದು ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದರು.

ನಗರದ ಬಾಲಕರ ಜ್ಯೂನಿಯರ್ ಕಾಲೇಜಿನಲ್ಲಿ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಲಿಕಾ ಚೇತರಿಕೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸ್ವಾಗತಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲೂ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಸಲುವಾಗಿ ಸರ್ಕಾರ ಅನೇಕ ಸೌಲಭ್ಯ ನೀಡಿದೆ. ಸರ್ಕಾರಿ ಶಾಲೆಯಲ್ಲೂ ಉತ್ತಮ ಕಲಿಕಾ ವಾತಾವರಣವಿದ್ದು, ಶಾಲೆಗಳು ಉತ್ತಮ ಕಟ್ಟಡ, ಮೂಲ ಸೌಕರ್ಯಗಳನ್ನು ಹೊಂದಿವೆ. ಜೊತೆಗೆ ನುರಿತ ಶಿಕ್ಷಕರಿದ್ದಾರೆ. ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಲಿದ್ದು ಪೋಷಕರು ನಮ್ಮನ್ನು ನಂಬಿ ಸರ್ಕಾರಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಿ ಎಂದು ಮನವಿ ಮಾಡಿದರು.

ಶಿಕ್ಷಕರ ಕೊರತೆ ನೀಗಿಸಲು ಈಗಾಗಲೇ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಜೊತೆಗೆ ಬಿಸಿಯೂಟ, ಶಾಲಾ ಪುಸ್ತಕಗಳನ್ನು ವಿತರಣೆ ಮಾಡಲಾಗಿದೆ. ಕೊರೊನಾದಿಂದಾಗಿ ಕಳೆದ 2 ವರ್ಷದಿಂದ ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆಯಾಗಿತ್ತು. ಅದನ್ನು ಸರಿದೂಗಿಸಿಕೊಳ್ಳುವ ಜೊತೆಗೆ ಪ್ರಸಕ್ತ ವರ್ಷದ ಶೈಕ್ಷಣಿಕ ಪಾಠ ಕಲಿಸುವ ಗುರಿ ಹೊಂದಲಾಗಿದೆ ಎಂದರು.

ಬಿಇಓ ರಾಜು ಮಾತನಾಡಿ, ಸರ್ಕಾರಿ ಶಾಲೆಗಳ 2 ಸಾವಿರ ವಿದ್ಯಾರ್ಥಿಗಳನ್ನು ಸೇರಿಸಿ ಜಾಥಾ ನಡೆಸಲಾಗಿದೆ. ಶಿಕ್ಷಣ ಇಲಾಖೆ ಪ್ರಮುಖ ಕಾರ್ಯ ಚಟುವಟಿಕೆ ಮತ್ತು ಸೌಲಭ್ಯಗಳ ಬಗ್ಗೆ ಟ್ಯಾಬ್ಲೋ ನಿರ್ಮಿಸಲಾಗಿದೆ. ಈ ಟ್ಯಾಬ್ಲೋ ಎಲ್ಲಾ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ತೆರಳಿದೆ. ವಿದ್ಯಾರ್ಥಿಗಳನ್ನು ಶಾಲೆಗಳಿಗೆ ಆಕರ್ಷಿಸಲು ವಿವಿಧ ಕಾರ್ಯಕ್ರಮ ಹಮ್ಮಿಕೊಂಡು ಪ್ರಚಾರ ನಡೆಸಲಾಗುತ್ತಿದೆ ಎಂದರು.

ಇದಕ್ಕೂ ಮುನ್ನ ವಿದ್ಯಾರ್ಥಿಗಳನ್ನು ಗಾರುಡಿ ಗೊಂಬೆ, ನಗಾರಿ, ಕಲಾತಂಡಗಳೊಂದಿಗೆ ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಿ ಶಾಲೆಗಳಿಗೆ ಬರಮಾಡಿಕೊಳ್ಳಲಾಯಿತು. ನಂತರ ಶಾಲಾ ಕಲಿಕಾ ಪ್ರಕ್ರಿಯೆಯನ್ನು ಆಸಕ್ತಿದಾಯವಾಗಿಸಲು ಬುಗುರಿ ಸೇರಿದಂತೆ ದೇಶಿ ಆಟಗಳನ್ನು ಆಡಿ ಸಂತಸಪಟ್ಟರು.

ಈ ವೇಳೆ ತಹಸೀಲ್ದಾರ್ ಎಂ.ಶಿವಮೂರ್ತಿ, ಮಲ್ಲಿಕಾರ್ಜುನಸ್ವಾಮಿ, ಶಿವಕುಮಾರ್, ಮಹೇಶ್, ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮರತ್ನಾಕರ, ಸತೀಶ್ ದಳವಾಯಿ, ಗೋಪಾಲಗೌಡ, ಲೀಲಾ, ಮುದ್ದು ಮಾದೇಗೌಡ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಹಂಪಾಪುರ ಗ್ರಾಪಂ ಅಧ್ಯಕ್ಷೆ, ಉಪಾಧ್ಯಕ್ಷೆ ಆಯ್ಕೆ



ಹಂಪಾಪುರ, ಮೇ 16(ರಾಜೇಶ್)– ಹಂಪಾಪುರ ಗ್ರಾಪಂ ನೂತನ ಅಧ್ಯಕ್ಷರಾಗಿ ಪ್ರೇಮ, ಉಪಾಧ್ಯಕ್ಷರಾಗಿ ಎಂ.ಎ.ಶೀಲಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಂಚಾಯಿತಿಯ ಒಟ್ಟು 17 ಸದಸ್ಯರ ಒಪ್ಪಿಗೆ ಮೇರೆಗೆ ಅವಿರೋಧವಾಗಿ ಪ್ರೇಮ ಅವರನ್ನು ಅಧ್ಯಕ್ಷೆಯಾಗಿ, ಶೀಲಾ ಅವರನ್ನು ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಇವರಿಬ್ಬರ ಆಯ್ಕೆಯನ್ನು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಪಿಡಬ್ಲ್ಯೂಡಿ ಇಲಾಖೆಯ ಬಸವರಾಜು ಘೋಷಿಸಿದರು. ನೂತನ ಅಧ್ಯಕ್ಷೆ ಪ್ರೇಮ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು. ಈ ವೇಳೆ ತಾಪಂ ಸದಸ್ಯ ಸಿದ್ದರಾಜು, ಪಿಡಿಓ ಸೌಮ್ಯ, ಮುಖಂಡರಾದ ಕುಮಾರ್, ಕುಂಟೇಗೌಡ, ಬೋರಪ್ಪ, ಗ್ರಾಪಂ ಸಿಬ್ಬಂದಿ ವರ್ಗ ಮತ್ತಿತರರಿದ್ದರು.

ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಮೈ.ವಿ.ರವಿಶಂಕರ್ ಪರ ಪ್ರಚಾರ



ತಿ.ನರಸೀಪುರ, ಮೇ 16(ಎಸ್‌ಕೆ)– ಭಾರತವನ್ನು ಸಶಕ್ತವಾಗಿ ಕಟ್ಟಿ ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಾಪಿಸಿ, ಯುವಕರಿಗೆ ಉಜ್ವಲ ಅವಕಾಶ ಒದಗಿಸುತ್ತಿರುವ ಪ್ರಧಾನಿ ಮೋದಿ ಸರ್ಕಾರವನ್ನು ಮತ್ತಷ್ಟು ಬಲಿಷ್ಠಗೊಳಿಸಲು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಗೆಲುವು ಅಗತ್ಯ ಎಂದು ವರುಣಾ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ವತಿಯಿಂದ ವಾಜಮಂಗಲ, ವರುಣಾ, ಮೊಸಂಬಾಯನಹಳ್ಳಿ ಗ್ರಾಪಂಗಳಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಪದವೀಧರ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿ ಮಾತನಾಡಿದರು.

ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಲಾಗಿದೆ. ಇದರಲ್ಲಿ ಭಾರತೀಯ ಸಂಸ್ಕೃತಿ ಅಡಕವಾಗಿದೆ. ಶೈಕ್ಷಣಿಕ ಕ್ರಾಂತಿಯಲ್ಲಿ ಪ್ರಾದೇಶಿಕ ಭಾಷೆಗಳಿಗೆ ಮಹತ್ವದ ಸ್ಥಾನ ನೀಡಲಾಗಿದೆ. ದಕ್ಷ ನೀತಿಗಳ ಮೂಲಕ ದೇಶವನ್ನು ಜಾಗತಿಕ ಉತ್ಪಾದನಾ ವಲಯವಾಗಿ ಪ್ರಧಾನಿ ಮೋದಿ ಅಭಿವೃದ್ಧಿ ಪಡಿಸುತ್ತಿದ್ದಾರೆ. ಹೀಗಾಗಿ ಭಾರತವನ್ನು ಮತ್ತಷ್ಟು ಬಲಿಷ್ಠವಾಗಿ ನಿರ್ಮಾಣ ಮಾಡಲು ಬಿಜೆಪಿ ಅಭ್ಯರ್ಥಿ ಬೆಂಬಲಿಸುವಂತೆ ಮತದಾರರಿಗೆ ಕರೆ ನೀಡಿದರು. ಈ ವೇಳೆ ವರುಣಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗುನಾಯಕ, ಮಂಜುನಾಥ್, ವಾಜಮಂಗಲ ಮಂಜುನಾಥ, ಮಹೇಶ, ಗಜೇಂದ್ರ ಹಾಗೂ ಪಕ್ಷದ ಮುಖಂಡರು ಹಾಜರಿದ್ದರು.

ಹುಣಸೂರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ




ಹುಣಸೂರು, 16(ಕೆಕೆ)– ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ಮಾರಿಸ್ ಸ್ಪಿನ್ನರ್ಸ್ ಕಾರ್ಖಾನೆ ಆವರಣದಲ್ಲಿ ಕಾನೂನು ಸೇವೆಗಳ ಸಮಿತಿ, ಅಭಿಯೋಜನಾ ಇಲಾಖೆ, ವಕೀಲರ ಸಂಘ, ಕಾರ್ಮಿಕ ಇಲಾಖೆ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಆಯೋಜಿಸಲಾಗಿತ್ತು.

ಜಿಲ್ಲಾ ಕಾರ್ಮಿಕರ ಇಲಾಖೆಯ ಸಹಾಯಕ ಆಯುಕ್ತೆ ನಾಜೀಯಾ ಸುಲ್ತಾನಾ ಮಾತನಾಡಿ, ಮೈಸೂರು ಜಿಲ್ಲೆಯ ಸರಗೂರು ಮತ್ತು ಸಾಲಿಗ್ರಾಮದಲ್ಲಿ 2 ಕಚೇರಿ ತೆರೆಯಲಾಗಿದ್ದು, ಎಲ್ಲಾ ಅಸಂಘಟಿತ ಕಾರ್ಮಿಕರು, ಜನಸಾಮಾನ್ಯರು ಈ ಕಚೇರಿಗಳಿಗೆ ಭೇಟಿ ನೀಡಿ ಸರ್ಕಾರದ ಮಾಹಿತಿ, ಸೌಲಭ್ಯವನ್ನು ಪಡೆದುಕೊಂಡು ನೋಂದಣಿ ಮಾಡಿಕೊಳ್ಳಬಹುದು. ಲಕ್ಷಾಂತರ ಕಾರ್ಮಿಕರು ಈ ಸರ್ಕಾರದ ಸೌಲಭ್ಯವನ್ನು ಪಡೆದುಕೊಳ್ಳುತ್ತಿಲ್ಲ ಎಂದು ವಿಷಾದಿಸಿದರು. ಜನರ ಸಹಕಾರದಿಂದ ಇಲಾಖೆಯಲ್ಲಿ ಅಧಿಕಾರಿಗಳು ಕೆಲಸ ಮಾಡಲು ಸಾಧ್ಯ. ಕೇವಲ ಅಧಿಕಾರಿಗಳನ್ನೇ ದೂರುವುದು ಸರಿ ಯಲ್ಲ. ಕಾರ್ಮಿಕರ ಇಲಾಖೆಯಲ್ಲಿ ಹೊಸ ದಾಗಿ ಇ–ಶ್ರಮ್ ಯೋಜನೆ ಜಾರಿಗೆ ಬಂದಿದ್ದು, 368 ಬಗೆಯ ವೃತ್ತಿಯನ್ನು ಮಾಡುವವರು ಈ ಯೋಜನೆ ಪಡೆಯಲು ಅರ್ಹರಾಗಿರುತ್ತಾರೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಯೋಗಣ್ಣೇ ಗೌಡ, ವಕೀಲರ ಸಂಘದ ಉಪಾಧ್ಯಕ್ಷ ಬಿ.ಸಿ ಸುಂದರೇಶ್, ವಕೀಲ ದಿನೇಶ್, ಅಶೋಕ, ಹುಣಸೂರು ಕಾರ್ಮಿಕ ನಿರೀಕ್ಷಕರು ಟಿ.ವಿ ಲಕ್ಷ್ಮೀಶ, ರಾಜೇಶ್, ಮಾರಿಸ್ ಸ್ಪಿನ್ನರ್ಸ್ ಕಾರ್ಖಾನೆಯ ಮ್ಯಾನೇಜರ್ ಆರ್.ತಂಗಮಾರಿಯಪ್ಪನ್, ಬಾಲು ಹಾಜರಿದ್ದರು.

ಪದವೀಧರರ ಚುನಾವಣೆಯಲ್ಲಿ ಮೈ.ವಿ.ರವಿಶಂಕರ್ ಬೆಂಬಲಿಸಿ

ಶಾಸಕ ಬಿ.ಹರ್ಷವರ್ಧನ್ ಮನವಿ



ಮಲ್ಲುಂಡಿ, ಮೇ 16(ಚನ್ನಪ್ಪ)– ಪಕ್ಷ ಸಂಘಟನೆಯಲ್ಲಿ ತೊಡಗಿರುವ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬೆಂಬಲಿಸುವಂತೆ ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ಇಲ್ಲಿನ ಹೆಡಿಯಾಲ, ದೇವರಾಯಶೆಟ್ಟಿಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಪದವೀಧರ ಕ್ಷೇತ್ರದ ಅಭ್ಯರ್ಥಿ ಮೈ.ವಿ. ರವಿಶಂಕರ್ ಪರ ಮತಯಾಚಿಸಿ ಮಾತನಾಡಿದ ಅವರು, ಮೈ.ವಿ.ರವಿಶಂಕರ್ ಕಳೆದ ಬಾರಿ ಅತ್ಯಲ್ಪ ಮತಗಳಿಂದ ಸೋತರೂ ಮನೆಯಲ್ಲಿ ಕೂರದೆ ನಿರಂತರವಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಪಕ್ಷ ಸಂಘಟನೆ ಮೆಚ್ಚಿ ಪಕ್ಷ 2ನೇ ಬಾರಿಗೆ ಅವರಿಗೆ ಟಿಕೆಟ್ ನೀಡಿ ಅವಕಾಶ ಕಲ್ಪಿಸಿಕೊಟ್ಟಿದೆ. ಪ್ರಾಮಾಣಿಕರಾದ ಇಂತಹವರನ್ನು ಆಯ್ಕೆ ಮಾಡಿದರೆ ಶಿಕ್ಷಣ ಕ್ಷೇತ್ರಕ್ಕೆ ಅನುಕೂಲವಾಗುತ್ತದೆ. ಕಳೆದ ಬಾರಿ ನಮ್ಮ ಸರ್ಕಾರ ಇರಲಿಲ್ಲ. ಈ ಬಾರಿ ಕೇಂದ್ರ ಹಾಗೂ ರಾಜ್ಯದಲ್ಲಿ ನಮ್ಮ ಬಿಜೆಪಿ ಸರ್ಕಾರವಿದೆ. ಆದ್ದರಿಂದ ಈ ಬಾರಿ ಮೈ.ವಿ.ರವಿಶಂಕರ್ ಗೆಲುವು ಖಚಿತ ಎಂದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪರ ಯೋಜನೆಗಳನ್ನು ಪಕ್ಷದ ಕಾರ್ಯಕರ್ತರು ತಾಲೂಕಿನ ಪ್ರತಿ ಗ್ರಾಮದ ಮನೆ ಮನೆಗಳಿಗೆ ತಲುಪಿಸುವ ಮೂಲಕ ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಬೇಕು ಎಂದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಪಿ. ಮಹೇಶ್, ರಾಜ್ಯ ಎಸ್ಟಿ ಮೋರ್ಚಾ ಉಪಾಧ್ಯಕ್ಷ ಚಿಕ್ಕರಂಗನಾಯಕ, ಮುಖಂಡರಾದ ಸುಬ್ಬಣ್ಣ, ಶಂಕರ್, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್. ಮಹದೇವಪ್ಪ, ರಂಗಸ್ವಾಮಿ, ಶಿವ ನಾಗಪ್ಪ, ಎಸ್.ಬಸವರಾಜ್, ಶಿವರುದ್ರ ಇತರರಿದ್ದರು.

ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ, ಶ್ರೀಪ್ರಸನ್ನಾನಂದ ಸ್ವಾಮೀಜಿ ಬೆಂಬಲಿಸಿ

ಮೇ 20ರಂದು ಕೋಟೆಯಲ್ಲಿ ಬೃಹತ್ ಪ್ರತಿಭಟನೆ




ಹೆಚ್.ಡಿ.ಕೋಟೆ, ಮೇ 16(ಮಂಜು)– ಪರಿಶಿಷ್ಟ ಜಾತಿ ಹಾಗೂ ವರ್ಗದವರ ಮೀಸಲಾತಿ ಹೆಚ್ಚಳಕ್ಕಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕಳೆದ 96 ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿರುವ ರಾಜನಹಳ್ಳಿ ಮಠದ ಶ್ರೀಪ್ರಸನ್ನಾನಂದ ಸ್ವಾಮೀಜಿ ಅವರನ್ನು ಬೆಂಬಲಿಸಿ ಮೇ 20 ರಂದು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ನಾಯಕರ ಸಂಘದ ಪ್ರಧಾನ ಕಾರ್ಯದರ್ಶಿ ಕ್ಯಾತನಹಳ್ಳಿ ನಾಗರಾಜು ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2017–18ರಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭ ಸರ್ಕಾರದ ಆದೇಶದ ಮೇರೆಗೆ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಸಮಿತಿ ರಚನೆಯಾಗಿತ್ತು. ಈ ವೇಳೆ ಅವರು ಜನಸಂಖ್ಯೆಗೆ ಅನುಗುಣವಾಗಿ ಶೇ.15ರಷ್ಟು ಮೀಸಲಾತಿ ಇರುವ ಪರಿಶಿಷ್ಟ ಪಂಗಡಕ್ಕೆ ಇನ್ನೂ ಶೇ.3ರಷ್ಟು ಮೀಸಲಾತಿ ಹೆಚ್ಚಿಸುವ ಮೂಲಕ ಶೇ.18ಕ್ಕೆ ಮೀಸಲಾತಿ ಏರಿಸಬೇಕು. ಅದೇ ರೀತಿ ಪರಿಶಿಷ್ಟ ಪಂಗಡಕ್ಕೆ ಶೇ.3ರಷ್ಟು ಮೀಸಲಾತಿ ಇದ್ದು, ಶೇ.4.50 ರಷ್ಟು ಮೀಸಲಾತಿ ಹೆಚ್ಚಿಸುವ ಮೂಲಕ ಮೀಸಲಾತಿಯನ್ನು ಶೇ.7.5ಕ್ಕೆ ಏರಿಸಬೇಕು ಎಂದು ವರದಿ ನೀಡಿದ್ದಾರೆ. ಆದರೆ ಅವರ ವರದಿಗೆ ಸರ್ಕಾರ ಇದುವರೆಗೂ ಯಾವುದೇ ಬೆಲೆ ಕೊಟ್ಟಿಲ್ಲ ಎಂದರು. ಮೀಸಲಾತಿ ಜಾರಿಗೆ ಒತ್ತಾಯಿಸಿ ಕಳೆದ 96 ದಿನಗಳಿಂದ ರಾಜನಹಳ್ಳಿ ಮಠದ ಶ್ರೀಪ್ರಸನ್ನಾನಂದ ಸ್ವಾಮೀಜಿಯವರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಹೀಗಾಗಿ ಅವರ ಧರಣಿ ಬೆಂಬಲಿಸಿ ಇದೇ ತಿಂಗಳ 20 ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಅಂದು ಪಟ್ಟಣದ ಶ್ರೀವರದರಾಜಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಹೊರಟು ಮಿನಿ ವಿಧಾನಸೌದದ ಮುಂಭಾಗ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಜಯಪ್ರಕಾಶ್ ಚಿಕ್ಕಣ್ಣ, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಬಾಬು ಜಗಜೀವನರಾಂ ವೇದಿಕೆ ಅಧ್ಯಕ್ಷ ನಾಗರಾಜು, ಎಸ್.ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ರಾಜನಾಯಕ, ಮುಖಂಡರಾದ ಕೃಷ್ಣ, ಗಣೇಶ್ ಇದ್ದರು.



ಮೈಸೂರು ತಾಲೂಕಿನ ಕಡಕೊಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲೆ ಪುನರಾರಂಭ ಪ್ರಯುಕ್ತ ವಿದ್ಯಾರ್ಥಿಗಳಿಗೆ ಹೂಗುಚ್ಛ ಹಾಗೂ ನೋಟ್‌ಬುಕ್, ಪೆನ್ ವಿತರಿಸಿ ಆರತಿ ಮಾಡುವ ಮೂಲಕ ಸ್ವಾಗತಿಸಲಾಯಿತು. ಈ ವೇಳೆ ದಿ ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕುಮಾರಸ್ವಾಮಿ, ಕನ್ನಡ ಗೆಳೆಯರ ಬಳಗದ ಅಧ್ಯಕ್ಷ ವಿಶ್ವನಾಥ್, ಮುಖ್ಯ ಶಿಕ್ಷಕ ದುಂಡಯ್ಯ, ದೈಹಿಕ ಶಿಕ್ಷಕ ಕುಮಾರ್, ಶಾಲಾ ಶಿಕ್ಷಕ ವರ್ಗ, ಶಾಲಾಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಪೋಷಕರು ಉಪಸ್ಥಿತರಿದ್ದರು.



ಶಾಸಕ ಸಾ.ರಾ.ಮಹೇಶ್ ಅವರ ತಂದೆ ನಿವೃತ್ತ ಉಪನ್ಯಾಸಕ ಎಸ್.ಆರ್.ರಾಮೇಗೌಡರ 84ನೇ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಲಾಯಿತು. ಈ ವೇಳೆ ಜಿಪಂ ಮಾಜಿ ಹಂಗಾಮಿ ಅಧ್ಯಕ್ಷ ಸಾ.ರಾ.ನಂದೀಶ್, ಸಾರಾ ವಿದ್ಯಾಸಂಸ್ಥೆ ಕಾರ್ಯದರ್ಶಿ ಸಾ.ರಾ.ರವೀಶ್, ಜೆಡಿಎಸ್ ಮುಖಂಡರಾದ ಮು.ರಾ.ಹರ್ಷಕುಮಾರಗೌಡ, ನಾಗೇಂದ್ರ ಇತರರಿದ್ದರು.

ಹಿಂಡಗೂಡ್ಲು ಡೇರಿ ಅಧ್ಯಕ್ಷರಾಗಿ ರಾಮೇಗೌಡ ಆಯ್ಕೆ

ಹನಗೋಡು, ಮೇ 16(ಮಹೇಶ್)– ಹಿಂಡಗೂಡ್ಲು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ರಾಮೇಗೌಡ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಪುಟ್ಟೇಗೌಡ, ರಾಮಕೃಷ್ಣೇಗೌಡ, ಪುಷ್ಪ ಮಾವಳಿಗೌಡ, ಅಕ್ಕಯಮ್ಮ, ಯೋಗೇಶ್, ಚಂದ್ರು, ಮಂಜು, ವೆಂಕಟೇಶ್, ಸೋಮಶೇಖರ್, ಕಾರ್ಯದರ್ಶಿ ಹೆಚ್.ಜೆ.ರಾಜು ಮತ್ತು ಗ್ರಾಮದ ಮುಖಂಡರು ಹಾಜರಿದ್ದರು.

ಚಿನ್ನಸ್ವಾಮಿ ನಿಧನ



ಸುತ್ತೂರು, ಮೇ 16– ನಂಜನಗೂಡು ತಾಲೂಕಿನ ಬೀರಿಹುಂಡಿ ಗ್ರಾಮದ ಕಾಂಗ್ರೆಸ್ ಮುಖಂಡ ಚಿನ್ನಸ್ವಾಮಿ(48) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ

ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ ಸಂಸ್ಥಾಪಕರ ಅಸ್ಥಿ ವಿಸರ್ಜನೆ

ಅಸ್ಥಿ ವಿಸರ್ಜಿಸಿದ ವಿದ್ಯಾಸಂಸ್ಥೆ ಅಧ್ಯಕ್ಷರೂ ಆದ ಶಾಸಕ ಸಿ.ಎಸ್.ನಿರಂಜನ್ ಕುಮಾರ್



ತಿ.ನರಸೀಪುರ, ಮೇ 16(ಎಸ್‌ಕೆ)– ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಪಟ್ಟಣದ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ ಸಂಸ್ಥಾಪಕ ಟಿ.ಎಸ್.ಸುಬ್ಬಣ್ಣನವರ ಅಸ್ತಿಯನ್ನು ಸೋಮವಾರ ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ವಿಸರ್ಜಿಸಲಾಯಿತು.

ಶಿಕ್ಷಣ ಸಂಸ್ಥೆ ಅಧ್ಯಕ್ಷರೂ ಆದ ಗುಂಡ್ಲುಪೇಟೆ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕ–ಶಿಕ್ಷಕಿಯರು ಅಸ್ತಿ ವಿಸರ್ಜನೆ ಕಾರ್ಯದಲ್ಲಿ ಭಾಗವಹಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಿದರು.

ಶಿಕ್ಷಣ ಸಂಸ್ಥೆ ಸಂಸ್ಥಾಪಕ ಟಿ.ಎಸ್. ಸುಬ್ಬಣ್ಣನವರು 1991ರಲ್ಲೇ ಮೃತಪಟ್ಟಿದ್ದರೂ, ಸ್ವಲ್ಪ ಅಸ್ತಿಯನ್ನು ಸಂರಕ್ಷಿಸಿಡಲಾಗಿತ್ತು ಇಂದು ಬುದ್ಧ ಪೌರ್ಣಿಮೆ ಹಿನ್ನೆಲೆಯಲ್ಲಿ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದ ತ್ರಿವೇಣಿ ಸಂಗಮದ ನಡುಹೊಳೆ ಬಸವನ ಸ್ಥಳದಲ್ಲಿ ಶಾಸಕ ನಿರಂಜನ್ ಕುಮಾರ್ ಭಕ್ತಿ ಪೂರ್ವಕವಾಗಿ ಅಸ್ಥಿ ವಿಸರ್ಜಿಸಿದರು. ಮೊದಲು ತ್ರಿವೇಣಿ ಸಂಗಮದಲ್ಲಿ ಅಸ್ತಿಗೆ ಪೂಜೆ ಸಲ್ಲಿಸಲಾಯಿತು. ನಂತರ ಅಸ್ತಿ ವಿಸರ್ಜಿಸಲಾಯಿತು.

ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿ, ಸಬರಮತಿ ಆಶ್ರಮದಲ್ಲಿ ಮಹಾತ್ಮ ಗಾಂಧೀಜಿಯವರೊಂದಿಗೆ ಒಡನಾಟ ಹೊಂದಿದ್ದ ಟಿ.ಎಸ್.ಸುಬ್ಬಣ್ಣರವರು ಗಾಂಧೀಜಿಯವರ ಪ್ರೇರಣೆಯಿಂದ ಮೈಸೂರಿಗೆ ವಾಪಸ್ ಬಂದು ಬಡ ಮಕ್ಕಳಿಗೆ ಶಿಕ್ಷಣ ನೀಡಬೇಕೆನ್ನುವ ಉದ್ದೇಶದಿಂದ ಶಾಲೆ ಮತ್ತು ಹಾಸ್ಟೆಲ್‌ಗಳನ್ನು ಆರಂಭಿಸಿದರಾದರೂ, ಶಾಲೆಗಳನ್ನು ನಡೆಸಲು ಅವರ ಬಳಿ ಯಾವುದೇ ಆದಾಯ ಇರಲಿಲ್ಲ. ದೇಣಿಗೆ ಸಂಗ್ರಹಿಸಿ ಶಾಲೆಗಳನ್ನು ಬಹು ದೊಡ್ಡ ಮಟ್ಟಕ್ಕೆ ಬೆಳೆಸಿದ್ದಾರೆ. ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ 11 ಕಡೆ ಶಾಲೆ ಹಾಗೂ 2 ಕಡೆ ಹಾಸ್ಟೆಲ್‌ಗಳನ್ನು ತೆರೆದ ಕೀರ್ತಿ ಅವರದ್ದಾಗಿದೆ. 1991ರಲ್ಲಿ ಸುಬ್ಬಣ್ಣನವರು ಕಾಲವಾದ ನಂತರ ಸ್ವಲ್ಪ ಪ್ರಮಾಣದಲ್ಲಿ ಅವರ ಅಸ್ತಿ ಇಟ್ಟುಕೊಂಡು ಅವರ ಪ್ರತಿಮೆ ನಿರ್ಮಿಸಿ ಅದರ ತಳಭಾಗದಲ್ಲಿ ಅಸ್ತಿ ಇಡುವ ಉದ್ದೇಶ ಹೊಂದಲಾಗಿತ್ತು. ಆದರೆ ನಂತರದ ದಿನಗಳಲ್ಲಿ ಅಸ್ತಿ ವಿಸರ್ಜನೆ ಮಾಡಬೇಕೆಂಬ ಅಭಿಪ್ರಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಶಾಲಾ ಆಡಳಿತ ಮಂಡಳಿ, ಶಿಕ್ಷಕ ವರ್ಗದವರ ತೀರ್ಮಾನದಂತೆ ಇಂದು ತ್ರಿವೇಣಿ ಸಂಗಮದಲ್ಲಿ ಅಸ್ಥಿ ವಿಸರ್ಜಿಸಿ ಅವರ ಆತ್ಮಕ್ಕೆ ಶಾಂತಿ ಕೋರಿದ್ದೇವೆ ಎಂದರು.

ಪಂಜಾಬ್ ವಿರುದ್ಧ ಡೆಲ್ಲಿಗೆ ಜಯ



ಮುಂಬೈ, ಮೇ 16– ಮಿಚೆಲ್ ಮಾರ್ಷ್ ಅರ್ಧಶತಕ, ಬೌಲರ್‌ಗಳ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ಪಂಜಾಬ್ ಕಿಂಗ್ಸ್ ವಿರುದ್ಧ 17 ರನ್‌ಗಳ ಜಯ ದಾಖಲಿಸಿದೆ.

ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿತು. ತಂಡದ ಪರ ಮಿಚೆಲ್ ಮಾರ್ಷ್ 63, ಲಲಿತ್ ಯಾದವ್ 24, ಸರ್ಫರಾಜ್ ಖಾನ್ 32, ಅಕ್ಷರ್ ಪಟೇಲ್ 17 ರನ್ ಗಳಿಸಿದರು. ತಂಡದ ಪರ ಲಿಯಾಮ್ ಲಿವಿಂಗ್‌ಸ್ಟೋನ್, ಅರ್ಶದೀಪ್ ಸಿಂಗ್ ತಲಾ 3, ರಬಾಡ 1 ವಿಕೆಟ್ ಪಡೆದರು. ಬಳಿಕ 160 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 9 ವಿಕೆಟ್ ನಷ್ಟಕ್ಕೆ 142 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ಜಾನಿ ಬೇಸ್ಟೋವ್ 28, ಶಿಖರ್ ಧವನ್ 19, ಜಿತೇಶ್ ಶರ್ಮಾ 44, ರಾಹುಲ್ ಚಹರ್ 25 ರನ್ ಗಳಿಸಿದರು. ಡೆಲ್ಲಿ ಪರ ಶಾರ್ದೂಲ್ ಠಾಕೂರ್ 4, ಅಕ್ಷರ್ ಪಟೇಲ್, ಕುಲದೀಪ್ ಯಾದವ್ ತಲಾ 2, ಅನ್ರಿಚ್ ನಾರ್ಟ್ಜೆ 1 ವಿಕೆಟ್ ಪಡೆದರು. ಶಾರ್ದೂಲ್ ಠಾಕೂರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಮೈಸೂರು ತಾಲೂಕಿನ ಮಾವಿನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಶಾಲಾ ಪ್ರಾರಂಭೋತ್ಸವ, ವಿದ್ಯಾ ಪ್ರವೇಶ ಹಾಗೂ ಕಲಿಕಾ ಚೇತರಿಕೆ ಕಾರ್ಯಕ್ರಮ ನಡೆಯಿತು. ಈ ವೇಳೆ ಗ್ರಾಪಂ ಸದಸ್ಯೆ ಸಣ್ಣತಾಯಮ್ಮ, ಎಸ್‌ಡಿಎಂಸಿ ಅಧ್ಯಕ್ಷ ದೊಡ್ಡನಾಯಕ, ಮುಖ್ಯ ಶಿಕ್ಷಕಿ ನಾಗಲತಾ, ಶಿಕ್ಷಕರಾದ ಕಲ್ಪನಾ, ಬನಶಂಕರಿ, ವಿಜಯಲಕ್ಷ್ಮೀ, ಸವಿತಾ ಇದ್ದರು.

ಬುದ್ಧ ಪೂರ್ಣಿಮೆ: ಲುಂಬಿನಿಗೆ ಮೋದಿ ಭೇಟಿ

ಬೌದ್ಧ ಸಂಸ್ಕೃತಿ ಕೇಂದ್ರಕ್ಕೆ ಶಂಕುಸ್ಥಾಪನೆ



ಲುಂಬಿನಿ, ಮೇ 16– ನೇಪಾಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿಯವರು ಬುದ್ಧನ ಜನ್ಮಸ್ಥಳವಾದ ಲುಂಬಿನಿಗೆ ಸೋಮವಾರ ಭೇಟಿ ನೀಡಿದ್ದು, ಈ ವೇಳೆ ಬೌದ್ಧ ಸಂಸ್ಕೃತಿ ಮತ್ತು ಪರಂಪರೆಯ ಕೇಂದ್ರ ನಿರ್ಮಾಣಕ್ಕೆ ಶಂಕುಸ್ಥಾಪನೆ ಕಾರ್ಯ ನೆರವೇರಿಸಿದ್ದಾರೆ.

ಹಾಲಿ ಅಂತರರಾಷ್ಟ್ರೀಯ ಬೌದ್ಧ ಒಕ್ಕೂಟಕ್ಕೆ (ಐಬಿಸಿ) ಸೇರಿದ ಜಾಗದಲ್ಲಿ ಬೌದ್ಧ ಸಂಸ್ಕೃತಿ ಮತ್ತು ಪರಂಪರೆಯ ಕೇಂದ್ರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದು, ಈ ವೇಳೆ ನೇಪಾಳದ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಕೂಡ ಇದ್ದರು.

ಇದಕ್ಕೂ ಮುನ್ನ, ಗುರು ಪೂರ್ಣಿಮೆ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಮತ್ತು ನೇಪಾಳದ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಹಾಗೂ ಅವರ ಪತ್ನಿ ಡಾ. ಅರ್ಜು ರಾಣಾ ದೇವುಬಾ ಅವರು ಮಾಯಾ ದೇವಿ ದೇವಾಲಯದ ಆವರಣದಲ್ಲಿರುವ ಬುದ್ಧನ ಜನ್ಮದ ಗುರುತು ಕಲ್ಲಿಗೆ ಗೌರವ ಸಲ್ಲಿಸಿದರು. ಇದನ್ನು ಭಗವಾನ್ ಬುದ್ಧನ ನಿಖರವಾದ ಜನ್ಮ ಸ್ಥಳ ಎಂದು ಗುರುತಿಸಲಾಗುತ್ತದೆ. ಈ ವೇಳೆ ಬೌದ್ಧ ವಿಧಿಗಳ ಪ್ರಕಾರ ಪೂಜೆ ನೆರವೇರಿಸಲಾಯಿತು.

ಈ ನಡುವೆ, ಉಭಯ ನಾಯಕರು ದೇವಾಲಯದ ಪಕ್ಕದಲ್ಲಿರುವ ಅಶೋಕ ಸ್ತಂಭದ ಬಳಿಯ ದೀಪಗಳನ್ನು ಬೆಳಗಿಸಿದರು. ಕ್ರಿಸ್ತ ಪೂರ್ವ 249 ರಲ್ಲಿ ಚಕ್ರವರ್ತಿ ಅಶೋಕನಿಂದ ಈ ಸ್ತಂಭವು ಸ್ಥಾಪಿಸಲ್ಪಟ್ಟಿದೆ. ಲುಂಬಿನಿಯು ಭಗವಾನ್ ಬುದ್ಧನ ಜನ್ಮಸ್ಥಳವಾಗಿದೆ ಎಂಬುದನ್ನು ಹೇಳುವ ಮೊದಲ ಶಿಲಾಶಾಸನವನ್ನು ಈ ಸ್ತಂಭ ಹೊಂದಿದೆ. ಇದೇ ವೇಳೆ, 2014ರಲ್ಲಿ ಮೋದಿ ಲುಂಬಿನಿ ವನಕ್ಕೆ ಕೊಡುಗೆಯಾಗಿ ನೀಡಿದ್ದ ಬೋಧಿವೃಕ್ಷದ ಸಸಿಗೆ ಉಭಯ ನಾಯಕರು ನೀರೆರೆದರು. ಈ ಕುರಿತಂತೆ ಚಿತ್ರ ಸಹಿತ ಪ್ರಧಾನಿ ಸಚಿವಾಲಯವು ಟ್ವೀಟ್ ಮಾಡಿದೆ. 2014ರಿಂದ ನೇಪಾಳಕ್ಕೆ ಪ್ರಧಾನಿಯವರ 5ನೇ ಭೇಟಿ ಇದಾಗಿದೆ. ಉತ್ತರ ಪ್ರದೇಶದ ಕುಶಿನಗರ ದಿಂದ ಭಾರತೀಯ ವಾಯುಪಡೆಯ ವಿಶೇಷ ಹೆಲಿಕಾಪ್ಟರ್‌ನಲ್ಲಿ ಮೋದಿ ಇಲ್ಲಿಗೆ ಆಗಮಿಸಿದರು.

ಹಠಾತ್ ತೆರೆದ ಕಾರಿನ ಬಾಗಿಲು; ಬೈಕ್ ಸವಾರನ ಕೈಗೆ ಕುತ್ತು

ಮೈಸೂರು, ಮೇ 16–ಹಠಾತ್ತನೆ ಕಾರಿನ ಬಾಗಿಲನ್ನು ತೆರೆದ ಪರಿಣಾಮ ಅದಕ್ಕೆ ಡಿಕ್ಕಿ ಹೊಡೆದು ಬೈಕ್ ಸವಾರರು ರಸ್ತೆಯಲ್ಲಿ ಬಿದ್ದಿದ್ದು, ಅದೇ ವೇಳೆ ಆ ಮಾರ್ಗವಾಗಿ



ಬಂದ ಖಾಸಗಿ ಬಸ್ ಹಿಂಬದಿ ಸವಾರನ ಕೈ ಮೇಲೆ ಹರಿದ ಘಟನೆ ಹೆಚ್.ಡಿ.ಕೋಟೆ ರಸ್ತೆ ಪೆಟ್ರೋಲ್ ಬಂಕ್ ಬಳಿ ಮೇ 12ರಂದು ಸಂಭವಿಸಿದೆ.

ಮೈಸೂರಿನ ಮಹದೇವಪುರ ನಿವಾಸಿ ಜೋಸೆಫ್ ಸ್ಟೀಫನ್ ಅವರು ತಮ್ಮ ಪುತ್ರ ಬೆನ್ನಿಯನ್ ಸ್ಯಾಮುಯಲ್ (15) ಜೊತೆ ಬಜಾಜ್ ಡಿಸ್ಕವರ್ ಬೈಕ್ (ಕೆಎ02 ಹೆಚ್‌ಡಬ್ಲ್ಯೂ 0150)ನಲ್ಲಿ ಬರುತ್ತಿದ್ದಾಗ ರಸ್ತೆ ಬದಿ ನಿಂತಿದ್ದ ಹುಂಡೈ ಕ್ರೆಟಾ ಕಾರ್‌ನ (ಕೆಎ 09 ಎಂಜಿ 8150) ಚಾಲಕ ಹಠಾತ್ತನೆ ಕಾರಿನ ಬಲಭಾಗದ ಬಾಗಿಲು ತೆಗೆದಿದ್ದು, ಅದಕ್ಕೆ ಬೈಕ್ ಡಿಕ್ಕಿಯಾಗಿ ಬಲಭಾಗಕ್ಕೆ ಬಿದ್ದಿದೆ. ಅದೇ ವೇಳೆ ಆ ಮಾರ್ಗವಾಗಿ ಬರುತ್ತಿದ್ದ ಖಾಸಗಿ ಬಸ್ (ಕೆಎ 19 ಎಬಿ 2162) ಹಿಂಬದಿ ಸವಾರರ ಬೆನ್ನಿಯನ್ ಸ್ಯಾಮುಯಲ್ ಬಲಗೈ ಮೇಲೆ ಹರಿದಿದ್ದು, ತೀವ್ರವಾಗಿ ಗಾಯಗೊಂಡಿರುವ ಆತ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕೆ.ಆರ್. ಸಂಚಾರ ಠಾಣೆಯಲ್ಲಿ ಮೇ 14 ರಂದು ಪ್ರಕರಣ ದಾಖಲಾಗಿದೆ.

ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಚಿನ್ನಾಭರಣವಿದ್ದ ಮಹಿಳೆ ಪರ್ಸ್ ಕಳವು

ಪರ್ಸ್ ಸಿಕ್ಕರೂ ಆಭರಣ, ನಗದು ನಾಪತ್ತೆ



ಮೈಸೂರು, ಮೇ 16– ಬಸ್ ಹತ್ತುತ್ತಿದ್ದ ಶಿಕ್ಷಕಿಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಪರ್ಸ್ ಅನ್ನು ಎಗರಿಸಿದ ಖದೀಮರು ಅದರಲ್ಲಿದ್ದ ಚಿನ್ನಾಭರಣ ಹಾಗೂ ನಗದು ತೆಗೆದುಕೊಂಡು ಅದನ್ನು ಬಸ್ ನಿಲ್ದಾಣದ ಪ್ಲಾಟ್‌ಫಾರಂನಲ್ಲಿ ಬಿಸಾಡಿ ಹೋದ ಘಟನೆ ಮೈಸೂರು ನಗರ ಬಸ್ ನಿಲ್ದಾಣದಲ್ಲಿ ನಡೆದಿದೆ.

ಮೈಸೂರಿನ ಶ್ರೀರಾಂಪುರ ನಿವಾಸಿ, ನಂಜನಗೂಡು ತಾಲೂಕು ಇಬ್ಜಾಲ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಶಶಿಕಲಾ (35) ಚಿನ್ನಾಭರಣ ಹಾಗೂ ನಗದು ಕಳೆದುಕೊಂಡವರಾಗಿದ್ದು, ಇವರು ಮೇ 13ರಂದು ಮಧ್ಯಾಹ್ನ ತಮ್ಮ ಇಬ್ಬರು ಮಕ್ಕಳೊಂದಿಗೆ ಶ್ರೀರಾಂಪುರಕ್ಕೆ ಹೋಗಲು ಮೈಸೂರು ನಗರ ಬಸ್ ನಿಲ್ದಾಣದ ಉದ್ಬೂರು ಪ್ಲಾಟ್‌ಫಾರಂನಲ್ಲಿ ಬಸ್ ಹತ್ತಿ ಕುಳಿತು ತಮ್ಮ ವ್ಯಾನಿಟಿ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿದ್ದ ಪರ್ಸ್ ನಾಪತ್ತೆಯಾಗಿತ್ತು ತಕ್ಷಣ ಬಸ್ ಇಳಿದು ಸುತ್ತಮುತ್ತಲು ಹುಡುಕಾಡಿದ ನಂತರ ಮನೆಗೆ ತೆರಳಿದರು.

ಅಂದು ಮಧ್ಯಾಹ್ನ 3.30ರ ಸುಮಾರಿನಲ್ಲಿ ವೃದ್ಧೆಯೊಬ್ಬರು ಕರೆ ಮಾಡಿ, ಸುತ್ತೂರು ಪ್ಲಾಟ್‌ಫಾರಂ ಬಳಿ ತಮಗೆ ಪರ್ಸ್ ದೊರೆತಿರುವುದಾಗಿ ಅದನ್ನು ತೆಗೆದುಕೊಂಡು ಹೋಗುವಂತೆಯೂ ತಿಳಿಸಿದ್ದಾರೆ. ಅದರಂತೆ ವೃದ್ಧೆಯ ಊರಾದ ಚೋರನಹಳ್ಳಿಗೆ ಹೋಗಿ ಪರ್ಸ್ ತೆಗೆದುಕೊಂಡು ಪರಿಶೀಲಿಸಿದಾಗ ಕೇವಲ ಆಧಾರ್‌ಕಾರ್ಡ್ ಜೆರಾಕ್ಸ್, ಪಾನ್‌ಕಾರ್ಡ್, ಎಟಿಎಂ ಕಾರ್ಡ್, ಚಿನ್ನಾಭರಣ ಗುರುತು ಚೀಟಿ ಮಾತ್ರ ಇದ್ದು, 10 ಗ್ರಾಂ ತೂಕದ ಚಿನ್ನದ ಉಂಗುರ ಮತ್ತು 500 ರೂ. ನಗದು ನಾಪತ್ತೆಯಾಗಿತ್ತು. ದೇವರಾಜ ಠಾಣೆಗೆ ದೂರು ಸಲ್ಲಿಸಿರುವ ಶಶಿಕಲಾ ಅವರು ತಮಗೆ ಪರ್ಸ್ ಹಿಂದಿರುಗಿಸಿದ ವೃದ್ಧೆಯ ಮೇಲೆ ಯಾವುದೇ ಅನುಮಾನವಿಲ್ಲ. ಬಸ್ ಹತ್ತುವಾಗ ಪರ್ಸ್ ಎಗರಿಸಿದ ಖದೀಮರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಕೋರಿದ್ದಾರೆ.